## ಎದುರಿಸುವದು

# ಜೀವನದ

## ಸರ್ಕಸ್!

ಯೇಸು ಕ್ರಿಸ್ತನೊಂದಿಗೆ ಅಪಾಯಗಳನ್ನು

# ಶಿಕ್ಷಕರ ಪುಸ್ತಕ

# ಜೀವನದ ಸರ್ಕಸ್!

ಪ್ರತಿದಿನ ದೊಡ್ಡದಾಗಿ ಮತ್ತು ಚಿಕ್ಕದಾಗಿ, ನಾವೆಲ್ಲರೂ ಎದ್ದೇಳುತ್ತೇವೆ ಮತ್ತು ಗೊತ್ತಿಲ್ಲದ ವಿಷಯಗಳ ಕಡೆಗೆ ಸಾಗುತ್ತೇವೆ. ನಮ್ಮ ಹೆದರಿಕೆಗಳು ನಮ್ಮನ್ನು 3-ವೃತ್ತಗಳ ಸರ್ಕಸ್‌ನಂತೆ ಬೆರಗುಗೊಳಿಸುತ್ತಾ, ನಮ್ಮನ್ನು ದುರ್ಬಲಪಡಿಸುವದಾಗಿ ಗಾಬರಿಪಡಿಸುತ್ತದೆ ಹಾಗೂ ನಾವು ನಮ್ಮ ಕನಸುಗಳನ್ನು ತ್ಯಜಿಸುವಂತೆ ಮಾಡುತ್ತದೆ.

ಆದರೆ ದೇವರು ನಮ್ಮ ವಿಷಯದಲ್ಲಿ ಅದ್ಭುತವಾದ ಯೋಜನೆಗಳನ್ನು ಮಾಡಿದ್ದಾನೆ, ಒಂದುವೇಳೆ ನಾವು ಜೀವನ ಎಂದು ಕರೆಯಲ್ಪಡುವ ಸರ್ಕಸ್‌ನೊಳಗೆಹೆಜ್ಜೆಯಿಡಲು ಮತ್ತು ಕೆಲವು ಅಪಾಯಗಳನ್ನು ಎದುರಿಸಲು ಮುಂದಾಗುವಾಗ ಮಾತ್ರವೇ ಅದು ಸಾಧ್ಯವಾಗುತ್ತದೆ.

ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟಾಗ ಎಲ್ಲಾ ರೀತಿಯ ಅಪಾಯಗಳನ್ನು ಎದುರಿಸುವದಕ್ಕೆ ಅತ್ಯುತ್ತಮವಾದ ಉದಾಹರಣೆಯನ್ನು ತೋರಿಸಿದ್ದಾನೆ.

ನಿಮ್ಮ ಹೆದರಿಕೆಗಳು ನಿಮ್ಮನ್ನು ತಡೆಯಲು ನೀವು ಅನುಮತಿಸುವಿರೋ? ಅಥವಾ ನನ್ನೊಂದಿಗೆ ಜೀವನ ಎಂದು ಕರೆಯಲ್ಪಡುವ ಸರ್ಕಸ್‌ನೊಳಗೆ ಧೈರ್ಯದಿಂದ ಹೆಜ್ಜೆಯಿಡಲು ಮುಂದಾಗುತ್ತೀರೋ?

"ನಾನೇ ನಿನ್ನೊಂದಿಗಿದ್ದೇನೆ, ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು ನಿನಗೆ ಸಹಾಯ ಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ"
ಯೆಶಾಯ 41:10

ಕ್ರಿಸ್ಟಿನಾ ಕ್ರಾಸ್ ವೈ ಎಲ್‌ಎನ್‌ಸಿ ಸಿಬ್ಬಂದಿ



Equip & Grow
ಮಕ್ಕಳೇ ಪ್ರಮುಖರು



# ಹುದುವಾದ ದೃಷ್ಟಿಕೋನ

| | ಸ್ಮಾರಕ ಚಿನ್ಹೆ | ಡೊಂಬರಾಟ |
|---|---|---|


## ಧ್ಯೇಯ 1

ಸಂತೋಷವಾಗಿರಿ!

ಗರಿಗಳ ಭಾನುವಾರ, ಲೂಕ 18:28-44

ಭಯ: ಬೇಕಾಗುವಷ್ಟು ಇಲ್ಲವಲ್ಲಾ ಎಂಬ ಭಯ





## ಧ್ಯೇಯ2

ಪ್ರಯತ್ನಿಸಿರಿ!

ಪೇತ್ರನು ಯೇಸು ಕ್ರಿಸ್ತನನ್ನು 3 ಸಲ ಅಲ್ಲಗಳೆದನು

ಲೂಕ 22:34,54-62

ಭಯ: ಸೋತುಹೋಗುವ ಅಥವಾ ತಪ್ಪುಗಳಾಗುವ ಭಯ





## ಧ್ಯೇಯ 3


ನೀವಾಗಿಯೇ ಇರಿ!

ಯೇಸು ಕ್ರಿಸ್ತನು ಪಿಲಾತನ ಎದುರಿನಲ್ಲಿ ತಾನು,

ದೇವರೆಂದು ಒಪ್ಪಿಕೊಂಡನು, ಲೂಕ 23:1-4, 13-16

ಭಯ: ಪ್ರಾಮಾಣಿಕರಾಗಿ ನಡೆದುಕೊಳ್ಳುವ ಭಯ






## ಧ್ಯೇಯ 4

ಭರವಸೆಯಿಡಿರಿ!

ಶಿಲುಬೆಯ ಮೇಲೆ ಯೇಸು ಕ್ರಿಸ್ತನ ಮರಣ, ಲೂಕ 23:26-49

ಭಯ: ಅನಾರೋಗ್ಯ ಅಥವಾ ವೇದನೆಯ ಭಯ





## ಧ್ಯೇಯ 5


ನಿಜವಾಗಿಯೂ ಪ್ರೀತಿಸಿರಿ!

ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು!

ಲೂಕ 24:1-12, 36-42

ಭಯ: ತಿರಸ್ಕಾರ ಮತ್ತು ಒಂಟಿತನದ ಭಯ





ಪ್ರಯತ್ನಿಸಿ ಕಂಠಪಾಠ ಮಾಡಿರಿ ಒಗಟುಗಳು




ಕಂಠಪಾಠ ವಚನ:

ಜ್ಞಾನೋಕ್ತಿಗಳು 15:13

“ಹರ್ಷಹೃದಯದಿಂದ ಹಸನ್ಮುಖ,

ಮನೋವ್ಯಥೆಯಿಂದ ಆತ್ಮಭಂಗ.”






ಕಂಠಪಾಠವಚನ

ಜ್ಞಾನೋಕ್ತಿಗಳು 30:5

“ದೇವರ ಪ್ರತಿಯೊಂದು ಮಾತು ಶುದ್ಧವಾದದ್ದು,

ಆತನು ಶರಣಾಗತರಿಗೆ ಗುರಾಣಿಯಾಗಿದ್ದಾನೆ.”



ಕಂಠಪಾಠವಚನ:


ಜ್ಞಾನೋಕ್ತಿಗಳು ಯೆಶಾಯ 43:4

“ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನೂ

ಮಾನ್ಯನೂ ಪ್ರಿಯನೂ ಆಗಿರುವದರಿಂದ ನಾನು

ನಿನಗೆ ಬದಲಾಗಿ ಮನುಷ್ಯರನ್ನೂ ನಿನ್ನ ಪ್ರಾಣಕ್ಕೆ

ಪ್ರತಿಯಾಗಿ ಜನಾಂಗಗಳನ್ನೂ ಕೊಡುವೆನು.”







ಕಂಠಪಾಠ ವಚನ:

ಕೀರ್ತನೆಗಳು 118:8 “ಮನುಷ್ಯರಲ್ಲಿ

ಭರವಸವಿಡುವದಕ್ಕಿಂತ ಯೆಹೋವನನ್ನು

ಆಶ್ರಯಿಸುವದು ಒಳ್ಳೇದು.”





ಕಂಠಪಾಠ ವಚನ:

ಯೊವಾನ್ನ 15:13 “ಪ್ರಾಣವನ್ನೇ

ಸೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ

ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ.”



# ಈ ಪುಸ್ತಕವನ್ನುಉಪಯೋಗಿಸುವದುಹೇಗೆ

## ನಿರ್ದೇಶಕ

ನಿರ್ದೇಶಕನಾಗಿ "ದ ಸರ್ಕಸ್ ಆಫ್ ಲೈಫ್" ಪ್ರದರ್ಶನವನ್ನು ನಡೆಸುವದು ನಿಮ್ಮ ಮುಖ್ಯ ಕರ್ತವ್ಯವಾಗಿದೆ. ಸ್ವೇಚ್ಛಾಪರರು ಮತ್ತು ಸಾಮಗ್ರಿಗಳ ಕಾರ್ಯರೂಪಣೆ ಹಾಗೂ ಮೇಲ್ವಿಚಾರಣೆಯೊಂದಿಗೆ, ಕಾರ್ಯಕ್ರಮದಲ್ಲಿ ಬೇರೆ ಯಾವುದೇ ಚಟುವಟಿಕೆಯನ್ನು ನಡೆಸಲು ನಿಮಗೆ ಸಮಯ ಇರುವದಿಲ್ಲ. ಸ್ವೇಚ್ಛಾಪರರನ್ನು ಸೇರಿಸಿಕೊಳ್ಳಿರಿ ಮತ್ತು ಕಾರ್ಯಕ್ರಮದ ವಿವಿಧ ಭಾಗಗಳನ್ನು ನಿಮ್ಮ ಸಭೆಯ ಸದಸ್ಯರಿಗೆ ಒಪ್ಪಿಸಿರಿ. ಇದರಿಂದ ಕಾರ್ಯಕ್ರಮದ ಕುರಿತಾದ ಕುತೂಹಲ ಹೆಚ್ಚಾಗುತ್ತದೆ ಮತ್ತು ನಿಮ್ಮ ಸಭೆಯ ಸದಸ್ಯರಿಗೆ ಮಕ್ಕಳಿಗೆ ಸುವಾರ್ತೆ ಸಾರಲು ಸಹಾಯವಾಗುತ್ತದೆ.

## ಸೇರಿಸಿಕೊಳ್ಳುವದು

ನಿಮ್ಮ ಸಭೆಯಿಂದ ಸಾಧ್ಯವಾದಷ್ಟ ಜನರನ್ನು ಸೇರಿಸಿಕೊಳ್ಳಿರಿ. "ದ ಸರ್ಕಸ್ ಆಫ್ ಲೈಫ್" ಕಾರ್ಯಕ್ರಮದಲ್ಲಿ ವಿವಿಧ ರೀತಿಯ ಸಹಾಯಗಳನ್ನು ಬಯಸಬೇಡಿರಿ, ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ನೇರವಾಗಿ ಮಾತನಾಡಿರಿ ಮತ್ತು ನಿರ್ದಿಷ್ಟವಾದ ವಿಷಯಗಳಿಗೆ ಮಾತ್ರವೇ ಸಹಾಯವನ್ನು ಕೇಳಿಸಿಕೊಳ್ಳಿರಿ. ಬಹುಶಃ ನಿಮ್ಮ ಸಭೆಯಲ್ಲಿ ಕಲಿಸಲು ಭಯಪಡುವವರು ಯಾರಾದರು ಇರಬಹುದು, ಆದರೆ ಮಕ್ಕಳಿಗೆ ಕರಕುಶಲ ಕಾರ್ಯಗಳಲ್ಲಿ ಸಹಾಯ ಮಾಡಲು ಅವರಿಗೆ ಬಹಳ ಆಸಕ್ತಿ ಇರಬಹುದು.
ಕೆಲವು ಪಾತ್ರಗಳನ್ನು ಇಲ್ಲಿ ತಿಳಿಸಿದ್ದೇವೆ (10+ ಜನರು):

- ಕಾರ್ಯಕ್ರಮಗಳ ವಿವರಣೆ - ನಿರ್ದೇಶಕನು ಇದನ್ನು ಮಾಡಬಹುದು.
- "ಪರದೆಯ ಹಿಂದೆ" ನಾಟಕ ಭಾಗಕ್ಕೆ 2 ಅಥವಾ 3 ನಟರು.
- ಮಕ್ಕಳಿಗೆ ನೃತ್ಯದೊಂದಿಗೆ ಹಾಡುಗಳನ್ನು "ಸಂತೋಷದ ಕ್ಷಣಗಳಲ್ಲಿ" ಕಲಿಸಲು ಸಂಗೀತ ನಾಯಕ.
- "ಪ್ರದರ್ಶನ ಪ್ರಾರಂಭವಾಗಲಿ" ಮುಖ್ಯ ಪಾಠದ ಶಿಕ್ಷಕನೊಂದಿಗೆ ಎಲ್ಲಾ ಮಕ್ಕಳು (ನಿರ್ದೇಶಕ ಇದನ್ನು ಮಾಡಬಹುದು).
- ವಿದ್ಯಾರ್ಥಿ ಪುಸ್ತಕಗಳಿಗಾಗಿ ತರಗತಿ ಸ್ಟೇಷನ್ ಶಿಕ್ಷಕ.
- ದೊಡ್ಡ ಮಕ್ಕಳೊಂದಿಗೆ ಚರ್ಚೆ ನಡೆಸುವ ಶಿಕ್ಷಕ.
- ಕರಕುಶಲಗಳ "ಸ್ಮಾರಕ ಚಿನ್ಹೆಗಳ" ನಾಯಕ.
- ಆಟಗಳ ನಾಯಕ "ಡೊಂಬರಾಟ", "ಮಿನಿ ಪ್ರದರ್ಶಕರು", "ಪ್ರಯತ್ನಿಸಿರಿ", ಜನರು ಹೆಚ್ಚಾಗಿರುವಾಗ, ನಿಮ್ಮ ಚಿಕ್ಕ ವಿದ್ಯಾರ್ಥಿಗಳೊಂದಿಗೆ ಕಾರ್ಯಮಾಡಲು ಒಂದಿಬ್ಬರು ಸಹಾಯಕರನ್ನು ಇಟ್ಟುಕೊಳ್ಳಬಹುದು, ಅವರು ಧ್ವನಿ ಮತ್ತು ದೃಶ್ಯ ಸಾಧನಗಳನ್ನು ಉಪಯೋಗ ಮಾಡುವಲ್ಲಿ, ಸಂಗೀತ ಕಲಿಸುವದರಲ್ಲಿ ಅಥವಾ ಪ್ರತಿಯೊಂದು ಸ್ಟೇಷನ್‌ಗಳಲ್ಲಿ ಸಹಾಯ ಮಾಡುವವರಾಗಿರುತ್ತಾರೆ.

## ತರಬೇತಿ

ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೆ ಇದು ಬಹಳ ಪ್ರಾಮುಖ್ಯವಾದ ಭಾಗವಾಗಿದೆ, ನಿಗದಿಪಡಿಸಲಾಗಿರುವ ಸಮಯವನ್ನು ಗಮನದಲ್ಲಿಟ್ಟುಕೊಳ್ಳಬೇಕು, ಯಾಕಂದರೆ ಪೂರ್ಣಾವಧಿಯ ಸಿಬ್ಬಂದಿಗಳು ಮತ್ತು ಸ್ವೇಚ್ಛೆಯಿಂದ ಕೆಲಸ ಮಾಡುವವರು ಅನೇಕ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ, ಆದ್ದರಿಂದ ಸರಳವಾದರೂ ಪರಿಣಾಮಕಾರಿಯಾದ ಯೋಜನೆಯನ್ನು ರೂಪಿಸಬೇಕು, "ದ ಸರ್ಕಸ್ ಆಫ್ ಲೈಫ್" ತರಬೇತಿಯಲ್ಲಿ ಆನ್ ಲೈನ್ ಮೂಲಕ ಭಾಗಿಯಾಗುವ ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕು, ಕಾರ್ಯಗಳು ಹಾಗೂ ಸಂಪನ್ಮೂಲಗಳನ್ನು ಒಪ್ಪಿಸಬೇಕು. ನಿಮಗೆ ಸಹಾಯ ಮಾಡಲು ಮತ್ತು ಅವರನ್ನು ಸತ್ಯವೇದದ ಜ್ಞಾನ, ಕಲಿಸುವ ಅನುಭವ ಮತ್ತು ಕೌಶಲ್ಯಗಳಲ್ಲಿ ತರಬೇತುಗೊಳಿಸುವದರಿಂದ ಸುಂದರವಾದ ಈ ಸೇವೆಯಲ್ಲಿ ಅವರು ತಾವಾಗಿಯೇ ಪರಿಪೂರ್ಣಗೊಳ್ಳಲು ಸಹಾಯವಾಗುವಂತೆ ಯೋಜನೆಗಳನ್ನು ರೂಪಿಸುವ ಪರಿಶೀಲನಾಪಟ್ಟಿ ಪರಿಶೀಲಿಸುವದನ್ನು ಮರೆಯಬೇಡಿರಿ.

## ಆಹ್ವಾನಗಳು ಮತ್ತು ನೋಂದಣಿ

ಈಸ್ಟರ್ ಸಮಯದಲ್ಲಿ ಕಾರ್ಯಕ್ರಮವನ್ನು ನಡೆಸುವದು ಸುವಾರ್ತೆ ಸಾರಲು ದೊರೆಯುವ ಉತ್ತಮ ಅವಕಾಶವಾಗಿದೆ. ನಿಮ್ಮ ಈಸ್ಟರ್ ಕಾರ್ಯಕ್ರಮದ ನಿಮಿತ್ತವಾಗಿ ನಾನು ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಇದ್ದೇನೆ ಎಂಬದಾಗಿ ಮುಂದೊಂದು ದಿನ ನೀವು ಭೇಟಿಯಾಗುವ ವ್ಯಕ್ತಿ ನಿಮಗೆ ಹೇಳುವದಾದರೆ ಹೇಗೆ ಇರುತ್ತದೆ ಎಂಬದನ್ನು ಊಹಿಸಿರಿ! ನಿಮ್ಮ ಕಾರ್ಯಕ್ರಮಗಳು ಸಭೆಯಲ್ಲಿರುವ ಮಕ್ಕಳಿಗೆ ಮಾತ್ರವೇ ಸೀಮಿತವಾಗಿರಬಾರದು. ಜಾಹಿರಾತಿನ ವಸ್ತುಗಳನ್ನು ಸೃಷ್ಟಿಸಿರಿ ಮತ್ತು ನಿಮ್ಮ ಸಹಪಾಠಿಗಳನ್ನು ಆಹ್ವಾನಿಸಿರಿ ಎಂದು ಮಕ್ಕಳಿಗೆ ಹೇಳಿರಿ ಹಾಗೂ ಈಸ್ಟರ್ ಕಾರ್ಯಕ್ರಮಕ್ಕೆ ಯಾವ ಮಕ್ಕಳು ತಮ್ಮ ಸ್ನೇಹಿತರನ್ನು ಕರೆದುಕೊಂಡು ಬರುತ್ತಾರೋ ಅವರಿಗೆ ಬಹುಮಾನವನ್ನು ಕೊಡಿರಿ. ಒಂದುವೇಳೆ ನೀವೇನಾದರೂ ಕಾರ್ಯಕ್ರಮಕ್ಕೆ ಪ್ರವೇಶ ಶುಲ್ಕವನ್ನು ನಿಗದಿಪಡಿಸುವದಾದರೆ, ತಮ್ಮ ಮಕ್ಕಳ ಸ್ನೇಹಿತರಿಗೆ ಸ್ಕಾಲರ್‌ಶಿಪ್ ಒದಗಿಸುವಂತೆ ತಂದೆತಾಯಿಗಳನ್ನು ಆಹ್ವಾನಿಸಿರಿ, ಆಗ ಅವರೂ ಯೇಸು ಕ್ರಿಸ್ತನನ್ನು ಭೇಟಿ ಮಾಡಲು ಸಾಧ್ಯವಾಗುತ್ತದೆ. ಈಸ್ಟರ್ ದಿನ ನೀವು ನಡೆಸುವ "ದ ಸರ್ಕಸ್ ಆಫ್ ಲೈಫ್" ಕಾರ್ಯಕ್ರಮಕ್ಕೆ ಎಷ್ಟು ಜನ ಬರಬಹುದು ಎಂಬದನ್ನು ಲೆಕ್ಕ ಮಾಡಲು ಮುಂಗಡವಾಗಿ ನೋಂದಣಿಯನ್ನು ಮಾಡಿಕೊಳ್ಳಿರಿ, ಆಗ ನೀವು ಅವಶ್ಯವಾದ ಸಾಮಗ್ರಿಗಳನ್ನು ಕೂಡಿಸಲು ಸಾಧ್ಯವಾಗುತ್ತದೆ.

## ವೇಳಾಪಟ್ಟಿ

5 ದಿನಗಳಿಗೂ ಒಂದೇ ವೇಳಾಪಟ್ಟಿ ಇರುತ್ತದೆ, ಆದರೆ ಚಟುವಟಿಕೆಗಳು ಮಾತ್ರ ಬೇರೆಯಾಗಿರುತ್ತವೆ. ಅವಶ್ಯಕತೆಗೆ ತಕ್ಕಂತೆ ಈ ವೇಳಾಪಟ್ಟಿಯನ್ನು ಬದಲಾಯಿಸಿಕೊಳ್ಳಬಹುದು. ಮಕ್ಕಳೆಲ್ಲರನ್ನು ಒಟ್ಟು ಸೇರಿಸುವ ಮೂಲಕ ದಿನವನ್ನು ಪ್ರಾರಂಭಿಸಿರಿ.

- ಪ್ರಾರ್ಥನೆ
- ಸಂತೋಷದ ಕ್ಷಣಗಳು/ಐಸ್‌ಬ್ರೇಕರ್ಸ್
- ಪರದೆಯ ಹಿಂದೆ (ನಾಟಕ)
- ಪ್ರದರ್ಶನ ಪ್ರಾರಂಭವಾಗುತ್ತದೆ (ವಿಷಯದ ಪರಿಚಯ)

- “ಪರದೆಯ ಹಿಂದೆ: (ನಾಟಕ) ಮತ್ತು “ಪ್ರದರ್ಶನ ಪ್ರಾರಂಭವಾಗುತ್ತದೆ” (ಮುಖ್ಯ ಪಾಠ) ನಡುವೆ ನೀವು ಕ್ರಿಯೆಗಳೊಂದಿಗೆ ಹುರಿದುಂಬಿಸಬೇಕು, ಆಗ ಮಕ್ಕಳಿಗೆ ಚಲಿಸುವ ಅವಕಾಶ ದೊರೆಯುತ್ತದೆ. ನಂತರ ನೀವು ಮಕ್ಕಳನ್ನು ವಿವಿಧ ಭಾಗಗಳಿಗಾಗಿ ಗುಂಪುಗಳಾಗಿ ವಿಭಾಗಿಸಬಹುದು:
- ಸ್ಮಾರಕ ಚಿನ್ಹೆ ಅಥವಾ ಕರಕುಶಲ.
- ಮಕ್ಕಳ ಪುಸ್ತಕದೊಂದಿಗೆ ತರಗತಿ

  ನಂತರ ಮಕ್ಕಳೆಲ್ಲರೂ ಒಟ್ಟಾಗಿ ಮುಕ್ತಾಯದ ಚಟುವಟಿಕೆಗಳಲ್ಲಿ ಭಾಗವಹಿಸಬಹುದು:
- ನೀವಾಗಿಯೇ ಪ್ರಯತ್ನಿಸಿರಿ/ಮಿನಿ ಪ್ರದರ್ಶಕರು
- ಹಾಡುಗಳು (ನಿಮ್ಮ ಆಯ್ಕೆಗೆ ಬಿಟ್ಟದ್ದು)
- ಡೊಂಬರಾಟ (ಆಟಗಳು)

ಕ್ಲುಪ್ತವಾದ ಪಾಠದ ವಿಮರ್ಶೆ ಮತ್ತು ಪ್ರಾರ್ಥನೆಯೊಂದಿಗೆ ದಿನವನ್ನು ಮುಗಿಸಿರಿ.

## ಸ್ಟೇಷನ್ಸ್

“ರೊಟೇಶನ್ ಸ್ಟೇಷನ್ಸ್” ನಮ್ಮ “ಸರ್ಕಸ್ ಆಫ್ ಲೈಫ್” ಕಾರ್ಯಕ್ರಮವನ್ನು ಉತ್ತಮವಾಗಿ ಆಯೋಜಿಸುವ ವಿಧಾನವಾಗಿದೆ ಇದರ ನಿಮಿತ್ತ ನಿಮಗೆ ಗ್ಲೂ, ಪೆನ್ಸಿಲ್ ಇತ್ಯಾದಿ ರೀತಿಯ ಅನೇಕ ಸಾಮಗ್ರಿಗಳ ಅವಶ್ಯಕತೆ ಇರುವದಿಲ್ಲ ಮತ್ತು ಮಕ್ಕಳೆಲ್ಲರೂ ಒಂದೇ ಸಮಯದಲ್ಲಿ ಕರಕೌಶಲಗಳನ್ನು ಮಾಡುವ ಅವಶ್ಯಕತೆಯೂ ಇರುವದಿಲ್ಲ. ಮಕ್ಕಳನ್ನು 3 ಅಥವಾ ಹೆಚ್ಚಿನ ಗುಂಪುಗಳಾಗಿ ವಿಭಾಗಿಸಿರಿ ಮತ್ತು ಅವರು ಒಂದೊಂದೇ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಹೇಳಿರಿ. ಉದಾಹರಣೆಗೆ, ಮುಂದುವರೆದ ಮತ್ತು ಕಷ್ಟದ ತರಗತಿಗಳವರೆಗೆ ವಿದ್ಯಾರ್ಥಿ ಪುಸ್ತಕಗಳನ್ನು ಉಪಯೋಗಿಸುವಂತೆ ಹಾಗೂ ಮಧ್ಯಮ ತರಗತಿಯವರಿಗೆ “ಪರದೆಯ ಹಿಂದಿನ” ಸ್ಟೇಷನ್‌ನಲ್ಲಿಚಟುವಟಿಕೆ ಮಾಡುವಂತೆ ಮತ್ತು ಸುಲಭ ತರಗತಿಯವರಿಗೆ “ಸ್ಮಾರಕ ಚಿನ್ಹೆ” ಕರಕೌಶಲ ಮಾಡುವಂತೆ ಹೇಳಿರಿ. ಪ್ರತಿಯೊಂದು ಸ್ಟೇಷನ್ 15-20 ನಿಮಿಷಗಳ ಅವಧಿಯನ್ನು ಹೊಂದಿರುತ್ತದೆ. ನಿರ್ದೇಶಕ ಅಥವಾ ಸ್ಟೇಷನ್ ಮುನ್ನಡೆಸುವ ಜವಾಬ್ದಾರಿಕೆಯನ್ನು ಹೊತ್ತುಕೊಂಡಿರುವವನು ಸಮಯ ಪಾಲನೆ ಮಾಡಬೇಕು ಮತ್ತು ಬದಲಾಗುವ ಸಮಯ ಬಂದ ಕೂಡಲೇ ಅದನ್ನು ಪ್ರಕಟಿಸಬೇಕು. ಬದಲಾವಣೆಯ ಸೂಚನೆಯನ್ನು ಕೊಡಲು ನೀವು ಕಾರ್ಯಕ್ರಮದಲ್ಲಿ ಸೇರಿಸಿರುವ ಹಾಡುಗಳಲ್ಲಿ ಒಂದು ಉಪಯೋಗಿಸಬಹುದು. ಒಂದುವೇಳೆ ಸ್ಥಳಾವಕಾಶ ಅನುಮತಿಸುವದಾದರೆ, ಅದೇ ಚಟುವಟಿಕೆಯನ್ನು ಒಂದು ಸ್ಥಳದಲ್ಲಿ ನಡೆಸಿರಿ ಮತ್ತು ನಿರ್ದೇಶನದಂತೆ ಕಾರ್ಯಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಅನುಮತಿಸಬೇಕು. ಇದರಿಂದ ಮಕ್ಕಳಿಗೆ ಎದ್ದು ನಿಲ್ಲಲು ಮತ್ತು ತಿರುಗಾಡಲು ಸ್ವಲ್ಪ ಸಮಯ ಸಿಗುತ್ತದೆ. ಒಂದುವೇಳೆ ಹೆಚ್ಚು ಸ್ಥಳ ಇಲ್ಲದೆ ಇರುವದಾದರೆ, ಮಕ್ಕಳನ್ನು ಅದೇ ಸ್ಥಳಗಳಲ್ಲಿ ಇರಿಸಿರಿ, ಆದರೆ ಅವರು ಮಾಡುವ ಚಟುವಟಿಕೆಗಳನ್ನು ಬದಲಾಯಿಸಿರಿ. ಅವರು ಎದ್ದು ನಿಲ್ಲಲಿ ಮತ್ತು ತಮ್ಮ ಕೈಕಾಲುಗಳನ್ನು ಆಲ್ಲಾಡಿಸಲಿ ಅಥವಾ ಅದಲಿ ಬದಲಿ ಆಸನಗಳಲ್ಲಿ ಅವರನ್ನು ಕೂರಿಸುವ ಮೂಲಕ ಅವರಿಗೆ ಚಲಿಸಲು ಅವಕಾಶವನ್ನು ಕೊಡಿರಿ.

## ಪ್ರದರ್ಶನ ಪ್ರಾರಂಭವಾಗುತ್ತದೆ (ತರಗತಿ)

ಈ ಭಾಗದಲ್ಲಿ ವಿದ್ಯಾರ್ಥಿಗಳ ಜೀವಿತಕ್ಕಾಗಿ ಸಂದೇಶದೊಂದಿಗೆ ಮುಖ್ಯ ಪಾಠವನ್ನು ತಿಳಿಸಲಾಗುತ್ತದೆ.

## ವಿದ್ಯಾರ್ಥಿ ಪುಸ್ತಕ

ಒಗಟುಗಳು

ಈ ಸ್ಟೇಷನಿನಲ್ಲಿ, ವಿದ್ಯಾರ್ಥಿ ಪುಸ್ತಕದಲ್ಲಿರುವ ಒಗಟುಗಳನ್ನು ಬಿಡಿಸುವಾಗ ಮಕ್ಕಳು ಬಹಳ ಖುಷಿಪಡುವರು. ನಮ್ಮ ಪುಸ್ತಕಗಳನ್ನು ಕೆಳಗೆ ಕೊಡಲಾಗಿರುವ ವಯಸ್ಸಿನ ಮಕ್ಕಳಿಗಾಗಿ ರೂಪಿಸಲಾಗಿದೆ:

ಸುಲಭ - 4-6 ವರ್ಷಗಳು

ಮಧ್ಯಮ - 7-9 ವರ್ಷಗಳು

ಕಷ್ಟ - 10-12 ವರ್ಷಗಳು

ಮುಂದುವರೆದ - 13+ ವರ್ಷಗಳು

## ಚರ್ಚೆಯ ಪ್ರಶ್ನೆಗಳು

ಮಕ್ಕಳು ದೊಡ್ಡವರಾಗಿ ಬೆಳೆಯುವಾಗ, ಜೀವನದ ಗೊಂದಲಗಳು ಅವರಿಗೆ ಪರಿಚಯವಾಗುತ್ತವೆ ಮತ್ತು ಸತ್ಯವೇದದ ಕಥೆಗಳಿಂದ ಅವರು ಕಲಿತುಕೊಳ್ಳುವ ಪಾಠಗಳನ್ನು ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಲು ಅವರಿಗೆ ಕಷ್ಟವಾಗುತ್ತದೆ. ಈ ಕಾರಣದಿಂದಾಗಿ, ನಾವು ಪ್ರಶ್ನೆ ಮತ್ತು ಉತ್ತರದ ಭಾಗಗಳನ್ನು ರೂಪಿಸಿದ್ದೇವೆ, ಇದರ ಮೂಲಕ ಅಂದರೆ ಪ್ರಶ್ನೆಗಳ ಮೂಲಕ ಹಿರಿಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಗಳನ್ನು ಕೊಡಲು ಮತ್ತು ಪಾಠಗಳನ್ನು ವಾಸ್ತವವಾಗಿ ಅವರಿಗೆ ತಿಳಿಸಲು ಸಾಧ್ಯವಾಗುತ್ತದೆ. ಮಾದರಿಯ ಉತ್ತರಗಳನ್ನು ಕೂಡಲೇ ತಿಳಿಸಬಾರದು, ಆಲೋಚಿಸಲು ಮಕ್ಕಳಿಗೆ ಸಮಯವನ್ನು ಕೊಡಬೇಕು, ಆಗ ಅವರಿಗೆ ತಾವು ಕಲಿತಿರುವ ವಿಷಯಗಳು ಚೆನ್ನಾಗಿ ನೆನಪಿನಲ್ಲಿ ಇರುತ್ತವೆ. ಕೆಲವೊಮ್ಮೆ ಉತ್ತರಗಳನ್ನು ಕೊಡಲಾಗುವದೇ ಇಲ್ಲ. ಅವರ ಚರ್ಚೆಗೆ ಬೇಕಾದ ಮಾರ್ಗದರ್ಶನವನ್ನು ಕೊಡುವದೇ ಒಳ್ಳೇದು, ಆಗ ಅವರು ತಾವಾಗಿಯೇ ತೀರ್ಮಾನಗಳಿಗೆ ಬರುತ್ತಾರೆ. ಇಂದಿನ ಜೀವಿತ ಅಳವಡಿಸುವಿಕೆಗಳ ಬಗ್ಗೆ ಆಲೋಚಿಸುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ, ಕೇವಲ ಚಾರಿತ್ರಿಕವಾಗಿರುವ ಸತ್ಯವೇದದ ವಿಷಯಗಳ ಕಡೆಗೆ ಮಾತ್ರವೇ ಗಮನ ಕೊಡಬೇಡಿರಿ. ನಿಮ್ಮ ತರಗತಿಯೊಳಗೆ ಭರವಸೆಯ ವಾತಾವರಣವನ್ನು ನಿರ್ಮಿಸಿರಿ ಆಗ ಮಕ್ಕಳಿಗೆ ತಪ್ಪು ಮಾಡುತ್ತೇವೇನೋ ಎಂಬ ಭಯವಿಲ್ಲದೆ ತಮ್ಮ ಮನಸ್ಸಿನಲ್ಲಿರುವದನ್ನು ನೇರವಾಗಿ ಹೇಳಲು ಸಾಧ್ಯವಾಗುತ್ತದೆ. ಅವರು ವೈಯಕ್ತಿಕವಾಗಿ ಮತ್ತು ಪ್ರಾಮಾಣಿಕವಾಗಿ ಪ್ರಶ್ನೆಗಳಿಗೆ ಉತ್ತರಿಸಿದರೆ ಬೆಳೆಯುತ್ತಾರೆ ಮತ್ತು ಪರಿಪಕ್ವಗೊಳ್ಳುತ್ತಾರೆ.

ಈ ಕಾರ್ಯಕ್ರಮದಲ್ಲಿ, ನಾವು ಪ್ರತಿ ವಯಸ್ಸಿನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಪಡೀಸಲು ವಿವಿಧ ರೀತೀಯ ಐಸ್ ಬ್ರೇಕರ್‌ಗಳನ್ನು ಅಭಿವೃದ್ಧಿಪಡಿಸಿದ್ದೇವೆ. ಕೆಲವು ತಾರ್ಕಿಕ, ಸಂದರ್ಭಕ್ಕನುಸಾರ ಮತ್ತು ವಿಶ್ಲೇಷಣಾತ್ಮಕ  ಬ್ರೇಕರ್ಸ್‌ಗಳಿವೆ. ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು ನೀವು ಅವುಗಳನ್ನು ಅಧ್ಯಯನ ಮಾಡಬೇಕು ಎಂಬದು ನಮ್ಮ ಸಲಹೆಯಾಗಿದೆ.

## ಸಂತೋಷದ ಕ್ಷಣಗಳು

ಮಕ್ಕಳು ಎಲ್ಲಾ ರೀತಿಯ ಪ್ರೋತ್ಸಾಹಗಳನ್ನು ಅದ್ಭುತವಾದ ರೀತಿಯಲ್ಲಿ ಸ್ವೀಕರಿಸಿಕೊಳ್ಳುತ್ತಾರೆ ಮತ್ತು ಸಂಗೀತವು ಅತ್ಯಂತ ಪ್ರಭಾವಕಾರಿಯಾದ ಪ್ರೋತ್ಸಾಹವಾಗಿದೆ. ಆದ್ದರಿಂದಲೇ, ಸಂಗೀತವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ

ಅಮೋಘವಾದ ರೀತಿಯಲ್ಲಿ ಸಕಾರಾತ್ಮಕ ಪ್ರಭಾವವನ್ನು ಅವರ ಮೇಲೆ ಬೀರುತ್ತದೆ. ಅವುಗಳನ್ನು ಖಡ್ಡಾಯವಾಗಿ ಉಪಯೋಗಿಸಬೇಕೆಂಬ ನಿರ್ಬಂಧದಿಂದ ಉಪಯೋಗಿಸಬೇಡಿರಿ ಮತ್ತು ಯಾವ ಸಂದರ್ಭಗಳಿಗೆ ಯಾವ ರೀತಿಯ ಸಂಗೀತವನ್ನು ಆಯ್ಕೆ ಮಾಡಬೇಕು ಎಂಬದನ್ನು ತಿಳಿದುಕೊಳ್ಳಿರಿ. ಇದರಿಂದ ಭಾವನಾತ್ಮಕ ಭದ್ರತೆ ದೊರೆಯುತ್ತದೆ, ಕೆಲವು ರೀತಿಯ ಕಲಿಕೆಯನ್ನು ಪ್ರೋತ್ಸಾಹಪಡಿಸುತ್ತದೆ, ಏಕಾಗ್ರತೆಗೆ ಸಹಾಯವಾಗುತ್ತದೆ ಮತ್ತು ದೇಹದ ಹಾವಭಾವಗಳನ್ನು ವ್ಯಕ್ತಪಡಿಸಲು ಅವಕಾಶ ಸಿಗುತ್ತದೆ.

## ಪರದೆಯ ಹಿಂದೆ (ನಾಟಕ/ಸ್ಕೆಚ್)

ದಿನದ ಪಾಠವನ್ನು ಪರಿಚಯಪಡಿಸಲು ನಾಟಕಗಳನ್ನು ಬರೆಯಲಾಗಿದೆ, ಖಂಡಿತವಾಗಿಯೂ, ನಾಟಕಗಳು ತಮಾಷೆಯಾಗಿರುತ್ತವೆ ಮತ್ತು ನಾವು ಪ್ರತಿಬಿಂಬಿಸಲು ನಮಗೆ ಸಹಾಯ ಮಾಡುತ್ತವೆ. ಮಕ್ಕಳು ಪ್ರತಿಯೊಂದು ಸ್ಥೂಲ ಚಿತ್ರವನ್ನು ನೋಡಿ ವಿಶ್ಲೇಷಿಸುತ್ತಾರೆ ಅಥವಾ ನಗುತ್ತಾರೆ, ಅದರ ಮೂಲಕವೇ ಅವರು ಕಲಿತುಕೊಳ್ಳುವವರಾಗಿರುತ್ತಾರೆ! ಮಕ್ಕಳ ಕಲ್ಪನೆಗಳಿಗೆ ಸಹಾಯ ಮಾಡುವ ಸಲುವಾಗಿ ನಾಟಕಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಹೊಂದಿರುವದು ಅವಶ್ಯವಾದದ್ದಾಗಿದೆ.

ಮಕ್ಕಳ ವಯಸ್ಸಿನ ಆಧಾರದ ಮೇರೆಗೆ (1 ವರ್ಷಕ್ಕೆ 1 ನಿಮಿಷದಂತೆ) ಕೇವಲ 8 ನಿಮಿಷಗಳು ಮಾತ್ರವೇ ಗಮನ ಕೊಡಲು ಶಕ್ತರಾಗಿರುತ್ತಾರೆ ಎಂಬದನ್ನು ಮರೆಯಬೇಡಿರಿ. ನಾಟಕವನ್ನು ಆ ಸಮಯಾವಧಿಯೊಳಗೆ ಮುಗಿಸಿರಿ ಮತ್ತು ಮುಂದಿನ ನಾಟಕಗಳಿಗಾಗಿ ಅವರು ವಾರವೆಲ್ಲಾ ಕಾಯುತ್ತಾ ಇರುತ್ತಾರೆ. ಮತ್ತು ಖುಷಿಪಡಲು ಮರೆಯಬೇಡಿರಿ!

## ಸ್ಮಾರಕ ಚಿನ್ಹೆಗಳು (ಕರಕೌಶಲ)

ಮಕ್ಕಳು ಕರಕೌಶಲದ ಸಮಯದಲ್ಲಿ ಖುಷಿಪಡುತ್ತಾರೆ ಯಾಕಂದರೆ ಹೊಸ ವಸ್ತುಗಳ ಚಿತ್ರ ಬಿಡಿಸುವ ಮತ್ತು ಅವುಗಳನ್ನು ಕಟ್ಟುವ ಅವಕಾಶ ಅವರಿಗೆ ಸಿಗುತ್ತದೆ. ಪ್ರತಿಯೊಂದು ಕರಕೌಶಲವನ್ನು ಚಿಕ್ಕವರು ಮತ್ತು ದೊಡ್ಡವರಿಗಾಗಿ ರೂಪಿಸಲಾಗಿದೆ; ಅವುಗಳನ್ನು ಉಪಯೋಗಿಸಲು ಎಲ್ಲರಿಗೂ ಸಾಧ್ಯವಾಗುತ್ತದೆ ಮತ್ತು ಅವುಗಳನ್ನು ಮಾಡುವಾಗ ಖುಷಿಯಾಗುತ್ತದೆ ಆದ್ದರಿಂದ ಅವರು ತಮ್ಮ ವೈಯಕ್ತಿಕ ಆಸಕ್ತಿಯಿಂದ ಅವುಗಳನ್ನು ಮಾಡುತ್ತಾರೆ.

## ಡೊಂಬರಾಟಗಳು (ಆಟಗಳು)

ಆಟಗಳಿಲ್ಲದೆ ಹೋದರೆ ಯಾವ ಕಾರ್ಯಕ್ರಮಗಳೂ ಪೂರ್ತಿಯಾಗುವದಿಲ್ಲ! ಈ ಭಾಗದಲ್ಲಿ ನಿಮಗೆ ಅದ್ಭುತವಾದ ಆಟಗಳು ಸಿಗುತ್ತವೆ, ಮಕ್ಕಳು ಬಹಳ ಉತ್ಸುಕರಾಗಿರುತ್ತಾರೆ ಮತ್ತು ಬಹಳ ಖುಷಿಪಡುತ್ತಾರೆ. ಆಟಗಳನ್ನು ಅಭ್ಯಾಸ ಮಾಡುವದು ಬಹಳ ಸುಲಭವೂ ಆಗಿರುತ್ತದೆ. ಇದಕ್ಕೆ ಅವಶ್ಯವಾಗಿರುವ ಸಾಮಗ್ರಿಗಳು ಬಹಳ ಸುಲಭವಾಗಿರುತ್ತವೆ, ಅವುಗಳಿಗೆ ಹೆಚ್ಚು ಬೆಲೆ ಇರುವದಿಲ್ಲ ಆದ್ದರಿಂದ ಸುಲಭವಾಗಿ ಖರೀದಿಸಬಹುದು. "ದ ಸರ್ಕಸ್ ಆಫ್ ಲೈಫ್" ಎಂಬ ಅದ್ಭುತವಾದ ಕಾರ್ಯಕ್ರಮದಲ್ಲಿ ಅವರು ಅದ್ಭುತವಾದ ಅನುಭವಗಳಿಂದ ಸಂತೋಷಿಸುವರು.

## ನೀವೇ ಪ್ರಯತ್ನಿಸಿರಿ

ಅದ್ಭುತವಾದ ಈ ಕಾರ್ಯಕ್ರಮದಲ್ಲಿ ತಂತ್ರಗಳೂ ಇವೆ. "ನೀವೇ ಪ್ರಯತ್ನಿಸಿರಿ" ಭಾಗದಲ್ಲಿ ಮಕ್ಕಳು ಖುಷಿ ಪಡುವರು ಹಾಗೆಯೇ ಆಶ್ಚರ್ಯ ಪಡುವರು. ಮುಖ್ಯವಾಗಿ ಶಿಕ್ಷಕರಿಗೆ ಮಾರ್ಗದರ್ಶನವನ್ನು ಕೊಡಲಾಗಿದೆ, ಆದ್ದರಿಂದ ಅವರಿಗೆ ಸರಳವಾದರೂ ಅತ್ಯಂತ ಪರಿಣಾಮಕಾರಿಯಾದ ತಂತ್ರಗಳ ಮೂಲಕ ಕಾರ್ಯಗಳನ್ನು ಮಾಡುವ ಅವಕಾಶ ದೊರೆಯುತ್ತದೆ. ಈ ಭಾಗದಲ್ಲಿ ಬೆಳಕಿನ ಭ್ರಮೆ ಬಹಳ ಪ್ರಾಮುಖ್ಯವಾಗಿರುತ್ತದೆ, ಆಗ ಅವರು ವೀಕ್ಷಕರ ಗಮನವನ್ನು ಅತ್ಯಂತ ಖುಷಿ ಹಾಗೂ ಆಶ್ಚರ್ಯಕರವಾದ ಪ್ರದರ್ಶನಗಳ

ಮೂಲಕ ತಮ್ಮ ಕಡೆಗೆ ಸೆಳೆದುಕೊಳ್ಳುತ್ತಾರೆ. ನೀವು ಪ್ರದರ್ಶಿಸುವ ಮೊದಲು ನಾವು ಕೊಡುವ ಪ್ರತಿಯೊಂದು ಕಾರ್ಯವನ್ನು ನೀವು ಅಭ್ಯಾಸ ಮಾಡಬೇಕು.

## ಮಿನಿ ಪ್ರದರ್ಶಕರು

ಈ ಭಾಗದಲ್ಲಿ ಮಕ್ಕಳು ತಮ್ಮ ಸಾಮರ್ಥ್ಯವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇದಲ್ಲದೆ ತಮಗೇ ಗೊತ್ತಿಲ್ಲದಿರುವ ತಮ್ಮ ಹೊಸ ಸಾಮರ್ಥ್ಯಗಳನ್ನು ಕಲಿತುಕೊಳ್ಳಲು ಇಲ್ಲಿ ಅವರಿಗೆ ಅದ್ಭುತವಾದ ಅವಕಾಶ ದೊರೆಯುತ್ತದೆ. "ಮಿನಿ ಪ್ರದರ್ಶಕರು" ಮಕ್ಕಳ ಎರಡು ಅಚ್ಚುಮೆಚ್ಚಿನ ಕಾರ್ಯಗಳನ್ನು ಒಳಗೊಂಡಿದೆ, ಆಟ ಮತ್ತು ಕಲ್ಪನೆ-ಇವೆರೆಡು ಕಲಿಕಾ ವಿಧಾನದಲ್ಲಿ ಪ್ರಾಮುಖ್ಯವಾದ ಸ್ತಂಭಗಳಾಗಿವೆ. ಹಾಗೆಯೇ, ಈ ಭಾಗದಲ್ಲಿ, ಚಟುವಟಿಕೆಯ ನಿಯಮಗಳನ್ನು ಅನುಸರಿಸುವ ಮೂಲಕ ನಿಗದಿಪಡಿಸಲಾಗಿರುವ ಉದ್ದೇಶಗಳನ್ನು ಸಾಧಿಸಬಹುದು ಎಂಬದನ್ನು ಮಕ್ಕಳು ಕಲಿತುಕೊಳ್ಳುವರು. ಒತ್ತಿ ಹೇಳಲು ಮತ್ತು ಸಂತಸದೊಂದಿಗೆ ನಿಮ್ಮ ಕೌಶಲ್ಯಗಳನ್ನು ಬಲಪಡಿಸಿಕೊಳ್ಳಲು ತಂಡವಾಗಿ ಕಾರ್ಯಮಾಡಲು ಮಿನಿ ಪ್ರದರ್ಶಕರು ಅದ್ಭುತವಾದ ಅವಕಾಶವನ್ನು ಒದಗಿಸುತ್ತದೆ.

## ಹೋಮ್ ವರ್ಕ್

ದಿನದ ಸಮಯದಲ್ಲಿ ಅವರು ಕಲಿತುಕೊಂಡಿರುವದನ್ನು ಮಕ್ಕಳು ಮತ್ತು ಅವರ ತಂದೆತಾಯಿಗಳು ಮನೆಯಲ್ಲಿ ವಿಮರ್ಶೆ ಮಾಡಬೇಕು ಎಂದು ನಾವು ಪ್ರೋತ್ಸಾಹಪಡಿಸುವವರಾಗಿದ್ದೇವೆ, ಹಾಗೆಯೇ ಮನೆಯಲ್ಲಿ ನೀವು ಚರ್ಚಿಸಿದ ವಿಷಯಗಳನ್ನು ಹಂಚಿಕೊಳ್ಳಬೇಕು ಎಂಬದಾಗಿ ಮನವಿ ಮಾಡಿಕೊಳ್ಳುವವರಾಗಿದ್ದೇವೆ.

ಈ ಅಭ್ಯಾಸದೊಂದಿಗೆ, ಪ್ರೀತಿಯ ಬಂಧಗಳನ್ನು ಬಲಪಡಿಸುವದು, ಅವರು ತಮ್ಮನ್ನು ವ್ಯಕ್ತಪಡಿಸಿಕೊಳ್ಳುವ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

# 1 ಸಂತೋಷವಾಗಿರಿ!

## ಭಯ: ಬೇಕಾಗುವಷ್ಟು ಇಲ್ಲವಲ್ಲಾ

## ಐಸ್ ಬ್ರೇಕರ್

ಸತ್ಯವೇದದ ಭಕ್ತರು

ರಜಾದಿನದ ಸತ್ಯವೇದ ಶಾಲೆಯಲ್ಲಿ ಭಾಗವಹಿಸುವ ಮಕ್ಕಳು ಸತ್ಯವೇದದ ಕುರಿತು ಅನೇಕ ಕಥೆಗಳನ್ನು ಕೇಳಿಸಿಕೊಂಡಿರುತ್ತಾರೆ. ಸತ್ಯವೇದದ ಭಕ್ತರ ಮೂಲಕ ಒಗಟುಗಳನ್ನು ಹಾಡುವದು ಉತ್ತಮವಾದ ಆಲೋಚನೆಯಾಗಿದೆ; ಮಕ್ಕಳಲ್ಲಿ ಯಾರಾದರು ಒಬ್ಬರು ಭಕ್ತನಂತೆ ನಟಿಸಬೇಕು, ಉಳಿದವರು ಆತನು ಯಾರು ಎಂದು ಹೇಳಬೇಕು. ನೀವು ಹೊಸ ನಟನನ್ನು ಆಯ್ಕೆ ಮಾಡಿದ ನಂತರ, ಸಮಯ ಮುಗಿಯುವ ತನಕ ಮುಂದುವರೆಸಿರಿ.

ಇನ್ನೊಂದು ವ್ಯತ್ಯಾಸ ಏನೆಂದರೆ ಪ್ರತಿಯೊಬ್ಬ ಮಗು ಬರುವಾಗ ಆತನ ಬೆನ್ನ ಹಿಂದೆ ಸತ್ಯವೇದದ ಭಕ್ತನ ಹೆಸರನ್ನು ಅಂಟಿಸುವದು.

ಮಕ್ಕಳು ತಮ್ಮ ಗುರುತು ಪ್ರಕಟಪಡಿಸದೆ ಕಾರ್ಡ್ ಗಳನ್ನು ಓದಬೇಕು. ಪ್ರತಿಯೊಂದು ಮಗು "ಹೌದು ಅಥವಾ ಇಲ್ಲ" ಪ್ರಶ್ನೆಗಳನ್ನು ಕೇಳಬೇಕು ಆಗ ತಮ್ಮ ಬೆನ್ನ ಹಿಂದೆ ಇರುವ ಭಕ್ತ ಯಾರು ಎಂಬದನ್ನು ಊಹಿಸಲು ಸಾಧ್ಯವಾಗುತ್ತದೆ.

## ಪರದೆಯ ಹಿಂದೆ

ಹಾಸ್ಯಗಾರನು ಮ್ಯಾಜಿಕ್ ತಂತ್ರಗಳನ್ನು ಮಾಡುವನು ಮತ್ತು ನಂತರ, ಬಿಗಿ ಹಗ್ಗದ ಮೇಲೆ ನಡೆಯುವ ತನ್ನ ಸ್ನೇಹಿತನನ್ನು ಕರೆಯುವನು. ಅವನು ತನ್ನ ಸ್ನೇಹಿತನೊಂದಿಗೆ ನಾನು ಮಾಡುತ್ತಿರುವ ಕಾರ್ಯಗಳು ಸಾಕಾಗುತ್ತಾ ಇಲ್ಲ ಆದ್ದರಿಂದ ಜನರ ಗಮನ ಸೆಳೆಯಲು ನಾನು ಪ್ರತಿದಿನ ಉತ್ತಮ ಪ್ರದರ್ಶನವನ್ನು ಕೊಡಬೇಕು ಮತ್ತು ದಿನವನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದನು. ಸಿಂಹವನ್ನು ಪಳಗಿಸುವವನು ಅವರ ಎದುರಿಗೆ ನಡೆಯುತ್ತಾ ಬಂದನು, ಹಾಸ್ಯಗಾರನು ಅವನನ್ನು ನೋಡಿದನು ಮತ್ತು ಅವನು ಯಾರಿರಬಹುದೆಂದು ಯೋಚಿಸಿದನು.

## ಪ್ರದರ್ಶನ ಪ್ರಾರಂಭವಾಗುತ್ತದೆ

ಗರಿಗಳ ಭಾನುವಾರ, ಲೂಕ 19:28-44

-ಬೇಕಾಗುವಷ್ಟು ಇಲ್ಲವಲ್ಲಾ ಎಂಬ ಭಯ-

ಅಸಮಾಧಾನವು ನಮ್ಮಲ್ಲಿ ಅನೇಕರಲ್ಲಿದೆ. ಕೆಲವೊಮ್ಮೆ ನಾವು ನಮಗೆ ಬೇಕಾಗುವಷ್ಟು ಆಹಾರ ಇಲ್ಲವಲ್ಲಾ ಎಂದು ಹೆದರುತ್ತೇವೆ ಮತ್ತು ಹಸಿವೆಯಲ್ಲಿರಬೇಕಾಗುವದೇನೋ ಎಂದು ಯೋಚಿಸುತ್ತೇವೆ. ಬಹುಶಃ ನಾವು ಉಪಹಾರ ಗೃಹದಲ್ಲಿ ಸ್ವಾದಿಷ್ಟ

ಭೋಜನಕ್ಕಾಗಿ ಹಂಬಲಿಸುತ್ತೇವೆ ಅಥವಾ ನಮ್ಮ ಹೊಟ್ಟೆ ನೋಯಿಸುತ್ತದೆ ಯಾಕಂದರೆ ನಿನ್ನೆ ನಾವು 2 ಹೊತ್ತು ಊಟ ಮಾಡಿಲ್ಲ. ಬೇರೆ ಸಮಯಗಳಲ್ಲಿ ಬೇಕಾಗುವಷ್ಟು ಇಲ್ಲವಲ್ಲಾ ಎಂಬ ನಮ್ಮ ಭಾವನೆಗಳು ಸಾಮಾಜಿಕ ಮಾಧ್ಯಮಗಳ ಮೇಲೆ ಆಧಾರವಾಗಿವೆ. ನಾವು ಬೇರೆಯವರ ಫೇಸ್‌ಬುಕ್ ಅಥವಾ ಇನ್ಸ್‌ಟಾಗ್ರಾಮ್ಪುಟಗಳನ್ನು ನೋಡುತ್ತೇವೆ, ಮತ್ತು ಸಮುದ್ರ ಕಿನಾರೆಯ ಬಳಿಯಲ್ಲಿರುವ ಅವರ ನಗುಮುಖಗಳನ್ನು ಹಾಗೂ ಅವರ ಕುಟುಂಬಗಳು ಸಂತೋಷವಾಗಿರುವದನ್ನು ನೋಡುತ್ತೇವೆ. ಅವರ ಸಭೆಯ ಚಿತ್ರಗಳು ನಮ್ಮ ಸಭೆಯ ಚಿತ್ರಗಳಿಗಿಂತ ಉತ್ತಮವಾಗಿರುತ್ತವೆ. ವಾಟ್ಸಪ್ ನಲ್ಲಿ ಇರುವ ಚಿತ್ರಗಳಂತೆ ನಮ್ಮ ಕುಟುಂಬವು ಯಾಕೆ ಯಾವಾಗಲೂ ಸಂತೋಷವಾಗಿರುವದಿಲ್ಲ ಎಂದು ನಾವು ಆಶ್ಚರ್ಯಪಡುತ್ತೇವೆ. ಬಹುಶಃ ನಾವು ಶಾಲೆಗೆ ಹೋಗಲು ಮತ್ತು ಸರಿಯಾದ ಬಟ್ಟೆಗಳು

ಇಲ್ಲವಲ್ಲಾ ಎಂದು ಹೆದರುತ್ತೇವೆ. ಕೆಲವೊಮ್ಮೆ ನಮ್ಮ ಹೆದರಿಕೆಗಳು ವಿಷಯಗಳ ಮೇಲೆ ಆಧಾರವಾಗಿರುವದಿಲ್ಲ, ಬದಲಾಗಿ ಶಾಲೆಯಲ್ಲಿರುವ ನಮ್ಮ ಸ್ನೇಹಿತರ ವಿಷಯದಲ್ಲಿ ನಾವು ಅಸಮಾಧಾನಗೊಂಡಿರುತ್ತೇವೆ. ನಾವು ಪ್ರಸಿದ್ಧರಾಗಿದ್ದರೆ ಚೆನ್ನಾಗಿರುತ್ತಾ ಇತ್ತು ಎಂದು ನಾವು ಬಯಸುತ್ತೇವೆ. ಇಂದು ನಾವು ಭೇಟಿ ಮಾಡಿದ ಹಾಸ್ಯಗಾರನು ಹೀಗೆಯೇ ಯೋಚಿಸುತ್ತಿದ್ದನು, ಜನರನ್ನು ಸಂತೋಷಪಡಿಸಲು ತನ್ನ ಮ್ಯಾಜಿಕ್ ತಂತ್ರಗಳಿಂದ ಒಳ್ಳೆಯ ಪ್ರದರ್ಶನ ಕೊಡಬೇಕೆಂಬದೇ ಆತನ ಬಯಕೆಯಾಗಿತ್ತು. ತನ್ನ ತಂತ್ರಗಳ ಮೂಲಕ ಜನರಿಗೆ ಮನೊರಂಜನೆಯನ್ನು ಕೊಡಬೇಕೆಂಬ ಒತ್ತಡ ಅವನ ಮೇಲೆ ಇತ್ತು. ನಮ್ಮ ಸ್ವಂತ ಸಂತೋಷವು ಕೆಲವೊಮ್ಮೆ ದೂರದಲ್ಲಿರುವಂತೆ ಅನ್ನಿಸುತ್ತದೆ, ಆದರೆ ನಾವು ಅಂದುಕೊಳ್ಳುವಷ್ಟು ಅದು ದೂರದಲ್ಲಿ ಇರುವದಿಲ್ಲ. "ಸಂತೋಷವಾಗಿರುವದು" ನಿಜವಾಗಿಯೂ ಸಾಧ್ಯವಾಗುವ ವಿಷಯವಾಗಿದೆ.

ನಮಗಿರುವದರಲ್ಲಿ ನಾವು ಸಮಾಧಾನದಿಂದಿರಬೇಕು ಎಂಬದು ದೇವರ ಬಯಕೆಯಾಗಿದೆ. ಯೇಸು ಕ್ರಿಸ್ತನು ಭೂಮಿಯ ಮೇಲಿದ್ದಾಗ ನಾವೆಲ್ಲರು ಅನುಭವಿಸುವ ಹೆದರಿಕೆಗಳನ್ನು ಅನುಭವಿಸಿದನು. ತನ್ನ ಶಿಷ್ಯರೊಂದಿಗೆ 3 ವರ್ಷಗಳು ಕಳೆದ ನಂತರ, ಇನ್ನೊಂದು ವಾರದಲ್ಲಿ ನಮ್ಮೆಲ್ಲರಿಗಾಗಿ ಕಟ್ಟಕಡೆಯ ಯಜ್ಞವನ್ನು ಅರ್ಪಿಸಬೇಕು ಎಂಬದನ್ನು ಯೇಸು ಕ್ರಿಸ್ತನು ಬಲ್ಲವನಾಗಿದ್ದನು. ಆ ಸಮಯದಲ್ಲಿ ಆತನು ನಮ್ಮೆಲ್ಲರ ಕೆಟ್ಟ ನಡತೆಗಳಿಗೆ ಶಿಕ್ಷೆಯನ್ನು ಅನುಭವಿಸಿದನು. ಭೂಮಿಯ ಮೇಲಿನ ಆತನ ಆ ಕಡೆಯ ವಾರದ ಪ್ರಾರಂಭದಲ್ಲಿ, ತನಗೆ ಎದುರಾಗುವ ವೇದನೆಗಳ ಅರಿವು ಹೊಂದಿದವನಾಗಿ, ಯೆರೂಸಲೇಮಿಗೆ ಹೋದನು. ಯೇಸು ಕ್ರಿಸ್ತನು ಯೆರೂಸಲೇಮಿನೊಳಗೆ ದೊಡ್ಡ ಕುದುರೆಯ ಮೇಲೆ ಸವಾರಿ ಮಾಡುತ್ತಾ, ಆತನ ಹಿಂದೆ ಮತ್ತು ಮುಂದೆ ದೊಡ್ಡ ಸೈನ್ಯದೊಂದಿಗೆ, ಯೆಹೂದ್ಯರ ಹೊಸ ಅರಸನಾಗಿ ಪ್ರವೇಶಿಸಬೇಕೆಂದು ಆತನ ಶಿಷ್ಯರು ಬಯಸಿದರು. ಯೇಸು ಕ್ರಿಸ್ತನ ಮೇಲೆ ತನ್ನ ಸುತ್ತಮುತ್ತಲಿನಲ್ಲಿದ್ದವರ ನಿರೀಕ್ಷೆಯ ಒತ್ತಡ ಬಹಳವಿತ್ತು. ನಿಜವಾದ ಅರಸನಿಗೆ ಮಹಿಮಾರ್ಥವಾದ ಫೇಸ್ ಬುಕ್ ಪುಟ ಮತ್ತು ರಾಜವಂಶದ ಕುದುರೆ ಹಾಗೂ ರಥದ ಮೇಲೆ ಹೊದಿಸಲಾಗುವ ರಾಜವಂಶದ ವಸ್ತ್ರಗಳು ಇರುತ್ತವೆ. ಆದರೆ ದೊಡ್ಡ ಕುದುರೆಯ ಮೇಲೆ ಸವಾರಿ ಮಾಡುತ್ತಾ ಮೆರವಣಿಗೆಯಾಗಿ ಬರುವ ಬದಲು, ಆತನು ಕತ್ತೆಯ ಮೇಲೆ ಕೂತು ಯೆರೂಸಲೇಮಿನೊಳಗೆ ಬಂದನು! ಆತನು ಯಾವುದೇ ಸೈನ್ಯವಿಲ್ಲದೆ ಸಣ್ಣ ಪ್ರಾಣಿಯ ಮೇಲೆ ಕೂತು ಪಟ್ಟಣದೊಳಗೆ ಬಂದನು.
ಆದರೂ ಆತನ ಸುತ್ತಮುತ್ತಲಿನಲ್ಲಿದ್ದ ಜನರು ಆತನಿಗೆ ಮೆರವಣಿಗೆ ಮಾಡಿಸಿದರು, ಆತನ ಎದುರಿನಲ್ಲಿ ತಾಳೆ ಗರಿಗಳನ್ನು ಅಥವಾ ಬಟ್ಟೆಗಳನ್ನು ಹಾಸಿದರು. ಆತನು ಯೆರೂಸಲೇಮಿನೊಳಗೆ ಪ್ರವೇಶಿಸಿದಾಗ ಆರ್ಭಟಿಸಿದರು. ಅದು ಪ್ರಮುಖವಾದ ಸಂಭ್ರಮ ಎಂದು ಆತನು ಬಲ್ಲವನಾಗಿದ್ದನು, ಆದರೆ ಜನರಿಗೆ ಅದು ಗೊತ್ತಾಗಲಿಲ್ಲ. ಆತನು ನಿಜವಾಗಿಯೂ ಅವರನ್ನು ರಕ್ಷಿಸಲು ಬಂದಿದ್ದಾನೆ ಮತ್ತು ಆತನಲ್ಲಿ ನಿಜವಾದ ಸಂತೋಷ ಹಾಗೂ ಜೀವನದ ಸಮಾಧಾನವನ್ನು ಅನುಭವಿಸಬಹುದು ಎಂಬದನ್ನು ಗ್ರಹಿಸಿಕೊಳ್ಳಲು ಜನರು ವಿಫಲರಾದರು.

ಹಾಸ್ಯಗಾರನು ಮ್ಯಾಜಿಕ್ ತಂತ್ರಗಳ ಮೂಲಕ ಒಳ್ಳೆಯ ಪ್ರದರ್ಶನವನ್ನು ಕೊಡಬಹುದು, ಆದರೆ ಜನರನ್ನು ನಗಿಸಲು ಅವನಿಂದ ಸಾಧ್ಯವಿಲ್ಲ. ಆತನು ಅವರಿಗೆ ನಗುವ ಅವಕಾಶವನ್ನು ಮಾತ್ರವೇ ಕೊಡಬಹುದು. ದೇವರು ನಮಗೆ ನಗುವ ಅವಕಾಶವನ್ನು ಕೊಡುತ್ತಾ ಇದ್ದಾನೆ  ಮತ್ತು ಇಂದು ನಾವೂ ಅಪಾಯಗಳನ್ನು ಎದುರಿಸುವ ಸಾಹಸ ಮಾಡಿದರೆ ನಮ್ಮ ಜೀವಿತಗಳಲ್ಲಿ ಸಮಾಧಾನದಿಂದ ಇರಬಹುದು. ನಿಮ್ಮ ಜೀವಿತವನ್ನು ಇತರರೊಂದಿಗೆ ಹೋಲಿಸುವದನ್ನು ನಿಲ್ಲಿಸುವಿರೋ ಮತ್ತು ಸಂತೋಷವನ್ನು ಅಂಗೀಕರಿಸಿಕೊಳ್ಳುವಿರೋ? ಸಾಕಾಗುವಷ್ಟು ಇಲ್ಲವಲ್ಲಾ ಎಂಬ ಭಯವನ್ನು ನೀವು ಪಕ್ಕಕ್ಕೆ ಇಡುವಿರೋ ಮತ್ತು ನಿಮಗಿರುವದರಲ್ಲಿ ಸಂತೋಷಿಸುವಿರೋ? ನಮ್ಮಲ್ಲಿ ಯಾರಿಗೂ ಪರಿಪೂರ್ಣವಾದ ಜೀವಿತವಿಲ್ಲ. ಆದರೆ ನಾವೆಲ್ಲರೂ ನಮಗಿರುವ ಜೀವಿತದಲ್ಲಿ ನಿಜವಾಗಿಯೂ “ಸಂತೋಷವಾಗಿರಬಹುದು”!

## ಕಂಠಪಾಠ ವಚನ

ಜ್ಞಾನೋಕ್ತಿಗಳು 15:13 “ಹರ್ಷಹೃದಯದಿಂದ ಹಸನ್ಮುಖ, ಮನೋವ್ಯಥೆಯಿಂದ ಅತ್ಮಭಂಗ.”

## ಸ್ಮಾರಕ ಚಿನ್ಹೆಗಳು




### <u>ದೃಶ್ಯ</u>

ಸಾಮಗ್ರಿಗಳು

- ವೇದಿಕೆಯ ಮಾದರಿ
  (1 ಮಗುವಿಗೆ 1 ಹಾಳೆ)
- ಬಣ್ಣದ ಬಳಪಗಳು
- ಗ್ಲೂ ಅಥವಾ ಟೇಪ್
- ಕತ್ತರಿಗಳು

ಸೂಚನೆಗಳು:

1. ಮಾದರಿಯ ಪ್ರತಿಯೊಂದು ಭಾಗವನ್ನು ಬೇರ್ಪಡಿಸಿರಿ ಅಥವಾ ಕತ್ತರಿಸಿರಿ.
2. ಮಾದರಿಯ ಭಾಗಗಳಿಗೆ ಬಣ್ಣ ಹಚ್ಚಿರಿ.
3. ಚುಕ್ಕೆಯಿರುವ ಸಾಲುಗಳಿಗನುಸಾರವಾಗಿ ಗುರುತುಗಳ ಮೇರೆಗೆ ಮಡಚಿರಿ.
4. ಅವುಗಳನ್ನು ದೃಢವಾಗಿ ಅಂಟಿಸಲು ಗ್ಲೂ ಹಾಕಿರಿ.
5. ವೇದಿಕೆಯ ಮೇಲೆ ಅವುಗಳನ್ನು ಹಂಚಿರಿ.
6. ವೇದಿಕೆಯ ಮೇಲೆ ಎಲ್ಲಾ ಪಾತ್ರಧಾರಿಗಳು ಇರುವಾಗ ಅದನ್ನು ಮಾಡಿರಿ!

ಫೊಟೊಕಾಪಿ ಹಾಳೆಯು ವಿಷಯದ ಕೊನೆಯಲ್ಲಿ ಇದೆ.

## ಈಗ ನೀವು ಪ್ರಯತ್ನಿಸಿರಿ

ಸರ್ಕಸ್ ನಲ್ಲಿ ಗಮನವನ್ನು ಸೆಳೆಯುವ ಪ್ರದರ್ಶನಗಳಲ್ಲಿ ಒಂದು ತಂತ್ರಗಳನ್ನು ಮಾಡುವದಾಗಿದೆ. ಕೆಲವು ಸಂದರ್ಭಗಳಲ್ಲಿ ಯಾವುದೇ ಸಂದೇಹವಿಲ್ಲದೆ ಅವುಗಳನ್ನು ಪ್ರದರ್ಶಿಸುವ ಜನರ ಕೌಶಲ್ಯಗಳನ್ನು ಕಂಡು ನಾವು ಬೆರಗಾಗಿದ್ದೇವೆ.

ಈ ಕಾರ್ಯಕ್ರಮದಲ್ಲಿ ಆ ಸಮಾರಂಭಗಳಲ್ಲಿ ಭಾಗಿಯಾಗುವ ಜನರಿಗೆ ಆಶ್ಚರ್ಯವನ್ನುಂಟು ಮಾಡುವ ವ್ಯಕ್ತಿಯಾಗಿರಬೇಕೆಂದು ಬಯಸುತ್ತೇವೆ. ಆದ್ದರಿಂದ ಇಲ್ಲಿ ನಾವು ಸೂಚಿಸಿರುವ ತಂತ್ರವನ್ನು ನೀವು ಅಭ್ಯಾಸ ಮಾಡಬೇಕು, ನೀವು ಇದಕ್ಕೆ ಹೆಚ್ಚಿನ ವಿಷಯಗಳನ್ನು ಸೇರಿಸಿಕೊಳ್ಳಬಹುದು ಅಥವಾ ವ್ಯತ್ಯಾಸವಾದ ಕಾರ್ಯಗಳನ್ನು ಮಾಡಬಹುದು.


### ಮ್ಯಾಗ್ನೆಟಿಕ್ ಪೆನ್ಸಿಲ್




ನಿಮ್ಮ ಕೈಗಳಲ್ಲಿ ಮ್ಯಾಗ್ನೆಟಿಸಮ್ ಇದೆ ಎಂದು ಹೇಳಿ ಮಕ್ಕಳನ್ನು ನಂಬಿಸುವ ಮೂಲಕ ಅವರ ಮೇಲೆ ಪ್ರಭಾವ ಬೀರಿರಿ. ಪ್ರಾರಂಭದ ತಂತ್ರ ಏನೆಂದರೆ ನೀವು ಜನರಿಗೆ ನಿಮ್ಮ ಕೈಯ ಹಿಂಭಾಗವನ್ನು ತೋರಿಸಬೇಕು ಮತ್ತು ನಿಮ್ಮ ಇನ್ನೊಂದು ಕೈಯ ತೋರು ಬೆರಳಿನಿಂದ ಪೆನ್ಸಿಲ್ ಅನ್ನು ಗಟ್ಟಿಯಾಗಿ ಒತ್ತಿರಿ, ಅದು ಹೇಗಿರಬೇಕೆಂದರೆ ಇನ್ನೊಂದು ಕೈಯ ಬೆರಳುಗಳು ಗಟ್ಟಿಯಾಗಿ ಒತ್ತಿದ್ದರೂ ನೀವು ಅವುಗಳನ್ನು ಬಳಸುತ್ತಿಲ್ಲ ಎಂಬದಾಗಿ ಅನ್ನಿಸಬೇಕು.

ತಂತ್ರದ ಮತ್ತೊಂದು ಭಾಗ ಏನೆಂದರೆ ನಿಮ್ಮ ಕೈಗಡಿಯಾರದ ಪಟ್ಟಿಯೊಳಗೆ ಒಂದು ಚಿಕ್ಕ ಹಲಿಗೆಯ ತುಂಡನ್ನು ಇಟ್ಟುಕೊಂಡಿರಬೇಕು ಮತ್ತು ಪೆನ್ಸಿಲ್ ಕೆಳಗೆ ಬೀಳದಂತೆ ಅದನ್ನು ಗಟ್ಟಿಯಾಗಿ ಒತ್ತಬೇಕು.





## ಡೊಂಬರಾಟ



ಸಡಿಲವಾಗಿರುವ ಹಗ್ಗ

ಸಾಮಗ್ರಿಗಳು:

- ಟೇಪ್. ಪ್ಲಾಸ್ಟಿಕ್ ಅಥವಾ ಬಳಪ
- ಕೈ ಗಡಿಯಾರ ಅಥವಾ ನಿಲ್ಲಿಸುವ ಗಡಿಯಾರ

ಸೂಚನೆಗಳು:

- 5 ಮೀಟರ್ ಉದ್ದದ ಗೆರೆಯನ್ನು ಎಳೆಯಿರಿ
- ಗುಂಪುಗಳನ್ನು ಸಮವಾಗಿ ವಿಭಾಗಿಸಿರಿ
- ಮಕ್ಕಳು ಎಳೆದಿರುವ ಗೆರೆಯ ಮೇಲೆಯೇ ಒಂದು ಕಾಲಿನಿಂದ ಕುಂಟುತ್ತಾ ಪ್ರಾರಂಭದಿಂದ ಕೊನೆಯ ತನಕ ಹೋಗಿ ನಂತರ ಹಿಂದಿರುಗಬೇಕು; ಯಾರು ಗೆರೆಯನ್ನು ತಪ್ಪುತ್ತಾರೋ ಅವರು ಪುನಃ ಪ್ರಾರಂಭಕ್ಕೆ ಬರಬೇಕು
- ಪ್ರತಿಯೊಬ್ಬ ಮಗುವಿಗೆ ಇದನ್ನು ಮಾಡಲು 3 ಅವಕಾಶಗಳು ಇರುತ್ತವೆ. ಒಂದುವೇಳೆ ಮಗು ಮೂರನೆಯ ಸಲವೂ ವಿಫಲವಾದರೆ ಗೆರೆಯ ಪ್ರಾರಂಭಕ್ಕೆ ಬರಬೇಕು ಮತ್ತು ನಿಗದಿತ ಸಮಯಕ್ಕೆ 10 ಕ್ಷಣಗಳನ್ನು ಸೇರಿಸಲಾಗುತ್ತದೆ
- ಯಾವ ತಂಡದ ಸದಸ್ಯರು ಕಡಿಮೆ ಸಮಯದಲ್ಲಿ ಆಟವನ್ನು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.

ದೊಡ್ಡ ಮಕ್ಕಳಿಗೆ, ಈ ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಚಿಕ್ಕ ಜಟಿಲ ಜಾಲ ಮಾರ್ಗವನ್ನು ಬರೆಯಿರಿ. ಪ್ರತಿಯೊಬ್ಬ ಸ್ಪರ್ಧಿಯ ಕಣ್ಣುಗಳಿಗೆ ಬಟ್ಟೆಯನ್ನು ಸುತ್ತಬೇಕು ಮತ್ತು ಅವರ ತಂಡದ ಸದಸ್ಯರು ಆ ಜಟಿಲವಾದ ಮಾರ್ಗದಲ್ಲಿ ಸಾಗಲು ಸಹಾಯ ಮಾಡಬೇಕು.

## ಮನೆಯಲ್ಲಿ

ಮಿನಿ ಚಿತ್ರಮಂದಿರ

ಮಕ್ಕಳು ದಿನದ ಸಮಯದಲ್ಲಿ ಕಲಿತಿರುವದನ್ನು ತಮ್ಮ ತಂದೆತಾಯಿಗಳೊಂದಿಗೆ ಮನೆಯಲ್ಲಿ ವಿಮರ್ಶಿಸಲು ಪ್ರೋತ್ಸಹಪಡಿಸಬೇಕೆಂದು ನಾವು ಬಯಸುತ್ತೇವೆ, ಆದ್ದರಿಂದ ಕುಟುಂಬವಾಗಿ ಸ್ವಲ್ಪ ಸಮಯ ಬೇರ್ಪಡಿಸಿಕೊಂಡು ಪ್ರತಿಯೊಬ್ಬರೂ ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕು ಎಂಬದು ನಮ್ಮ ಸಲಹೆಯಾಗಿದೆ.





ಸಾಮಗ್ರಿಗಳು:

- ದವಸಧಾನ್ಯಗಳ ಪೆಟ್ಟಿಗೆ
- ಬಣ್ಣದ ಹಾಳೆ


- ಕತ್ತರಿಗಳು ಮತ್ತು ಗ್ಲೂ ಅಥವಾ ಟೇಪ್


ಸೂಚನೆಗಳು:


- ಪೆಟ್ಟಿಗೆಯನ್ನು ಅಗಲವಾಗಿ ಕತ್ತರಿಸಿ, ವೇದಿಕೆಯನ್ನು ಮಾಡಬೇಕು
- ಬಣ್ಣದ ಹಾಳೆಯಿಂದ ಅದನ್ನು ಅಲಂಕರಿಸಬೇಕು
- ಹಾಳೆಯಿಂದ ಕಡ್ಡಿಗೆ ಅಂಟಿಸುವ ಎರಡು ಕೈಗೊಂಬೆಗಳನ್ನು ಮಾಡಿರಿ.


ಆ ದಿನ ಕಲಿತುಕೊಂಡ ಕಥೆಯನ್ನು ಪುನಃ ಸೃಷ್ಟಿಸುವದು ಮುಖ್ಯ ಆಲೋಚನೆಯಾಗಿದ್ದು, ಅವರು ಕುಟುಂಬವಾಗಿ ಪಾತ್ರಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

# ವಿದ್ಯಾರ್ಥಿ ಪುಸ್ತಕಗಳು









# ಪ್ರಶ್ನೆಗಳು ಮತ್ತು ಉತ್ತರಗಳು

## 1. ದೇವರು ಮಾಡಿರುವ ವಿಷಯಗಳಲ್ಲಿ ನೀವು ಎಂದಾದರು ಅಸಮಾಧಾನಗೊಂಡಿದ್ದೀರೋ?

ಹೌದು, ಅನೇಕ ಸಮಯಗಳಲ್ಲಿ ನಾವು ನಮಗಿರುವವುಗಳಲ್ಲಿ ಸಮಾಧಾನಪಟ್ಟಿಲ್ಲ, ಉದಾಹರಣೆಗೆ, ನಮ್ಮ ನಂಬಿಕೆ ಕಡಿಮೆಯಾಗಿದೆ. ಆದರೂ, ದೇವರ ಯೋಜನೆಗಳು ಸಂಪೂರ್ಣವಾದವುಗಳು ಎಂಬದನ್ನು ನಾವು ಅರ್ಥಮಾಡಿಕೊಳ್ಳುವಾಗ, ಜನರಾಗಿ ನಮಗೆ ಅರ್ಥವಾಗದೆ ಇರುವಂಥ ಅನೇಕ ವಿಷಯಗಳಿರುತ್ತವೆ. ಕರ್ತನು ನಮ್ಮ ಸಂಗಡ ಕಾರ್ಯಮಾಡಲು ನಾವು ಅನುಮತಿಸಬಹುದು, ಆಗ ಜೀವನದ ಪ್ರತಿಯೊಂದು ವಿಷಯದಲ್ಲಿಯೂ ಸಂತೋಷಿಸಲು ನಾವು ಪ್ರಾರಂಭಿಸುತ್ತೇವೆ. ಯೆಶಾಯ 55:9

## 2. ಯಾವುದಾದರು ಕಷ್ಟದ ಪರಿಸ್ಥಿತಿಯಲ್ಲಿ ನೀವು ದೇವರಿಗೆ ದೂರು ಸಲ್ಲಿಸಿದ್ದೀರೋ?

ಹೌದು, ಕೆಲವೊಮ್ಮೆ ನಾವು ನಡೆಯುತ್ತಿರುವ ಘಟನೆಗಳ ವಿಷಯದಲ್ಲಿ ಅಸಮಾಧಾನಗೊಂಡಿಲ್ಲ, ಆದರೆ ದೇವರಿಗೆ ದೂರುಗಳನ್ನು ಹೇಳಿದ್ದೇವೆ. ಅಂಥ ಪರಿಸ್ಥಿತಿಗಳು ಕೆಲವೊಮ್ಮೆ ನಮ್ಮ ತೀರ್ಮಾನಗಳು ಮತ್ತು ನಮ್ಮ ನಡವಳಿಕೆಗಳಿಗೆ ಸಂಬಂಧಿಸಿದವುಗಳಾಗಿವೆ, ಆದರೂ, ದೇವರು ನಮ್ಮ ಜೀವಿತದ ಅತ್ಯಂತ ಕಷ್ಟಕರ ಪರಿಸ್ಥಿತಿಗಳಲ್ಲಿ ನಮ್ಮನ್ನು ತನ್ನ ಹತ್ತಿರಕ್ಕೆ ಕರೆದುಕೊಳ್ಳುವವನಾಗಿದ್ದಾನೆ. ಕೇವಲ ಆತನು ಮಾತ್ರವೇ ನಮಗೆ ಸಮಾಧಾನ ಮತ್ತು ತೃಪ್ತಿಯನ್ನು ಕೊಡಲು ಶಕ್ತನಾಗಿದ್ದಾನೆ ಎಂಬದನ್ನು ಅರ್ಥಮಾಡಿಕೊಳ್ಳುವದನ್ನು ನಾವು ಕಲಿತುಕೊಳ್ಳುತ್ತೇವೆ. ರೋಮಾ 5:1


## 3. ಒಂದುವೇಳೆ ಯೇಸು ಕ್ರಿಸ್ತನು ನಿಮ್ಮನ್ನು ಹಾದುಹೋಗುವಾಗ, ಆತನು ಮಾಡುವ ಅದ್ಭುತಕಾರ್ಯಗಳನ್ನು ನೀವು ಗಮನಿಸಿದರೆ, ಅಂದರೆ ಕೊವಿಡ್-19 ರೀತಿಯ ಕಾಯಿಲೆಯಿಂದ ಜನರನ್ನು ಗುಣಪಡಿಸುವದನ್ನು ನೀವು ನೋಡುವಾಗ ನಿಮ್ಮ ಪ್ರತಿಕ್ರಿಯೆ ಹೇಗಿರುವದು?

ಬಹುಶಃ ಪ್ರಾರಂಭದಲ್ಲಿ, ದೇವರು ಜನರ ನಡುವೆ ಮಾಡುವ ಅದ್ಭುತಕಾರ್ಯಗಳನ್ನು ನೋಡಿ, ನಾವು ಭಾವುಕರಾಗುತ್ತೇವೆ ಅಥವಾ ನಾವು ಹೆದರಿಕೊಳ್ಳುತ್ತೇವೆ ಅಥವಾ ಸುಮ್ಮನೆ ಮೌನವಾಗಿದ್ದು ಬಿಡುತ್ತೇವೆ. ಏನೇ ಆದರೂ, ಆತನನ್ನು ಹಿಂಬಾಲಿಸುವದನ್ನು ನಾವು ಕಲಿತುಕೊಳ್ಳಬಹುದು ಮತ್ತು ಯೇಸು ಕ್ರಿಸ್ತನು ಮಾಡುವ ಎಲ್ಲಾ ಕಾರ್ಯಗಳಿಗೆ ಅಥವಾ ನಮ್ಮ ಜೀವಿತದಲ್ಲಿ ಮಾಡುವ ಕಾರ್ಯಗಳಿಗೆ ಸಾಕ್ಷಿಗಳಾಗಿರಬಹುದು. ಮತ್ತಾಯ 16:24


## ಸ್ಮಾರಕ


ಸಮಾಧಾನ


ನಿಮಗಿರುವವುಗಳಲ್ಲಿ
ಸಂತೋಷವಾಗಿರಿ




ಜೀವನದ ಸರ್ಕಸ್!
ಯೇಸು ಕ್ರಿಸ್ತನೊಂದಿಗೆ ಅಪಾಯಗಳನ್ನು
Equip & Grow
ಮಕ್ಕಳೇ ಪ್ರಮುಖರು
ಜ್ಞಾನೋಕ್ತಿಗಳು 15:13 " ಹರ್ಷಹೃದಯದಿಂದ
ಮುಖ ಅರಳುವುದು; ಮನೋವ್ಯಥೆಯಿಂದ ಚೈತನ್ಯ
ಕುಂದುವುದು."


ಭದ್ರತೆ

# 2 ಪ್ರಯತ್ನಿಸಿರಿ!

ಭಯ: ಸೋತುಹೋಗುವ ಅಥವಾ ತಪ್ಪುಗಳಾಗುವ ಭಯ.

## ಐಸ್ ಬ್ರೇಕರ್

ಬೆರೆಸುವದು ಮತ್ತು ಭೇಟಿ ಮಾಡುವದು

ಗೋಲಿಗಳನ್ನು, ಹಲಗೆಯ ತುಂಡುಗಳನ್ನು ಅಥವಾ ವಿವಿಧ ಬಣ್ಣದ ಹಾಳೆಗಳನ್ನು ಸಿದ್ಧಮಾಡಿರಿ.

ಪ್ರತಿಯೊಂದು ಮಗುವಿಗೆ ಹಲವನ್ನು ತೆಗೆದುಕೊಳ್ಳಲು (ಅಥವಾ ನೀವು ಇಟ್ಟಿರುವವುಗಳನ್ನು ತೆಗೆದುಕೊಳ್ಳಲು ಹೇಳಿರಿ).

ಪ್ರತಿಯೊಂದು ಬಣ್ಣಕ್ಕೆ ವಿವಿಧ ಬಣ್ಣವನ್ನು ನೇಮಿಸಿರಿ, ಉದಾಹರಣೆಗೆ:

ನೀಲಿ: ಕುಟುಂಬ.

ಹಸಿರು: ಶಾಲೆ.

ಹಳದಿ: ಸ್ನೇಹಿತರು.

ಕೆಂಪು: ಹವ್ಯಾಸಗಳು.

ಕಂದು: ಸಂಗೀತ/ಚಲನಚಿತ್ರಗಳು.

ಅವರ ಕೈಗಳಲ್ಲಿರುವ ವಸ್ತುಗಳ ಸಂಖ್ಯೆಯು ಅವರು ಎಷ್ಟು ಪರಿಸ್ಥಿತಿಗಳನ್ನು ಎಣಿಸಬೇಕು ಎಂಬದನ್ನು ದೃಢಪಡಿಸುತ್ತದೆ. ಉದಾಹರಣೆಗೆ ಒಂದುವೇಳೆ ಅವರು ಎರಡು ಹಳದಿ ತೆಗೆದುಕೊಂಡಿದ್ದರೆ, ಎರಡು ವಿಷಯಗಳನ್ನು ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು.

## ಪರದೆಯ ಹಿಂದೆ

ಹಾಸ್ಯಗಾರನು ತನ್ನ ಸ್ನೇಹಿತನಾದ, ಬಿಗಿ ಹಗ್ಗದ ಮೇಲೆ ನಡೆಯುವವನ ಮೂಲಕ ಒಳ್ಳೆಯ ಪಾಠವನ್ನು ಕಲಿತುಕೊಂಡನು. ಅವನು ಹಗ್ಗದ ಮೇಲೆ ಹೆಜ್ಜೆಯಿಡುವದನ್ನು ಕಲಿತುಕೊಳ್ಳಲು ಪ್ರಯತ್ನಿಸುತ್ತಿದ್ದನು, ಆದರೆ ಪ್ರತಿ ಬಾರಿಯೂ ಬಹಳವಾಗಿ ಹೆದರಿಕೊಳ್ಳುತ್ತಿದ್ದನು. ಹಗ್ಗದ ಮೇಲಿಂದ ಬಿದ್ದು ಹೋಗುವೆನು ಎಂಬ ಹೆದರಿಕೆ ಅವನಿಗಿತ್ತು, ಆದ್ದರಿಂದ ಪ್ರಯತ್ನ ಮಾಡಲು ಅವನಿಗೆ ಮನಸ್ಸಿರಲಿಲ್ಲ. ಅವನ ಸ್ನೇಹಿತನು ಅವನಿಗೆ ಕೆಳಗೊಂದು ಹಗ್ಗವಿದೆ ನೀನು ಬಿದ್ದರೂ ಅದು ನಿನ್ನನ್ನು ಹಿಡಿದುಕೊಳ್ಳುವದು ಎಂದು ಹೇಳಿದರೂ, ಹಾಸ್ಯಗಾರನು ಮಾತ್ರ ಹಗ್ಗದ ಮೇಲೆ ನಡೆಯುವಾಗ ಹಾಗಾಗಬಹುದು, ಹೀಗಾಗಬಹುದು ಎಂಬ ಮಾತುಗಳನ್ನು ಹಾಸ್ಯಗಾರನು ಹೇಳುತ್ತಲೇ ಇದ್ದನು. ಸೋತು ಹೋಗುವೆನು ಎಂಬ ಅವನ ಭಯ ಅವನು ಪ್ರಯತ್ನಿಸದಂತೆ ಅವನನ್ನು ತಡೆಯುತ್ತದೆಯೇ? ಮತ್ತೊಮ್ಮೆ ಸಿಂಹವನ್ನು ಪಳಗಿಸುವವನು ಎದುರಾಗಿ ಬಂದನು ಮತ್ತು ಹಾಸ್ಯಗಾರನು ನಾವು ಅವನ ಸ್ನೇಹಿತನಾಗಿದ್ದರೆ ಚೆನ್ನಾಗಿರುತ್ತಾ ಇತ್ತು ಎಂದು ಯೋಚಿಸಿದನು.

## ಪ್ರದರ್ಶನ ಪ್ರಾರಂಭವಾಗುತ್ತದೆ!

ಪೇತ್ರನು ಯೇಸು ಕ್ರಿಸ್ತನನ್ನು 3 ಬಾರಿ ಅಲ್ಲಗಳೆದನು, ಲೂಕ 22:34, 54-62
-ಸೋತುಹೋಗುವ ಅಥವಾ ತಪ್ಪುಗಳಾಗುವ ಭಯ-

ಪ್ರತಿದಿನ ನಾವು ಏನನ್ನಾದರು ಪ್ರಯತ್ನಿಸುವ ಮತ್ತು ಸೋತುಹೋಗುವ ಭಯವನ್ನು ಎದುರಿಸುತ್ತೇವೆ. ನಮ್ಮಿಂದ ತಪ್ಪುಗಳಾಗುವದೇನೋ ಎಂದು ನಾವು ಹೆದರಿಕೊಳ್ಳುತ್ತೇವೆ. ಜನರು ಏನು ಹೇಳುತ್ತಾರೆ? ನಾವು ಬಿದ್ದುಹೋಗುತ್ತೇವೆ ಮತ್ತು ಮುಖಕ್ಕೆ ಮಣ್ಣು ಅಂಟುಕೊಳ್ಳುತ್ತದೆ ಏನೋ? ಕೆಲವೊಮ್ಮೆ ನಾವು ನಮ್ಮ ಈ ಹೆದರಿಕೆಯನ್ನು ಜಯಿಸಬಹುದು ಮತ್ತು ಮುಂದೆ ಸಾಗಬಹುದು ಹಾಗೂ ಹೊಸದನ್ನು ಪ್ರಯತ್ನಿಸಬಹುದು! ನಾವು ನಿಜವಾಗಿಯೂ ಖುಷಿಪಡಬಹುದು ಮತ್ತು ಇದರಲ್ಲಿ ನಮಗೆ ನಿಜವಾಗಿಯೂ ಸಾಮರ್ಥ್ಯವಿದೆ ಎಂದು ತಿಳಿದುಕೊಳ್ಳಬಹುದು! ಅಥವಾ ನಮಗೆ ಇದರಲ್ಲಿ ಸಾಮರ್ಥ್ಯ ಇಲ್ಲದೆ ಇರಬಹುದು ಮತ್ತು ಸುಮ್ಮನಾಗುವ ತೀರ್ಮಾನಕ್ಕೆ ನಾವು ಬರಬಹುದು. ಆದರೆ ಸೋತುಹೋಗುವೆನು ಎಂಬ ಭಯ ನಾವು ಕಾರ್ಯಗಳನ್ನು ಪ್ರಯತ್ನಿಸದಂತೆ ನಮ್ಮನ್ನು ತಡೆಯುವಾಗ ಜೀವನದ ಆಯ್ಕೆಗಳು ಬಹಳವಾಗಿ ಕಡಿಮೆಯಾಗುತ್ತವೆ.
ನಮ್ಮ ಸ್ನೇಹಿತನಾದ ಹಾಸ್ಯಗಾರನು ಹಗ್ಗದ ಮೇಲೆ ಹೆಜ್ಜೆ ಇಡಲು ಪ್ರಯತ್ನವನ್ನು ಸಹ ಮಾಡದೆ ಇರುವದಕ್ಕೆ ಇದು ಸಮಾನವಾಗಿದೆ. ಅದರ ಮೇಲೆ ನಡೆಯುವ ಸಾಮರ್ಥ್ಯ ತನಗಿದೆಯೋ ಇಲ್ಲವೋ ಎಂಬ ತಿಳುವಳಿಕೆಯೂ ಅವನಿಗೆ ಇಲ್ಲ. ಅವನು "ಸುಮ್ಮನೆ ಮಾಡಲು" ಸಹ ಸಿದ್ಧನಿರಲಿಲ್ಲ.
ಹೊರಗೆ ಬಂದು ಪ್ರಯತ್ನಿಸಿರಿ ಎಂದು ಯೇಸು ಕ್ರಿಸ್ತನು ನಮ್ಮನ್ನು ಪ್ರೋತ್ಸಾಹಪಡಿಸುವವನಾಗಿದ್ದಾನೆ. ಒಂದುದಿನ ಆತನ ಪೇತ್ರನಿಗೆ ನೀನು ದೋಣಿಯಿಂದ ಇಳಿದು ನೀರಿನ ನಡೆ ಎಂದು ಹೇಳಿದನು! ಪೇತ್ರನು ಪ್ರಯತ್ನಿಸಿದನು, ಆದರೆ ಸೋತುಹೋದನು, ನೀರಿನೊಳಗೆ ಮುಳುಗಲು ಪ್ರಾರಂಭಿಸಿದನು. ಚಿಂತಿಸುವ ಅವಶ್ಯಕತೆಯಿಲ್ಲ ಯಾಕಂದರೆ ಅವನು ಪೂರ್ತಿಯಾಗಿ ಮುಳುಗಲಿಲ್ಲ, ಯೇಸು ಕ್ರಿಸ್ತನು ಅವನನ್ನು ಮೇಲಕ್ಕೆ ಎತ್ತಿದನು. ತನ್ನ ಶಿಷ್ಯರಲ್ಲಿ ಒಬ್ಬನು ದೋಣಿಯಿಂದ ಇಳಿದು ಬಂದದ್ದನ್ನು ನೋಡಿ ಯೇಸು ಕ್ರಿಸ್ತನಿಗೆ ಬಹಳ ಸಂತೋಷವಾಯಿತು. ಇಂದಿನ ಸತ್ಯವೇದದ ಕಥೆಯಲ್ಲಿ, ಪೇತ್ರನು ಮತ್ತೊಮ್ಮೆ ತನ್ನ ಹೆದರಿಕೆಗಳನ್ನೆಲ್ಲಾ ಬದಿಗಿಟ್ಟು ಪ್ರಯತ್ನಿಸಲು ಬಯಸುವವನಾಗಿದ್ದಾನೆ. ಕಡೇ ಭೋಜನದ ಸಮಯದಲ್ಲಿ ಅವನು ಯೇಸು ಕ್ರಿಸ್ತನಿಗೆ ಹೇಳಿದ್ದೇನೆಂದರೆ, "ಕರ್ತನೇ ನಾನು ನಿನ್ನ ಸಂಗಡ ಸೆರೆಮನೆಗೆ ಬರಲು ಮತ್ತು ಸಾಯಲು ಸಹ ಸಿದ್ಧನಾಗಿದ್ದೇನೆ!"
ಪೇತ್ರನು ತನ್ನನ್ನು ಧೈರ್ಯಶಾಲಿ ಅಂದುಕೊಂಡಿದ್ದನು.
ಆದರೆ ಪೇತ್ರನು ಈ ಸಲ ಸೋತುಹೋಗುವನು ಅಥವಾ ತಪ್ಪು ಮಾಡುವನು ಎಂಬದನ್ನು ಯೇಸು ಕ್ರಿಸ್ತನು ಅರಿತಿದ್ದನು. ಈ ಸಲ ಪೇತ್ರನು ಧೈರ್ಯವಾಗಿ ಮಾತನಾಡುವ ಬದಲು ತನಗೆ ಯೇಸು ಕ್ರಿಸ್ತನು ಯಾರು ಎಂದು ಗೊತ್ತೇ ಇಲ್ಲ ಎಂಬದಾಗಿ ಹೇಳಿದನು. ಯೇಸು ಕ್ರಿಸ್ತನು ಪೇತ್ರನಿಗೆ ಹೇಳಿದ್ದೇನೆಂದರೆ, "ಇಂದು ಕೋಳಿ ಕೂಗುವ ಮೊದಲು, ಮೂರು ಸಲ ನೀನು ನನ್ನನ್ನು ಅಲ್ಲಗಳೆಯುವೆ." ಇದಲ್ಲದೆ ಭವಿಷ್ಯದಲ್ಲಿ ಪೇತ್ರನು ಧೈರ್ಯಶಾಲಿಯಾಗಿರುವನು ಮತ್ತು ತನ್ನ ನಂಬಿಕೆಗನುಸಾರವಾಗಿ ನಡೆದುಕೊಳ್ಳುವನು ಎಂಬದನ್ನೂ ಯೇಸು ಕ್ರಿಸ್ತನು ಬಲ್ಲವನಾಗಿದ್ದನು!
ಯೇಸು ಕ್ರಿಸ್ತನನ್ನು ಬಂಧಿಸಿದ ನಂತರ, ಪೇತ್ರನು ದೂರದಿಂದ ಅವರನ್ನು ಹಿಂಬಾಲಿಸಿಕೊಂಡು ಅಲ್ಲಿ ನಡೆಯುವ ಕಾರ್ಯಗಳನ್ನು ತಿಳಿದುಕೊಳ್ಳಲು ಬಯಸಿದನು. ಅವನು ಚಳಿಗೆ ಬೆಂಕಿ ಕಾಯಿಸಿಕೊಳ್ಳುತ್ತಿದ್ದ ಜನರ ಸಂಗಡ ಕುಳಿತುಕೊಂಡನು, ಅವರೆಲ್ಲರು ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತಾ ಇದ್ದರು. ಒಬ್ಬ ದಾಸಿ ಯೇಸು ಕ್ರಿಸ್ತನನ್ನು ನೋಡಿದಳು ಮತ್ತು ಹೀಗೆ ಹೇಳಿದಳು, "ನೀನೂ ಅವರಲ್ಲಿ ಒಬ್ಬನು!" ಅಂದರೆ ಪೇತ್ರನೂ ಯೇಸು ಕ್ರಿಸ್ತನ ಸಂಗಡ ಇದ್ದವರಲ್ಲಿ ಒಬ್ಬನೆಂದು ದೃಢವಾಗಿ ಹೇಳಿದಳು. ಅದಕ್ಕೆ ಪೇತ್ರನು

ಹೇಳಿದ್ದೇನೆಂದರೆ, “ನಾನು ಆತನನ್ನು ಅರಿಯೆನಮ್ಮಾ!” (ಇದು ಶುದ್ಧ ಸುಳ್ಳು). ಪೇತ್ರನು 3 ಸಲ ಅಲ್ಲಗಳೆದ ನಂತರ, ಕೋಳಿ ಕೂಗಿತು.

ಈ ಸಲ ಪೇತ್ರನು ತಪ್ಪು ಮಾಡಿದರೂ, ಪೇತ್ರನು ಪ್ರಯತ್ನವನ್ನು ಮುಂದುವರೆಸಿದ್ದು ಒಳ್ಳೆಯ ಸಂಗತಿಯಾಗಿದೆ. ಕೆಲವೊಮ್ಮೆ ಅವನು ಬಹಳ ಧೈರ್ಯದಿಂದ ಅನೇಕ ಜನರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸಿದನು. ಯೇಸು ಕ್ರಿಸ್ತನು ದೃಢವಾದ ಶಿಷ್ಯನಾದನು ಮತ್ತು ಆದಿ ಸಭೆಯಲ್ಲಿ ಪ್ರಮುಖ ನಾಯಕನಾದನು. ಒಂದುವೇಳೆ ಪೇತ್ರನು ಇಂದು ನಾವು ನೋಡಿದ ಹಾಸ್ಯಗಾರನಂತೆ, ಪ್ರಯತ್ನವನ್ನೂ ಮಾಡದೆ ಹೋಗಿದ್ದರೆ ಅವನ ಜೀವಿತದಲ್ಲಿ ಇಂಥ ಕಾರ್ಯಗಳಾಗಲು ಸಾಧ್ಯವೇ ಇರುತ್ತಿರಲಿಲ್ಲ. ನನಗೂ ನಿಮಗೂ ಹೊಸ ಕಾರ್ಯಗಳನ್ನು ಪ್ರಯತ್ನಿಸುವದು ಕಷ್ಟವಾಗುತ್ತದೆ ಯಾಕಂದರೆ ಅನೇಕ ಸಲ ನಾವು ಸೋತುಹೋಗುತ್ತೇವೆಂದು ಭಯಪಡುತ್ತೇವೆ. ತಪ್ಪು ಮಾಡುವಾಗ ಜನರು ನಮ್ಮನ್ನು ನೋಡಿ ನಗುವದು ನಮಗೆ ಇಷ್ಟವಾಗುವದಿಲ್ಲ. ಆದರೆ ಇದರಿಂದ ನಮ್ಮ ಜೀವಿತವು ನಿರಾಸೆ ಮತ್ತು ಒಂಟಿತನಗಳಿಗೆ ಒಳಗಾಗುತ್ತದೆ. ನಾವು ಹೊರಗೆ ಬರಬೇಕು ಮತ್ತು ಎಲ್ಲವುಗಳನ್ನು ಮಾಡುವ ಸಾಮರ್ಥ್ಯ ನಮಗೆ ಇಲ್ಲವಾದರೂ ಹೊಸ ಕಾರ್ಯಗಳನ್ನು ಪ್ರಯತ್ನಿಸಬೇಕು, ಇದಲ್ಲದೆ ಪೇತ್ರನ ಹಾಗೆ ನಮ್ಮಿಂದ ಕೆಲವು ತಪ್ಪುಗಳು ಸಹ ನಡೆಯುತ್ತವೆ. ನೀವು ನಿಮ್ಮ ಹೆದರಿಕೆಗಳನ್ನು ಕಡೆಗಣಿಸಿ “ಪ್ರಯತ್ನಿಸಲು” ಬಯಸುತ್ತೀರೋ?

## ಕಂಠಪಾಠ ವಚನ

ಜ್ಞಾನೋಕ್ತಿಗಳು 30:5 “ದೇವರ ಪ್ರತಿಯೊಂದು ಮಾತು ಶುದ್ಧವಾದದ್ದು, ಆತನು ಶರಣಾಗತರಿಗೆ ಗುರಾಣಿಯಾಗಿದ್ದಾನೆ.”

## ಡೊಂಬರಾಟ



ಅಡೆತಡೆಗಳು: ದುಂಡುಕಟ್ಟುವದು

ಸಾಮಗ್ರಿಗಳು:

- ದುಂಡುಕಟ್ಟು
- ಆಯ್ಕೆ: ಬೆಂಕಿ ಹೊತ್ತಿಸಲಾಗಿದೆ ಎಂದು ಕಾಣಿಸುವ ಹಾಗೆ ಅಲಂಕಾರ ಮಾಡಬೇಕು.

ಸೂಚನೆಗಳು:

- ಮೊದಲನೆಯ ಸಲ, ದುಂಡನ್ನು ನೆಲದ ಮೇಲೆ ನಿಲ್ಲಿಸಬೇಕು
- ನಂತರ ಸ್ವಲ್ಪ ಮೇಲಕ್ಕೆ ಎತ್ತಿ ಹಿಡಿದು ಜಿಗಿಯುವಂತೆ ಹೇಳಬೇಕು
- ಪ್ರತಿ ಹಂತದಲ್ಲಿ ಅವರು ಜಿಗಿಯುವಾಗಲೂ ಅವರಿಗೆ ಅಂಕಗಳು ಸಿಗುತ್ತವೆ

ಸ್ವಲ್ಪ ದೊಡ್ಡವರ ವಿಷಯಕ್ಕೆ ಬರುವಾಗ ದುಂಡಿನ ಒಳಗೆ ಜಿಗಿಯುವಾಗ ಗಿರಗಿಟ್ಲೆ ಹೊಡೆಯುವಂತೆ ಹೇಳಿರಿ, ಆದರೆ ಗಾಯಗಳಾಗದಂತೆ ಎಚ್ಚರದಿಂದ ನಡೆದುಕೊಳ್ಳಬೇಕು.

# ಈಗ ನೀವು ಪ್ರಯತ್ನಿಸಿರಿ



ಶರ್ಟ್ ಬದಲಾವಣೆ

ಸುತ್ತಮುತ್ತ ನಡೆಯುತ್ತಿರುವಾಗಲೇ ಎಲ್ಲರ ಎದುರು ನಿಮ್ಮ ಶರ್ಟ್ ಬದಲಾಯಿಸಿಕೊಳ್ಳಿರಿ. ತಂತ್ರ ಏನೆಂದರೆ ಮೂರು ಶರ್ಟ್ ಹಾಕಿಕೊಳ್ಳಬೇಕು, ಟಿ-ಶರ್ಟ್, ಗುಂಡಿಗಳನ್ನು ಹಾಕಿಕೊಳ್ಳದ ಶರ್ಟ್ ಮತ್ತು ಇನ್ನೊಂದು ಟಿ-ಶರ್ಟ್. ಮೇಲೆ ಹಾಕಿಕೊಂಡಿರುವ ಟಿ ಶರ್ಟ್ ಅನ್ನು ನಿಮ್ಮ ತಲೆಯ ತನಕ ಮೇಲೆತ್ತಿರಿ ಮತ್ತು ಗುಂಡಿಗಳನ್ನು ಹಾಕದೆ ಇರುವ ಶರ್ಟ್ ನ ಕುತ್ತಿಗೆಯ ತನಕ ಅದನ್ನು ಸುತ್ತಿರಿ.

ನೀವು ಹಿಂದಿರುಗುವಾಗ ಮತ್ತು ಜನರ ಕಡೆಗೆ ಬೆನ್ನು ಮಾಡುವಾಗ ತಂತ್ರವು ನೆರವೇರುತ್ತದೆ. ಆ ಕ್ಷಣದಲ್ಲಿ ಮೇಲಿರುವ ಟಿ ಶರ್ಟ್ "ತೆಗೆದುಬಿಡಿರಿ" ಮತ್ತು ನಿಮ್ಮ ಕುತ್ತಿಗೆಗೆ ಸುತ್ತಿಕೊಳ್ಳಿರಿ, ಆದರೆ ಅದು ತೆರೆದಿರುವ ಶರ್ಟ್ ಕಾಲರ್ ಕೆಳಗೆ ಅಡಗಿರಬೇಕು. ಆಗ ಅಲ್ಲೊಂದು ಆಶ್ಚರ್ಯವಿರುತ್ತದೆ! ಮತ್ತೊಂದು ಶರ್ಟ್ ಹಾಗೆಯೇ ಇರುತ್ತದೆ. ಶರ್ಟ್ ಗಳು ಬೇರೆ ಬೇರೆ ಬಣ್ಣದವುಗಳಾಗಿದ್ದರೆ ಒಳ್ಳೆಯದು. ಜನರ ಎದುರು ಮಾಡುವ ಮೊದಲು ಹಲವು ಸಲ ಅಭ್ಯಾಸ ಮಾಡುವದನ್ನು ಮರೆಯಬೇಡಿರಿ.

# ಸ್ಮಾರಕ ಚಿನ್ಹೆ




ಬ್ಯಾಡ್ಜ್

ಸಾಮಗ್ರಿಗಳು:

- ಬ್ಯಾಡ್ಜ್ ಮಾದರಿ
- ಮೆಡಲ್ (1 ಮಗುವಿಗೆ ಒಂದು)
- ಕರ್ಲಿ ರಿಬ್ಬನ್ 1 ಮೀಟರ್ (1 ಮಗುವಿಗೆ ಒಂದು)
- ಒಂದು ಮಗುವಿಗೆ 20 ಮಣಿಗಳು.
- ಆಯ್ಕೆ: ಬಣ್ಣದ ಬಳಪಗಳು, ಪೆನ್ಸಿಲ್ ಅಥವಾ ಮಾರ್ಕರ್ಸ್.


ಸೂಚನೆಗಳು:

1. ಮಾದರಿಯ ಭಾಗವನ್ನು ಕತ್ತರಿಸಿರಿ ಅಥವಾ ಬೇರ್ಪಡಿಸಿರಿ.
2. ಬ್ಯಾಡ್ಜ್ ಗೆ ಬಣ್ಣ ಹಚ್ಚಿರಿ.
3. ಗುರುತಿಸಲಾಗಿರುವ ರಂಧ್ರಗಳೊಳಗೆ ಕರ್ಲಿ ರಿಬ್ಬನ್ ಹಾಕಿರಿ.
4. ಕರ್ಲ್ ನ ಪ್ರತಿಯೊಂದು ಕಡೆಗಳಲ್ಲಿಯೂ ಮಣಿಗಳನ್ನು ಹಾಕಿರಿ.
5. ಅದಕ್ಕೆ ದಾರವನ್ನು ಕಟ್ಟಿರಿ ಮತ್ತು ಮೆಡಲ್ ನಿಮ್ಮ ಕುತ್ತಿಗೆಗೆ ಹಾಕಿಕೊಳ್ಳಿರಿ.

ಫೋಟೋಕಾಪಿ ಹಾಳೆಯು ಈ ವಿಷಯದಲ್ಲಿ ಕಡೆಯಲ್ಲಿದೆ.

# ವಿದ್ಯಾರ್ಥಿ ಪುಸ್ತಕಗಳು


| | | | | | | | | | |
|---|---|---|---|---|---|---|---|---|---|
| ಮು | ಸಂ | ನೀ | ಸು | ರ | ಕ್ಷಿ | ತ | ಭ | ಸಂ | ಪ್ರ |
| ಳು | ಸಂ | ನ | ದೋ | ದೆ | ರು | ಕೆ | ದೋ | ಲ್ | ಯು |
| ಗು | ತೋ | ಲ್ಯ | ರ | ವೈ | ಯ | ಊ'ದ | ದ್ದೆ | ಣಿ | ತ್ನ |
| ತ್ತಿ | ಷ | ಡೆ | ಬ್ಬೈ | ಕೆ | ಬ | ತ್ತಿ | ಡೆ | ದ್ದೆ | ನೀ |
| ದೆ | ಕೆ | ನಂ | ಸು | ತ್ತಿ | ದ್ದೆ | ಲ್ಯ | ಲ್ಯ | ರು | ಡೆ |
| ನೀ | ರು | ಸು | ಬಿ | ರು | ದೋ | ಕೆ | ಸಂ | ದೆ | ನ |
| ದೆ | ದ್ದೆ | ವೈ | ಣಿ | ಕೆ | ವೈ | ದೆ | ಯೇ | ರಿ | ದೆ |
| ಲ್ | ಒ | ಡೆ | ಸು | ಬ್ಬೈ | ಯ | ಸು | ಲ್ಯ | ಯಿ | ತ್ತಿ |
| ದ್ದೆ | ಕೆ | ಣಿ | ಭ | ರ | ದೆ | ಲ್ | ರು | ಡೆ | ಸಂ |
| ರ | ಬ್ಬೈ | ಯ | ಲ್ಯ | ನ | ಡೆ | ದೆ | ದೋ | ನ | ಳು |
| ವೈ | ಸಂ | ತ್ತಿ | ಸ | ತ್ಯ | ವೇ | ದ | ಭ | ತ್ತಿ | ಮು |




ಪುನರಾವರ್ತಿತವಾಗದ ಒಂದು ಸಂಖ್ಯೆ ಇದೆ. ಯಾವುದು? 13

ಮೂರು ಸಲ ಪುನರಾವರ್ತಿತವಾಗಿರುವ ಒಂದು ಸಂಖ್ಯೆ ಇದೆ, ಅದು ಯಾವುದು?10


ಬಹಳಷ್ಟು ಸಲ ಪುನರಾವರ್ತಿತವಾಗಿ ರುವ ಒಂದು ಸಂಖ್ಯೆ ಇದೆ, ಅದು ಯಾವುದು? 2

 3

 14

 5

 6



# ಪ್ರಶ್ನೆಗಳು ಮತ್ತು ಉತ್ತರಗಳು

1. ನೀವು ಎಂದಾದರು ಹೆದರಿಕೊಂಡಿದ್ದೀರೋ ಮತ್ತು ದೇವರು ನಿಮ್ಮ ಸಂಗಡ ಇದ್ದರೂ ಕಠಿಣ ಪರಿಸ್ಥಿತಿಗಳನ್ನು ಎದುರಿಸಲು ಹಿಂಜರಿದಿದ್ದೀರೋ?

ಕೆಲವೊಮ್ಮೆ ನಾಚಿಕೆಗೆಟ್ಟ ಕಾರ್ಯಗಳ ವಿಷಯದಲ್ಲಿ ಸತ್ಯವನ್ನು ಹೇಳಲು ನಾವು ಹೆದರಿಕೊಳ್ಳುತ್ತೇವೆ ಅಥವಾ ಆ ಕ್ಷಣದಲ್ಲಿ ತೊಂದರೆಗಳಿಗೆ ಒಳಗಾಗುವರೇನೋ ಎಂಬ ಭಯದಿಂದ ಇತರರನ್ನು ಸೇರಿಸಿಕೊಳ್ಳಲು ನಾವು ಹೆದರುತ್ತೇವೆ. ನಮ್ಮ ತೀರ್ಮಾನಗಳ ಪರಿಣಾಮಗಳನ್ನು ನಾವು ಯಾವಾಗಲೂ ಎದುರಿಸಬೇಕಾಗುತ್ತದೆ ಆದರೆ ಒಂದುವೇಳೆ ನಾವು ಯಾವಾಗಲೂ ಧೈರ್ಯಶಾಲಿಗಳಾಗಿದ್ದರೆ ಮತ್ತು ಯಥಾರ್ಥರಾಗಿದ್ದರೆ ಅರ್ಥಮಾಡಿಕೊಳ್ಳಲು ದೇವರು ನಮಗೆ ಸಹಾಯ ಮಾಡುವನು ಹಾಗೂ ಪರಿಣಾಮಾಗಳು ಹೆಚ್ಚು ವೇದನೆಯುಳ್ಳವುಗಳಾಗಿರುವದಿಲ್ಲ. ರೋಮಾ 8:37

2. ನೀವು ಎಂದಾದರು ಯೇಸು ಕ್ರಿಸ್ತನನ್ನು ಅಲ್ಲಗಳೆದಿದ್ದೀರೋ ಮತ್ತು ಅಲ್ಲಗಳೆದ ನಂತರ ನಿಮ್ಮ ಭಾವನೆ ಹೇಗಿತ್ತು?

ಬಹಳಷ್ಟು ಸಮಯಗಳಲ್ಲಿ ನಮ್ಮ ಜೊತೆಗಾರರೊಂದಿಗೆ ಅಥವಾ ಸ್ನೇಹಿತರೊಂದಿಗೆ ಯೇಸು ಕ್ರಿಸ್ತನ ಬಗ್ಗೆ ಮಾತನಾಡುವ ಅವಕಾಶವು ನಮಗೆ ಸಿಗುತ್ತದೆ, ಆದರೆ ಭಯ ನಮ್ಮನ್ನು ಆವರಿಸಿಕೊಳ್ಳುವಾಗ ಆತನ ಬಗ್ಗೆ ಮಾತನಾಡಲು ನಾವು ಹಿಂಜರಿಯುತ್ತೇವೆ. ಒಂದು ರೀತಿಯಲ್ಲಿ ಇದು ನಮ್ಮ ನಂಬಿಕೆಯನ್ನು ಮತ್ತು ಯೇಸು ಕ್ರಿಸ್ತನನ್ನು ಅಲ್ಲಗಳೆಯುವದಕ್ಕೆ ಸಮಾನವಾಗಿದೆ. ದೀರ್ಘಸಮಯದ ತನಕ ನಮಗೆ ಬಹಳ ಬೇಸರವಾಗುತ್ತದೆ ಅಥವಾ ನಾವು ನಿರಾಸೆಯನ್ನು ಅನುಭವಿಸಬೇಕಾಗುತ್ತದೆ, ಯಾಕಂದರೆ ಆತನು ನಮ್ಮನ್ನು ಎಂದಿಗೂ ಅಲ್ಲಗಳೆದಿಲ್ಲ. ಆದರೆ ಬೇಸರವಾಗುವದು ಸಹ ನಾವು ಹಿಂದೆ ಮಾಡಲು ಆಗದ ಕಾರ್ಯವನ್ನು ಹೊಸದಾಗಿ ಮಾಡಲು ನಮಗೆ ಹೊಸ ಅವಕಾಶವನ್ನು ಒದಗಿಸುತ್ತದೆ. 1 ಯೋಹಾನ 1:9

3. ನಿಮ್ಮ ಪ್ರಿಯ ಸ್ನೇಹಿತ ಇತರರ ಎದುರಿನಲ್ಲಿ ನಿಮ್ಮನ್ನು ಅಲ್ಲಗಳೆಯುವಾಗ ನಿಮಗೆ ಹೇಗೆ ಅನ್ನಿಸುತ್ತದೆ?

ಅನೇಕ ಸಮಯಗಳಲ್ಲಿ ನಮಗೆ ಬೇಸರವಾಗುವಂಥ ಕಾರ್ಯಗಳನ್ನು ಮಾಡುವ ನಮ್ಮ ಸ್ನೇಹಿತನ ಮೇಲೆ ನಮಗೆ ಬಹಳ ಕೋಪ ಬರುತ್ತದೆ, ಆದರೆ ಒಂದುವೇಳೆ ಅವನು ನಿಮ್ಮ ಸ್ನೇಹವನ್ನೇ ಅಲ್ಲಗಳೆದರೆ, ನೀವು ಆ ಸ್ನೇಹವನ್ನು ಶಾಶ್ವತವಾಗಿ ಕಳೆದುಕೊಳ್ಳುವಿರಿ. ಪ್ರಾರಂಭದಲ್ಲಿ ನಿರಾಸೆಯಾಗುತ್ತದೆ, ನಂತರ ನಮ್ಮನ್ನು ನಾಚಿಕೆಗೆ ಗುರಿಪಡಿಸಿದವರ ಮೇಲೆ ಕೋಪ ಬರುತ್ತದೆ ಹಾಗೂ ಅವರನ್ನು ತಿರಸ್ಕರಿಸುತ್ತೇವೆ. ನಾವು ಪಾಪಿಗಳಾಗಿದ್ದಾಗಲೂ ಯೇಸು ಕ್ರಿಸ್ತನು ನಮಗೆ ಪ್ರಾಣ ಕೊಟ್ಟದ್ದು ಅತ್ಯಂತ ಸ್ಪಷ್ಟವಾದ ಉದಾಹರಣೆಯಾಗಿದೆ, ಆತನ ಮರಣವು ನಮಗೆ ಜೀವವನ್ನು ಕೊಟ್ಟಿದೆ. ರೋಮಾ 5:8


# ಸ್ಮಾರಕ ಚಿನ್ಹೆಗಳು


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow


ಜ್ಞಾನೋಕ್ತಿಗಳು 30:5 " ದೇವರ ಒಂದೊಂದು ಮಾತೂ ಪರಿಶುದ್ಧ; ಆತನೇ ಶರಣರ ಖೇಡ್ಯ."
Equip & Grow

# 3 ನೀವಾಗಿಯೇ ಇರಿ!

## ಭಯ: ಪ್ರಾಮಾಣಿಕರಾಗಿ ನಡೆದುಕೊಳ್ಳುವ ಭಯ

## ಐಸ್ ಬ್ರೇಕರ್

ಮಕ್ಕಳು, ವಯಸ್ಕರಂತೆ, ಅನುದಿನ ಜೀವಿತದ ದೂರಗಳ ಬಗ್ಗೆ ಹೆಚ್ಚಾಗಿ ಯೋಚಿಸುತ್ತಾರೆ ಮತ್ತು ಅದರಿಂದ ದೊರೆಯುವ ಅನೇಕ ಆಶೀರ್ವಾದಗಳನ್ನು ಒಪ್ಪಿಕೊಳ್ಳುವದನ್ನು ಮರೆತುಹೋಗುತ್ತಾರೆ.

"ನಿಮ್ಮ ಆಶೀರ್ವಾದಗಳನ್ನು ಎಣಿಸಿರಿ" ಚಟುವಟಿಕೆ ಅವರು ಯಾಕೆ ಕೃತಜ್ಞತೆಯುಳ್ಳವರಾಗಿರಬೇಕು ಎಂಬ ವಿಷಯಗಳು ಅವರ ಮನಸ್ಸಿನೊಳಗೆ ಹೊಂದಿಕೆಯಾಗಲು ಸಹಾಯ ಮಾಡುತ್ತದೆ. ಸರಳವಾದ ಮಾದರಿ ಏನೆಂದರೆ: "ನಾನು ... ಗಾಗಿ ಆಶೀರ್ವಾದ ಹೊಂದಿದ್ದೇನೆ" ಅಥವಾ "ನಾನು ... ಗಾಗಿ ಕೃತಜ್ಞತೆಯುಳ್ಳವನಾಗಿದ್ದೇನೆ" ಮತ್ತು ಮಕ್ಕಳ ಮಧ್ಯದಲ್ಲಿ ನಡೆಯುತ್ತಾ; ಒಂದನ್ನು ಆಯ್ಕೆ ಮಾಡಿರಿ ಮತ್ತು ವಾಕ್ಯವನ್ನು ಪೂರ್ತಿಗೊಳಿಸುವಂತೆ ಅವರಿಗೆ ಹೇಳಿರಿ. ಬಹುತೇಕರು ಹಾಜರಿರುವ ಸಮಯದಲ್ಲಿ ಇದನ್ನು ಪುನರಾವರ್ತಿಸಿರಿ. ಇರುವೆಯ ಸ್ವರ, ಕರಡಿಯ ಸ್ವರ, ನಿಧಾನವಾದ ಸ್ವರ ಇತ್ಯಾದಿಗಳನ್ನು ಮಾಡುವಂತೆ ಹೇಳುವ ಮೂಲಕ ಸ್ವಲ್ಪ ಖುಷಿಯನ್ನು ಸೇರಿಸಿರಿ, ಹೀಗೆ ನೀವು ಆಗಿನ ಸಮಯಕ್ಕೆ ವಿವಿಧತೆ ಹಾಗೂ ಆನಂದವನ್ನು ಸೇರಿಸಬಹುದು.

ಸ್ವಲ್ಪ ದೊಡ್ಡ ಮಕ್ಕಳಿಗೆ ಅವರ ಆಶೀರ್ವಾದಗಳು ಮತ್ತು ಕೃತಜ್ಞತೆಗಳನ್ನು ಒಂದು ಹಾಳೆಯ ಮೇಲೆ ಬರೆದು ಅವುಗಳನ್ನು ಸಣ್ಣ ಉಡುಗೊರೆಯ ಡಬ್ಬಿಯೊಳಗೆ ಹಾಕುವಂತೆ ಹೇಳಿರಿ. ಮಕ್ಕಳು ಬರುವ ಮೊದಲು ಡಬ್ಬಿಗಳನ್ನು ಅಡಗಿಸಿರಿ; ಸ್ವಾಗತದ ಸಮಯದಲ್ಲಿ ಆ ನಿಕ್ಷೇಪಗಳನ್ನು ಹುಡುಕುವಂತೆ ಅವರಿಗೆ ಹೇಳಿರಿ.

ಅವರನ್ನು ಒಟ್ಟುಸೇರಿಸಿರಿ ಮತ್ತು ಡಬ್ಬಿಯೊಳಗಿರುವ ಹಾಳೆಗಳನ್ನು ತೆಗೆದು ತಮ್ಮ ಜೊತೆಗಾರರ ಆಶೀರ್ವಾದಗಳನ್ನು ಓದುವಂತೆ ಹೇಳಿರಿ.

## ಪರದೆಯ ಹಿಂದೆ

ಹಾಸ್ಯಗಾರನು ತನ್ನ ಮುಖಕ್ಕೆ ಮೇಕಪ್ ಹಾಕಿಕೊಳ್ಳುತ್ತಾ ಇದ್ದನು ಮತ್ತು ಬಿಗಿ ಹಗ್ಗದ ಮೇಲೆ ನಡೆಯುವವನಾದ ತನ್ನ ಸ್ನೇಹಿತನನ್ನು ಕರೆದನು. ನನಗೆ ನಾನು ದುರ್ಬಲನಾಗಿರುವ ಭಯ ಕಾಡುತ್ತಿದೆ ಎಂಬ ತನ್ನ ಭಾವನೆಯನ್ನು ಹಂಚಿಕೊಂಡನು. ನಾನು ನನ್ನ ನಿಜವಾದ ಮುಖವನ್ನು ಈ ಮೇಕಪ್ ಹಿಂದೆ ಅಡಗಿಸಿಕೊಳ್ಳಬೇಕು, ನಿಜವಾಗಿಯೂ ನಾನು ಎಂಥವನೆಂದು ಯಾರಿಗೂ ಗೊತ್ತಾಗಬಾರದೆಂದು ಅಂದುಕೊಳ್ಳುತ್ತಿದ್ದನು ಯಾಕಂದರೆ ಒಂದುವೇಳೆ ಅವರು ಅವನನ್ನು ಇಷ್ಟಪಡದೆ ಹೋದರೆ ಏನಾಗುತ್ತದೆ ಅಥವಾ ಆತನ ತಮಾಷೆಗಳಿಗೆ ನಗದೆ ಹೋದರೆ ಏನಾಗುತ್ತದೆ? ಸಿಂಹವನ್ನು ಪಳಗಿಸುವವನು ಇತರರೊಂದಿಗೆ ನಗುತ್ತಾ ಇರುವದನ್ನು ಮತ್ತು ಉತ್ತಮ ಸಮಯ ಕಳೆಯುತ್ತಾ ಇರುವದನ್ನು ಹಾಸ್ಯಗಾರನು ನೋಡಿದನು ಹಾಗೂ ಅವರ ಸ್ನೇಹದ ವಿಷಯದಲ್ಲಿ ಹೊಟ್ಟೆಕಿಚ್ಚುಪಟ್ಟನು. ಅವನು ಪ್ರೇಕ್ಷಕರ ಸಾಲಿನಲ್ಲಿ ಕುಳಿತಿರುವ ಮಕ್ಕಳಿಗೆ ನಾನೂ ಸಿಂಹ ಪಳಗಿಸುವವನ ಸ್ನೇಹಿತನಾಗಿದ್ದರೆ ಚೆನ್ನಾಗಿರುತ್ತಾ ಇತ್ತು ಎಂದು ಹೇಳಿದನು.

# ಪ್ರದರ್ಶನ ಪ್ರಾರಂಭವಾಗಲಿ!

ಯೇಸು ಕ್ರಿಸ್ತನು ಪಿಲಾತನ ಎದುರಿನಲ್ಲಿ ತಾನು ದೇವರೆಂದು ಒಪ್ಪಿಕೊಂಡನು,

ಲೂಕ 23:1-4, 13-16

-ಪ್ರಾಮಾಣಿಕರಾಗಿ ನಡೆದುಕೊಳ್ಳುವ ಭಯ-

ಪ್ರತಿದಿನ ದುರ್ಬಲತೆಯನ್ನು ಅನುಭವಿಸುವ ಮತ್ತು ಇತರರೊಂದಿಗೆ ಪ್ರಮಾಣಿಕರಾಗಿ ನಡೆದುಕೊಳ್ಳುವ ಭಯ ನಮಗೆ ಎದುರಾಗುತ್ತದೆ. ಇಂದು ನಮ್ಮ ಸ್ನೇಹಿತ ಹಾಸ್ಯಗಾರನು ಹೇಳಿದಂತೆ, ನಮ್ಮನ್ನು ಇತರರಿಗೆ ಗೊತ್ತಾಗದಂತೆ ಅಡಗಿಸಿಕೊಳ್ಳುವ ಶೋಧನೆ ನಮಗೆ ಎದುರಾಗುತ್ತದೆ, ನಾವು ಮುಖವಾಡದ ಹಿಂದೆ ಅಡಗಿಕೊಳ್ಳಲು ಬಯಸುತ್ತೇವೆ. ಕೆಲವೊಮ್ಮೆ ನಮ್ಮ ನಗು ನಕಲಿಯಾಗಿರುತ್ತದೆ ಅಥವಾ ಜನರು ನಿರೀಕ್ಷಿಸುತ್ತಿದ್ದಾರೆ ಎಂದು ಯೋಚಿಸಿ ಶಾಲೆಯ ಆಟದ ಸ್ಪರ್ಧೆಯಲ್ಲಿ ಭಾಗವಹಿಸಲು ಇಷ್ಟವಿರುವವರಂತೆ ನಾವು ನಟಿಸುತ್ತೇವೆ. ಯಾರಾದರು ನಿಮಗೆ ಹೇಗಿದ್ದೀರಿ ಎಂದು ಕೇಳಿದಾಗ, ಆಂತರ್ಯದಲ್ಲಿ ನಿಜವಾಗಿಯೂ ನೀವು ದುಃಖದಲ್ಲಿರುವಾಗಲೂ "ಚೆನ್ನಾಗಿದ್ದೇನೆ" ಎಂದು ಹೇಳಿದ್ದೀರೋ? "ನೀವು ನೀವಾಗಿರಲು" ಎಂದಾದರು ಹೆದರಿಕೊಂಡಿದ್ದೀರೋ? ನಮ್ಮೆಲ್ಲರಿಗೂ ಈ ರೀತಿಯ ಹೆದರಿಕೆಗಳು ಎದುರಾಗಿವೆ, ಯೇಸು ಕ್ರಿಸ್ತನು ಸಹ ಇವುಗಳನ್ನು ಎದುರಿಸಿದನು. ಇಂದಿನ ಸತ್ಯವೇದದ ಕಥೆಯಲ್ಲಿ, ಯೇಸು ಕ್ರಿಸ್ತನನ್ನು ಪಿಲಾತನ ಬಳಿಗೆ ಕರೆದುಕೊಂಡು ಬಂದರು, ಅವನು ದೇಶಾಧಿಪತಿಯಾಗಿದ್ದನು ಮತ್ತು ಜನರು ಆತನನ್ನು ಮರಣ ದಂಡನೆಗೆ ಒಪ್ಪಿಸು ಎಂದು ಒತ್ತಾಯಿಸುತ್ತಾ ಇದ್ದರು! ಜನರು ಯೇಸು ಕ್ರಿಸ್ತನ ಮೇಲೆ ಬಹಳವಾಗಿ ಕೋಪಗೊಂಡಿದ್ದರು ಮತ್ತು ಆತನು ಧರ್ಮಶಾಸ್ತ್ರವನ್ನು ಉಲ್ಲಂಘಿಸುತ್ತಿರುವ ಎದುರುಬೀಳುವ ವ್ಯಕ್ತಿಯಾಗಿದ್ದಾನೆ ಎಂದು ಆತನ ಮೇಲೆ ಆರೋಪ ಮಾಡುತ್ತಿದ್ದರು. ಆದರೆ ಇವೆಲ್ಲವು ಸುಳ್ಳು ಆರೋಪಗಳಾಗಿದ್ದವು!!! ನೀವು ಮಾಡದೆ ಇರುವ ಯಾವುದಾದರು ಕಾರ್ಯದ ವಿಷಯದಲ್ಲಿ ನಿಮ್ಮ ಮೇಲೆ ಯಾರಾದರು ಆರೋಪ ಮಾಡಿದ್ದಾರೆಯೇ?

ಯೇಸು ಕ್ರಿಸ್ತನು ಈ ಸಮಯದಲ್ಲಿ ದುರ್ಬಲನಾಗಿ ತೋರ್ಪಡಿಸಿಕೊಳ್ಳಲು ಬಯಸಲಿಲ್ಲ. ತಾನು ದೇಶಾಧಿಪತಿಯ ಎದುರಿನಲ್ಲಿ ಪ್ರಾಮಾಣಿಕನಾಗಿ ನಡೆದುಕೊಳ್ಳದಿರಲು ಮತ್ತು ತಾನು ನಿಜವಾಗಿಯೂ ಯಾರು ಎಂದು ಹೇಳದಿರಲು ಬಯಸಬಹುದಾಗಿತ್ತು. ತಾನು ನಿಜವಾಗಿಯೂ ಯಾರು ಎಂಬದನ್ನು ಬಚ್ಚಿಡಲು ಆತನು ಖಂಡಿತವಾಗಿಯೂ ಬಯಸಿರಬಹುದು. ಆದರೆ ಪಿಲಾತನು ಆತನಿಗೆ, "ನೀನು ಯೆಹೂದ್ಯರ ಅರಸನೋ?" ಎಂದು ಕೇಳಿದಾಗ, ಯೇಸು ಕ್ರಿಸ್ತನು ಅವನಿಗೆ ಪ್ರಾಮಾಣಿಕವಾಗಿ, "ನೀನೇ ಹೇಳಿದ್ದೀಯಲ್ಲವೇ" ಅಂದನು.

ಖಂಡಿತವಾಗಿಯೂ, ಕೆಲವೊಮ್ಮೆ ಸುಮ್ಮನೆ ಕಪಟ ನಗು ಅನುಕೂಲಕರವಾಗಿರುತ್ತದೆ. ನಮ್ಮ ಜೀವಿತಗಳಲ್ಲಿ ಕೆಲವೊಮ್ಮೆ ಅಪಾಯಕರ ಪರಿಸ್ಥಿತಿಗಳು ಎದುರಾಗುವಾಗ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಆದರೆ ಬಹುತೇಕ ಸಮಯಗಳಲ್ಲಿ, ಯೇಸು ಕ್ರಿಸನ ಹಾಗೆ ನಾವು ಇತರರೊಂದಿಗೆ ಪ್ರಾಮಾಣಿಕರಾಗಿ ನಡೆದುಕೊಳ್ಳುವದು ಮತ್ತು ನಾವು ಯಾರು ಎಂಬದನ್ನು ಒಪ್ಪಿಕೊಳ್ಳುವದು ಬಹಳ ಪ್ರಾಮುಖ್ಯವಾಗಿದೆ. ಬೇರೆಯವರು ನೀವು ಯಾರಾಗಿರಬೇಕೆಂದು ಬಯಸುತ್ತಾರೆ ಅಥವಾ ನಿಮ್ಮ ವಿಷಯದಲ್ಲಿ ಬೇರೆಯವರಿಗೆ ಯಾವ ನಿರೀಕ್ಷೆ ಇದೆ ಎಂದು ನೀವು ಯೋಚಿಸುತ್ತೀರೋ ಅದು ಪ್ರಾಮುಖ್ಯವಲ್ಲ. ನೀವು ನೀವಾಗಿ ಇರುವದೇ ಉತ್ತಮವಾದ ಸಂಗತಿಯಾಗಿದೆ. ಕೆಲವೊಮ್ಮೆ ನಾವು ನಮ್ಮ ಸ್ನೇಹಿತರೊಂದಿಗೆ ನಿಜವಾಗಿ ಇರುವದಿಲ್ಲ ಮತ್ತು ಕಡೆಯದಾಗಿ ಅವರನ್ನು ಕಳೆದುಕೊಳ್ಳುತ್ತೇವೆ. ಅಥವಾ ನಮಗೆ ಸ್ನೇಹಿತರೇ ಇಲ್ಲ ಎಂಬ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ ಮತ್ತು ಆಂತರ್ಯದಲ್ಲಿ ಒಂಟಿ ಹಾಗೂ ಖಾಲಿಯಾಗಿರುವಂತೆ ನಟಿಸುತ್ತೇವೆ. ನಿಜವಾದ ಸ್ನೇಹಿತರನ್ನು ಮಾಡಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಅವರೊಂದಿಗೆ ಯಥಾರ್ಥರಾಗಿರುವದು ಹಾಗೂ ಪ್ರಾಮಾಣಿಕರಾಗಿರುವದು; ಮುಖವಾಡವನ್ನು ತೆಗೆಯುವದು ಅಥವಾ ನಮ್ಮ ಮುಖಕ್ಕೆ ಹಚ್ಚಿಕೊಂಡಿರುವ ಹಾಸ್ಯದ ಮೇಕಪ್ ತೆಗೆಯುವದು. ನಾವು ಯಥಾರ್ಥವಾದ ಪ್ರಾಮಾಣಿಕ

ಸಂಭಾಷಣೆಗಳನ್ನು ನಡೆಸುವಾಗ ಮತ್ತು ಆಳವಾದ ಸಮಸ್ಯೆಗಳ ಬಗ್ಗೆ ಮಾತನಾಡುವಾಗ, ಎಲ್ಲರೊಂದಿಗೆ ಬೆರೆಯುತ್ತಿದ್ದೇವೆ ಎಂಬ ಅನುಭವವನ್ನು ಹೊಂದಲು ಸಾಧ್ಯವಾಗುತ್ತದೆ. ಕಪಟಿಗಳಾಗಿರದೆ ಯಥಾರ್ಥರಾಗಿರುವಾಗ ಹಿತವಾದ ಅನುಭವ ದೊರೆಯುತ್ತದೆ. ಯೇಸು ಕ್ರಿಸ್ತನು ಕೊಲ್ಲಲ್ಪಡಲು ಬಯಸಲಿಲ್ಲ, ಆದರೆ ಅದೇ ಸಮಯದಲ್ಲಿ ತಾನು ಯಾರಾಗಿದ್ದಾನೋ ಅದನ್ನೇ ತಿಳಿಸಲು ಬಯಸಿದನೆ ಹೊರತು ಕಪಟಿಯಾಗಿ ನಡೆದುಕೊಳ್ಳಲಿಲ್ಲ. ಪ್ರಾಮಾಣಿಕತೆಯ ವಿಷಯದಲ್ಲಿ ಅಪಾಯಗಳಿಗೆ ಒಳಗಾಗುವ ಸಾಹಸಗಳನ್ನು ಮಾಡುವದು ಗಾಬರಿಪಡಿಸುವ ಸಂಗತಿಯಾಗಿದೆ, ಆದರೂ ಅದು ನಮ್ಮನ್ನು ಉತ್ತಮವಾದ ಜೀವಿತಕ್ಕೆ ನಡೆಸುತ್ತದೆ! ದುರ್ಬಲರಾಗಿರುವ ನಿಮ್ಮ ಹೆದರಿಕೆಯ ವಿಷಯದಲ್ಲಿ ಅಪಾಯಕ್ಕೆ ಒಳಪಡಿಸುವಂಥ ಸಾಹಸಗಳನ್ನು ಮಾಡಲು ಮತ್ತು "ನೀವಾಗಿಯೇ ಇರಲು" ಬಯಸುತ್ತೀರೋ?

## ಕಂಠಪಾಠ ವಚನ

ಜ್ಞಾನೋಕ್ತಿಗಳು ಯೆಶಾಯ 43:4 "ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನೂ ಮಾನ್ಯನೂ ಪ್ರಿಯನೂ ಆಗಿರುವದರಿಂದ ನಾನು ನಿನಗೆ ಬದಲಾಗಿ ಮನುಷ್ಯರನ್ನೂ ನಿನ್ನ ಪ್ರಾಣಕ್ಕೆ ಪ್ರತಿಯಾಗಿ ಜನಾಂಗಗಳನ್ನೂ ಕೊಡುವೆನು."

## ಸ್ಮಾರಕ ಚಿನ್ಹೆಗಳು

<u>ಮಿನಿ ಸರ್ಕಸ್ ಟೆಂಟ್</u>




ಸಾಮಗ್ರಿಗಳು:

- ಸರ್ಕಸ್ ಟೆಂಟ್ ಮಾದರಿ
- ಕತ್ತರಿಗಳು
- ಗ್ಲೂ
- ಬಣ್ಣದ ಬಳಪಗಳು, ಪೆನ್ಸಿಲ್ಸ್ ಅಥವಾ ಮಾರ್ಕರ್ಸ್.

1. ಮಾದರಿಯ ಪ್ರತಿಯೊಂದು ಭಾಗವನ್ನು ಕತ್ತರಿಸಿರಿ.
2. ವೃತ್ತದ ಒಳಭಾಗಕ್ಕೆ ಬಣ್ಣ ಹಚ್ಚಿರಿ ಅದು ಸರ್ಕಸ್ ನ ಮೇಲ್ಛಾವಣಿಯಾಗಿದೆ.
3. ಗುರುತಿಸಲಾಗಿರುವ ಸಾಲಿನ ಪ್ರಕಾರ ವೃತ್ತದ ನಡುವೆ ಕತ್ತರಿಸಿರಿ.
4. ಸೂಚಿಸಲಾಗಿರುವ ಸ್ಥಳದಲ್ಲಿ ಸಮವಾಗಿರುವ ಚತುಷ್ಕೋನವನ್ನು ಅಂಟಿಸಿರಿ, ಚಿತ್ರದ ಪ್ರತಿಯೊಂದು ಭಾಗವು ಅತಿಕ್ರಮಿಸುವಂತಿರಬೇಕು.
5. ವೃತ್ತದಲ್ಲಿ ನೀವು ರೂಪಿಸಿರುವ ಮೇಲ್ಛಾವಣಿಯ ಮೇಲೆ ಬಾವುಟವನ್ನು ಹಾಕಲು ಬೆಂಕಿ ಕಡ್ಡಿ ಅಥವಾ ಟೂತ್ ಪಿಕ್ ಇಡಿರಿ.
6. ಚತುಷ್ಕೋನದೊಳಗೆ ಚಟುವಟಿಕೆಗಳನ್ನು ಮಾಡಿರಿ.
7. ಚಟುಷ್ಕೋನವನ್ನು ಟ್ಯೂಬ್ ನೊಳಗೆ ಸುತ್ತಿರಿ ಮತ್ತು ಸೂಚಿಸುವ ಕಡೆ ಅಂಟಿಸಿರಿ.
8. ಟ್ಯೂಬ್ ಮೇಲೆ ಟೆಂಟ್ ಮೇಲ್ಛಾವಣಿಯನ್ನು ಇಡಿರಿ.
9. ಮಾರ್ಗದರ್ಶನಕ್ಕಾಗಿ ಚಿತ್ರವನ್ನು ನೋಡಿರಿ.

ಫೋಟೋಕಾಪಿ ಹಾಳೆಯು ವಿಷಯದ ಕಡೆಯಲ್ಲಿ ಕೊಡಲಾಗಿದೆ.

## ಮಿನಿ ಪ್ರದರ್ಶಕರು


ಸಮತೋಲನಗೊಳಿಸುವವನು

ಮಕ್ಕಳಿಗಿರುವ ಚಟುವಟಿಕೆಗಳಲ್ಲಿ ಮೊದಲನೆಯದು ಮೋಟಾರ್ (ವಸ್ತುಗಳ) ಸಮತೋಲನ ಮಾಡುವ ಕೌಶಲ್ಯಗಳನ್ನು ಕಲಿತುಕೊಳ್ಳಬೇಕು, ಇದಕ್ಕಾಗಿ ನಾವು ಸುಲಭವಾಗಿ ಮನೆಯಲ್ಲಿ ದೊರೆಯುವ ವಸ್ತುಗಳನ್ನು ಅಂದರೆ ಪೊರಕೆ ಅಥವಾ ಪ್ಲಾಸ್ಟಿಕ್ ಕಡ್ಡೀ ಮತ್ತು ಪ್ಲಾಸ್ಟಿಕ್ ಕಪ್ ಅಥವಾ ಮುರಿಯದೆ ಇರುವ ಇತರೆ ವಸ್ತುಗಳನ್ನು ಉಪಯೋಗಿಸಬಹುದು.

ಈ ಭಾಗದಲ್ಲಿ, ಮಕ್ಕಳು ವಿವಿಧ ಚಟುವಟಿಕೆಗಳ ಮೂಲಕ ತಮ್ಮ ಸಮತೋಲನವನ್ನು ಅಭಿವೃದ್ಧಿಪಡಿಸಿಕೊಳ್ಳುವರು ಹಾಗೂ ಇವುಗಳಲ್ಲಿ ಅವರು ತಮ್ಮ ವಸ್ತುಗಳನ್ನು ಸಮತೋಲನ ಮಾಡುವ ಕೌಶಲ್ಯಗಳ ಕಡೆಗೆ ಗಮನಹರಿಸುವರು.

ಈ ಚಟುವಟಿಕೆಗಾಗಿ, ಮಗು ತನ್ನ ಅಂಗೈಯಲ್ಲಿ ಕಡ್ಡಿಯನ್ನು ಇಟ್ಟುಕೊಳ್ಳಬೇಕು ಮತ್ತು ಸಾಧ್ಯವಾದಷ್ಟು ಸಮಯ ಸಮತೋಲನವನ್ನು ಕಾಪಾಡಬೇಕು.

ಮಗು ಈ ಕೌಶಲ್ಯದಲ್ಲಿ ಪರಿಣಿತಿ ಸಾಧಿಸಿದ ನಂತರ, ಪ್ಲಾಸ್ಟಿಕ್ ಕಪ್ ಕೊಡುವ ಮೂಲಕ ಕಷ್ಟಕರದ ಹಂತಕ್ಕೆ ನಡೆಸಿರಿ. ಪ್ಲಾಸ್ಟಿಕ್ ಲೋಟವನ್ನು ಹಿಮ್ಮುಖವಾಗಿ ಕಡ್ಡಿಯೊಳಗೆ ಇಡಬೇಕು. ಈ ರೀತಿಯಾಗಿ ಅವರು ಎರಡು ವಸ್ತುಗಳಿಂದ ತಮ್ಮ ಕೌಶಲ್ಯವನ್ನು ಅಭಿವೃದ್ಧಿಪಡಿಸುವರು, ಈ ರೀತಿಯಾಗಿ ಬಿಗಿ ಹಗ್ಗದ ಮೇಲೆ ನಡೆಯುವವರಾಗುವರು.



## ಡೊಂಬರಾಟ

ಗುರಿಗೆ ಹೊಡೆಯಬೇಕು

ಸಾಮಗ್ರಿಗಳು:


1 ಮೀಟರ್ ಅಗಲ ಮತ್ತು 2 ಮೀಟರ್ ಉದ್ದವಿರುವ, ಪಾರದರ್ಶಕವಲ್ಲದ ಕಾರ್ಡ್ ಬೋರ್ಡ್ ಅಥವಾ ಚೌಕಟ್ಟು

10 ಹಾಳೆಗಳು ಅಥವಾ ನಿಮಗೆ ಲಭ್ಯವಿರುವವುಗಳಿಂದ ಚೆಂಡು ಮಾಡಿರಿ.

ಸೂಚನೆಗಳು

(ಪ್ರತಿಯೊಂದು ತಂಡದಿಂದ) ಇಬ್ಬರು ಮಕ್ಕಳು ಚೌಕಟ್ಟು ಅಥವಾ ಕಾರ್ಡ್ ಬೋರ್ಡ್ ಹಿಡಿದುಕೊಳ್ಳಬೇಕು.

ಒಂದು ತಂಡವು ಪರದೆ ಅಥವಾ ಕಾರ್ಡ್ ಬೋರ್ಡ್ ಹಿಂದೆ ನಿಂತುಕೊಳ್ಳಬೇಕು ಮತ್ತು ಇನ್ನೊಂದು ತಂಡದವರು ಅದರ ಎದುರಿನಲ್ಲಿ ನಿಲ್ಲಬೇಕು.




ಪರದೆಯ ಹಿಂದೆ ಇರುವ ಮಕ್ಕಳು ಹಿಂದು ಮುಂದು ಏರುಪೇರಾಗಿ ಹೋಗುತ್ತಿರಬೇಕು.
ಮುಂಭಾಗದಲ್ಲಿರುವ ಮಕ್ಕಳು ಒಬ್ಬೊಬ್ಬರಾಗಿ ತಡೆಗೋಡೆಯಿಂದ 1.50 ಮೀಟರ್ ದೂರದಿಂದ 10 ಪೇಪರ್ ಚೆಂಡುಗಳಿಂದ ಇನ್ನೊಂದು ತಂಡದವರಿಗೆ ಹೊಡೆಯಲು ಹೋಗಬೇಕು.
ತಂಡದಲ್ಲಿರುವ ಮಕ್ಕಳೆಲ್ಲರಿಗೂ ಅವಕಾಶ ದೊರೆತ ನಂತರ, ಸ್ಥಳ ಬದಲಾಯಿಸಿರಿ. ತಡೆಗೋಡೆಯ ಹಿಂದೆ ಇರುವ ಮಕ್ಕಳಿಗೆ ಹೊಡೆಯಲು ಯಾವ ತಂಡದವರು ಹೆಚ್ಚು ಪೇಪರ್ ಚೆಂಡುಗಳನ್ನು ಉಪಯೋಗಿಸುತ್ತಾರೋ ಅವರು ಗೆಲ್ಲುತ್ತಾರೆ.
ಸ್ವಲ್ಪ ದೊಡ್ಡ ಮಕ್ಕಳಿಗೆ 2 ಮೀಟರ್ ದೂರದಿಂದ 30 ಸೆಕೆಂಡ್‌ಗಳಲ್ಲಿ ತಮ್ಮ ಚೆಂಡುಗಳನ್ನೆಲ್ಲಾ ಎಸೆಯಬೇಕು.

## ಸಂತೋಷದ ಕ್ಷಣಗಳು

ದೇವರಲ್ಲಿ ತಮ್ಮ ಗುರುತು ಸ್ಥಾಪಿಸಲು, ತಾವು ಯಾರು ಮತ್ತು ತಮ್ಮ ಉದ್ದೇಶ ಏನು ಎಂದು ತಿಳಿದುಕೊಳ್ಳಲು  ಇದು ಬಹಳ ವಿಶೇಷವಾದ ಸಮಯವಾಗಿದೆ.

ನಾವು ಅಂಕಲ್ ಅಬ್ನೇರ್ ರವರ "ID" ಹಾಡನ್ನು ಸೇರಿಸಿದ್ದೇವೆ, ಇದರಿಂದ ನೀವು ಎಲ್ಲಾ ವಯಸ್ಸಿನ ಮಕ್ಕಳಿಗೆ ಅವರಿಗೆ ಇರುವ ಅತ್ಯಂತ ಅಮೂಲ್ಯವಾದ ಸಂಗತಿಯನ್ನು ಮರೆಯಬಾರದೆಂದು ಕಲಿಸಬಹುದು, ಅದೇನೆಂದರೆ ಅವರ ಗುರುತು . . . ಹಾಜರಾಗಿರುವವರೆಲ್ಲರೊಂದಿಗೆ ಈ ಹಾಡಿನ ಸಂಗೀತವನ್ನು ಕೇಳಿಸಿಕೊಂಡು ಆನಂದಿಸಿರಿ, ಸಾಹಿತ್ಯಕ್ಕೆ ಆದ್ಯತೆ ಕೊಡಲು ಮರೆಯದಿರಿ.


## ಹೋಮ್ ವರ್ಕ್

ಮಿನಿ ಥೇಟರ್


ಇಂದು ಕಲಿತುಕೊಂಡಿರುವ ವಿಷಯವನ್ನು ತಮ್ಮ ತಂದೆತಾಯಿಗಳೊಂದಿಗೆ ಜ್ಞಾಪಕ ಮಾಡಿಕೊಳ್ಳಲು ದವಸಧಾನ್ಯಗಳ ಪೆಟ್ಟಿಗೆಯಿಂದ ಮಾಡಿರುವ ಥೇಟರ್ ಅನ್ನು ಮನೆಯಲ್ಲಿ ಉಪಯೋಗಿಸುವಂತೆ ಮಕ್ಕಳಿಗೆ ಹೇಳಿರಿ.


ಮನೆಯಲ್ಲಿ ಚಟುವಟಿಕೆಗೆ ಸಮಯ ಮಾಡಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ.


| | | | | | | | |
|---|---|---|---|---|---|---|---|
| ಪ್ರ | ಆ | ಡ | ಗಿ | ಕ | ಳ | ವ | ಸಾ |
| ಮಾ | ಒ | ಳ | ಗಾ | ಗು | ವ | ದು | ಹ |
| ಣಿ | ಹ | ಪ್ಪಂ | ಳ್ಳು | ಶೋ | ವ | ವೇ | ಸ |
| ಕ | ಮು | ರು | ದ | ಡು | ಧ | ದ | ಣಿ |
| ತೆ | ವ | ಖ | ಮಾ | ಮಾ | ನಿ | ನೆ | ಗು |
| ದೇ | ಶೋ | ಪ | ವಾ | ರಾ | ಜ | ನ | ಗೆ |
| ಸಾ | ರೋ | ಭ | ಯ | ಡ | ಮು | ರೋ | ಸು |
| ಆ | ಡ | ಗಿ | ಕೊ | ಳ್ಳು | ವ | ದು | ಳ್ಳು |














## ಪ್ರಶ್ನೆಗಳು ಮತ್ತು ಉತ್ತರಗಳು

1. ನೀವು ಮಾಡದೆ ಇರುವ ಕಾರ್ಯಗಳಿಗೆ ಎಷ್ಟು ಸಲ ನಿಮ್ಮ ಮೇಲೆ ಆರೋಪಗಳನ್ನು ಹೊರಿಸಿದ್ದಾರೆ? ಆಗ ನಿಮ್ಮ ಭಾವನೆ ಹೇಗಿತ್ತು?

ನಮ್ಮ ಹೆಸರನ್ನು ದುರುಪಯೋಗಪಡಿಸುತ್ತಾ ಮತ್ತು ನಮ್ಮ ಯಥಾರ್ಥತೆಯನ್ನು ಕೆಡಿಸುತ್ತಾ ನಮಗೆ ಕೇಡು ಮಾಡಲು ಬಯಸುವವರು ನಾವು ಮಾಡದೆ ಇರುವ ಕಾರ್ಯಗಳಿಗಾಗಿ ನಮ್ಮ ಮೇಲೆ ಆರೋಪ ಮಾಡಿರುವದನ್ನು ಎಷ್ಟೋ ಸಲ ನಾವು ಅನುಭವಿಸಿದ್ದೇವೆ. ಬಹುಶಃ ನಮ್ಮ ಪ್ರತಿಕ್ರಿಯೆಗಳು ಬಲವಾಗಿದ್ದು, ನಮ್ಮ ಕೀರ್ತಿಯನ್ನು ಕಾಪಾಡಿಕೊಳ್ಳಲು ನಾವು ಬಯಸುತ್ತೇವೆ. ಇದಲ್ಲದೆ ನಮಗೆ ವಿರುದ್ಧವಾಗಿ ಅಂಥ ಕಾರ್ಯ ಮಾಡಿದವರಿಗೆ ನಾವು ಶಾಪಗಳನ್ನೂ ಹಾಕಿದ್ದೇವೆ. ಆದರೆ ದೇವರು ನಮಗೆ ಹೇಳುವದೇನೆಂದರೆ, ನಾನು ನಿಮ್ಮನ್ನು ಕ್ಷಮಿಸಿರುವಂತೆಯೇ, ನೀವೂ ಅವರನ್ನು ಕ್ಷಮಿಸಬೇಕು. ನಾವು ಆತನ ಮಕ್ಕಳು ಎಂದು ತೋರಿಸಲು ದೇವರು ಈ ರೀತಿಯಾಗಿ ನಮ್ಮ ನಂಬಿಕೆಯನ್ನು ಬಲಪಡಿಸುತ್ತಾನೆ.

2. ನೀವು ಯಾರು ಎಂಬ ವಿಷಯದಲ್ಲಿ ಎಂದಾದರು ಸುಳ್ಳು ಹೇಳಿದ್ದೀರೋ? ಯಾಕೆ?

ಕ್ರೈಸ್ತರಾಗಿ ನಮಗಿರುವ ದೊಡ್ಡ ಹೆದರಿಕೆಗಳಲ್ಲಿ ಒಂದು ಸಾಮಾಜಿಕ ವೃತ್ತಗಳಲ್ಲಿ, ಶಾಲೆಯಲ್ಲಿ, ಕೆಲಸದ ಸ್ಥಳದಲ್ಲಿ ಅಥವಾ ಯೇಸು ಕ್ರಿಸ್ತನ ಬಗ್ಗೆ ಗೊತ್ತಿಲ್ಲದೆ ಇರುವ ಕುಟುಂಬದಲ್ಲಿ ಅಂಗೀಕರಿಸಲ್ಪಡದೆ ಇರುವಂಥದ್ದು ಒಂದಾಗಿದೆ. ಕೆಲವೊಮ್ಮೆ ಅವರಿಂದ ಅಂಗೀಕರಿಸಲ್ಪಡುವ ನಮ್ಮ ಹುಡುಕಾಟದಲ್ಲಿ, ಯೇಸು ಕ್ರಿಸ್ತನಲ್ಲಿರುವ ನಮ್ಮ ಗುರುತನ್ನು ಅಲ್ಲಗಳೆಯುತ್ತೇವೆ. ದೇವರ ಮಗುವಾಗಿರುವ ವಿಷಯದಲ್ಲಿ ನೀವು ನಾಚಿಕೆಪಡುವ ಅವಶ್ಯಕತೆಯಿಲ್ಲ. ಇದಕ್ಕೆ ವ್ಯತ್ಯಾಸವಾಗಿ, ಪ್ರೀತಿ ಮತ್ತು ಜ್ಞಾನದೊಂದಿಗೆ ನಮ್ಮ ಗುರುತನ್ನು ಸಮರ್ಥಿಸಿಕೊಳ್ಳಲು ಕರ್ತನು ನಮಗೆ ಬಲವನ್ನು ಕೊಡುತ್ತಾನೆ. ಯೆರೆಮಿಯ 15:19, ರೋಮಾ 1:16

3. ಪಾಠದ ಮುಖ್ಯ ನೈತಿಕ ಮೌಲ್ಯ ಏನು ಮತ್ತು ಅದನ್ನು ನೀವು ನಿಮ್ಮ ಜೀವಿತಕ್ಕೆ ಹೇಗೆ ಅಳವಡಿಸಿಕೊಳ್ಳುವಿರಿ?

ಪ್ರಾಮಾಣಿಕತೆಯು ಅನುದಿನದ ಜೀವನಕ್ಕೆ ಅಳವಡಿಸಿಕೊಳ್ಳಲು ಕಷ್ಟವಾಗುವ ಸಂಗತಿಯಾಗಿದೆ, ಅನೇಕ ಸಮಯಗಳಲ್ಲಿ ಪ್ರಾಮಾಣಿಕರಾಗಿರಲು ನಾವು ಹೆದರುತ್ತೇವೆ, ಅದಕ್ಕೆ ಅನೇಕ ಕಾರಣಗಳಿರುತ್ತವೆ, ಇತರರು ಏನು ಹೇಳುತ್ತಾರೆ ಎಂಬದು ಪ್ರಮುಖವಾದ ಕಾರಣವಾಗಿದೆ. ಸ್ನೇಹಿತ ಅಥವಾ ಕುಟುಂಬದ ಸದಸ್ಯನ ಪರವಹಿಸುವಾಗ, ದೇವರು ಏನು ಶಿಫಾರಸ್ಸು ಮಾಡುತ್ತಾನೆ ಅಂದರೆ ನಾವು ಎಲ್ಲದರಲ್ಲಿಯೂ ಯಾವಾಗಲೂ ಸತ್ಯವನ್ನು ಹೇಳಬೇಕು, ವಿಶೇಷವಾಗಿ ನಾವು ಯಾರು ಎಂಬ ವಿಷಯದಲ್ಲಿ ಸುಳ್ಳು ಹೇಳಬಾರದು. ಪ್ರಮಾಣಿಕತೆಯು ಅನೇಕ ಸ್ಥಳಗಳಲ್ಲಿ ದ್ವಾರಗಳನ್ನು ತೆರೆಯುವ ಕೀಲಿಯಾಗಿದೆ.

## ಸ್ಮಾರಕ ಚಿನ್ಹೆಗಳು

Equip & Grow
ಮಕ್ಕಳೇ ಪ್ರಮುಖರು

ಜೀವನದ ಸರ್ಕಸ್!
ಯೇಸು ಕ್ರಿಸ್ತನೊಂದಿಗೆ ಅಪಾಯಗಳನ್ನು

ಇಂದು ನೀವು ದೇವರಿಗೆ ಏನು ಕೊಡುವಿರಿ?


ಯಾವುದರ ಚಿತ್ರವನ್ನಾದರೂ ಬಿಡಿಸಿರಿ ಮತ್ತು ಅದಕ್ಕೆ ಬಣ್ಣ ಹಚ್ಚಿರಿ

" ನೀನನ್ನ ದೃಷ್ಟಿಗೆ
ಅಮೂಲ್ಯನು, ಘನವಂತನು,
ಅತಿಪ್ರಿಯನು.
ಎಂದೇ ನಿನ್ನ ಪ್ರಾಣರಕ್ಷಣೆಗಾಗಿ
ತ್ಯಜಿಸುವೆನು ಜನರನ್ನೂ
ಜನಾಂಗಗಳನ್ನೂ.""

ಯೆಶಾಯ 43:4

ಇಲ್ಲಿ ಅಂಟಿಸಿರಿ

ಜೀವನದ ಸರ್ಕಸ್!
ಯೇಸು ಕ್ರಿಸ್ತನೊಂದಿಗೆ ಅಪಾಯಗಳನ್ನು



# 4 ಭರವಸೆಯಿಡಿರಿ!

## ಭಯ: ಅನಾರೋಗ್ಯ ಅಥವಾ ವೇದನೆಯ ಭಯ

## ಐಸ್ ಬ್ರೇಕರ್

ಬೆರೆಸುವದು ಮತ್ತು ಭೇಟಿ ಮಾಡುವದು

ಗೋಲಿಗಳನ್ನು, ಹಲಗೆಯ ತುಂಡುಗಳನ್ನು ಅಥವಾ ವಿವಿಧ ಬಣ್ಣದ ಹಾಳೆಗಳನ್ನು ಸಿದ್ಧಮಾಡಿರಿ.

ಪ್ರತಿಯೊಂದು ಮಗುವಿಗೆ ಹಲವನ್ನು ತೆಗೆದುಕೊಳ್ಳಲು (ಅಥವಾ ನೀವು ಇಟ್ಟಿರುವವುಗಳನ್ನು ತೆಗೆದುಕೊಳ್ಳಲು ಹೇಳಿರಿ).

ಪ್ರತಿಯೊಂದು ಬಣ್ಣಕ್ಕೆ ವಿವಿಧ ಬಣ್ಣವನ್ನು ನೇಮಿಸಿರಿ, ಉದಾಹರಣೆಗೆ:

ನೀಲಿ: ಕುಟುಂಬ.

ಹಸಿರು: ಶಾಲೆ.

ಹಳದಿ: ಸ್ನೇಹಿತರು.

ಕೆಂಪು: ಹವ್ಯಾಸಗಳು.

ಕಂದು: ಸಂಗೀತ/ಚಲನಚಿತ್ರಗಳು.

ಅವರ ಕೈಗಳಲ್ಲಿರುವ ವಸ್ತುಗಳ ಸಂಖ್ಯೆಯು ಅವರು ಎಷ್ಟು ಪರಿಸ್ಥಿತಿಗಳನ್ನು ಎಣಿಸಬೇಕು ಎಂಬದನ್ನು ದೃಢಪಡಿಸುತ್ತದೆ. ಉದಾಹರಣೆಗೆ ಒಂದುವೇಳೆ ಅವರು ಎರಡು ಹಳದಿ ತೆಗೆದುಕೊಂಡಿದ್ದರೆ, ಎರಡು ವಿಷಯಗಳನ್ನು ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು.

## ಪರದೆಯ ಹಿಂದೆ

ಹಾಸ್ಯಗಾರನು ಡೊಂಬರಾಟ ಮತ್ತು ಸರ್ಕಸ್ ಕಲಾವಿದರು ಕೆಲವು ಅದ್ಭುತವಾದ ಸಾಹಸ ಮಾಡಿದ್ದನ್ನು ವೀಕ್ಷಿಸಿದನು. (ಯೂ ಟ್ಯೂಬ್ ವೀಡಿಯೋ ಹಾಕಿಕೊಳ್ಳಿರಿ ಅಥವಾ ನಿಮ್ಮ ಸಿಬ್ಬಂದಿಗಳೇ ಕೆಲವು ಸಾಹಸ ಮಾಡುತ್ತಿರುವ ಹಾಗೆ ನಟಿಸಲಿ). ಒಂದುವೇಳೆ ಅವರು ಕೆಳಗೆ ಬಿದ್ದರೆ ಅವರಿಗೆ ಎಷ್ಟು ನೋವಾಗಬಹುದು ಎಂದು ಅವನು ಯೋಚಿಸುತ್ತಾ ಇದ್ದನು? ಅವರು ನೆಲಕ್ಕೆ ಬೀಳದಂತೆ ಅವರನ್ನು ಹಿಡಿದುಕೊಳ್ಳಲು ಒಂದು ಬಲೆ ಇದೆ ಮತ್ತು ಅವರು ಬೀಳದಂತೆ ಕಾಪಾಡಲು ಅವರ ಸೊಂಟಕ್ಕೆ ಹಗ್ಗವನ್ನು ಕಟ್ಟಲಾಗಿದೆ ಎಂಬದು ಅವನಿಗೆ ಗೊತ್ತಾಗಲಿಲ್ಲ. ಅವನು ಭರವಸೆಯಿಡಲು ಬಯಸಿದನೇ? ಸಿಂಹ ಪಳಗಿಸುವವನು ಮತ್ತೊಮ್ಮೆ ನಡೆದು ಬಂದನು ಮತ್ತು ಹಾಸ್ಯಗಾರನು ಅವನೊಂದಿಗೆ ಮಾತನಾಡುವ ಧೈರ್ಯಮಾಡಿದನು ಆದರೆ ಹೆದರಿಕೊಂಡು ಮಾತನಾಡಿಸಲು ಹೋಗಲಿಲ್ಲ.

ಡೊಂಬರಾಟ ಮತ್ತು ಸರ್ಕಸ್ ಕಲಾವಿದರು. ನಾನು ಬಿದ್ದರೆ ನೆಲಕ್ಕೆ ಬೀಳದಂತೆ ಬಲೆ ನನ್ನನ್ನು ಹಿಡಿದುಕೊಳ್ಳುತ್ತದೆಯೇ?

# ಪ್ರದರ್ಶನ ಪ್ರಾರಂಭವಾಗಲಿ!

ಶಿಲುಬೆಯ ಮೇಲೆ ಯೇಸು ಕ್ರಿಸ್ತನ ಮರಣ, ಲೂಕ 23:26-49

-ಅನಾರೋಗ್ಯ ಅಥವಾ ವೇದನೆಯ ಭಯ-

ನಮ್ಮ ಲೋಕವು ಹೆಚ್ಚೆಚ್ಚಾಗಿ ಅನಾರೋಗ್ಯಗಳು ಮತ್ತು ವೇದನೆಯನ್ನು ನೋಡುತ್ತಾ ಇದೆ. ವಿವಿಧ ರೀತಿಯ ಕೋವಿಡ್ ರೋಗಗಳೊಂದಿಗೆ ಪಿಡುಗುಗಳು ಹೆಚ್ಚಾಗುತ್ತಿವೆ, ಭೂಕಂಪಗಳು ಮತ್ತು ಜಲಪ್ರಳಯಗಳು ಹೆಚ್ಚಾಗುತ್ತಿವೆ ಹಾಗು ನಾವು ನಮ್ಮ ಸುತ್ತಮುತ್ತಲು ಕಾಯಿಲೆ ಹಾಗೂ ವೇದನೆಗಳನ್ನು ನೋಡುತ್ತಾ ಇದ್ದೇವೆ. ಇಂದಿನ ಹಾಸ್ಯಗಾರನ ತರಹವೇ, ನಮ್ಮ ಕಣ್ಣಿಗೆ ಕಾಣದೆ ಇರುವ ವಿಷಯಗಳಿಗಾಗಿ ನಾವು ಭಯಪಡುತ್ತೇವೆ ಮತ್ತು ನಮ್ಮ ಭವಿಷ್ಯದಲ್ಲಿರುವ ವೇದನೆಯ ಬಗ್ಗೆ ಚಿಂತಿಸುತ್ತೇವೆ.

ಯೇಸು ಕ್ರಿಸ್ತನು ಸಹ ಪ್ರಾರ್ಥನೆ ಮಾಡಲು ತೋಟಕ್ಕೆ ಹೋದಾಗ ತನ್ನ ಭವಿಷ್ಯದ ವೇದನೆಯ ಬಗ್ಗೆ ಚಿಂತಿಸಿದನು. ತನ್ನನ್ನು ಬಂಧಿಸಿ ಸೆರೆಯಾಗಿ ಕರೆದುಕೊಂಡು ಹೋಗುವರು ಎಂಬದು ಆತನಿಗೆ ಗೊತ್ತಿತ್ತು. ಅವರು ಆತನ ಮೇಲೆ ಉಗುಳುವರು ಮತ್ತು ಆತನನ್ನು ಹೊಡೆಯುವರು ಎಂಬದು ಆತನಿಗೆ ತಿಳಿದಿತ್ತು ಆದ್ದರಿಂದಲೇ ಆತನು ತನಗೆ ಎದುರಾಗುವ ವೇದನೆಯನ್ನು ತೆಗೆದುಹಾಕುವಂತೆ ದೇವರನ್ನು ಬೇಡಿಕೊಂಡನು. ಆದರೆ ಯೇಸು ಕ್ರಿಸ್ತನು ದೇವರಲ್ಲಿ "ಭರವಸೆಯನ್ನಿಡುವ" ಆಯ್ಕೆಯನ್ನು ಮಾಡಿಕೊಂಡನು!

ಕೂಡಲೇ ಅವರು ಯೇಸು ಕ್ರಿಸ್ತನನ್ನು ಬಂಧಿಸಿದರು, ಆತನು ಅಂದುಕೊಂಡಿದ್ದ ಹಾಗೆಯೇ ಅವರು ಮಾಡಿದರು. ಅವರು ಆತನನ್ನು ಹೊಡೆದು, ಅಪಹಾಸ್ಯ ಮಾಡಿದರು. ಅವರು ಆತನಿಗಾಗಿ ಭಾರವಾದ ಶಿಲುಬೆಯನ್ನು ಸಿದ್ಧಮಾಡಿದರು ಮತ್ತು ಅದನ್ನು ಆತನ ಮೇಲೆ ಹೊರಿಸಿ ಆತನನ್ನು ಗುಡ್ಡಕ್ಕೆ ಕರೆದುಕೊಂಡು ಹೋದರು. ನಂತರ ಅವರು ಆತನನ್ನು ಶಿಲುಬೆಗೆ ಜಡಿದರು ಮತ್ತು ಸಾರ್ವಜನಿಕರೆದು ಸಾಯಲು ಬಿಟ್ಟರು. ಈ ಎಲ್ಲಾ ಕಾರ್ಯಗಳನ್ನು ಆತನು ನಿಲ್ಲಿಸಬಹುದಾಗಿತ್ತು. ನಾನೇ ದೇವರು ಎಂದು ಆತನು ಅವರಿಗೆ ಹೇಳಿ ಶಿಲುಬೆಯಿಂದ ಕೆಳಗೆ ಇಳಿದು ಬರಬಹುದಾಗಿತ್ತು. ಆದರೂ ಆತನು ಶಿಲುಬೆಯ ಮೇಲೆ ಇದ್ದನು ಯಾಕಂದರೆ ನಮ್ಮ ಪಾಪಗಳಿಗೆ ಆತನು ಕ್ರಯವನ್ನು ಪಾವತಿಸಲು ಬಯಸಿದನು. ನಮ್ಮ ಪಾಪಗಳ ಶಿಕ್ಷೆಯನ್ನು ಅನುಭವಿಸಲು ಯೇಸು ಕ್ರಿಸ್ತನು ಅಂದು ಶಿಲುಬೆಯ ಮೇಲೆ ಪ್ರಾಣ ಕೊಟ್ಟನು. ತನ್ನನ್ನು ಯಜ್ಞವಾಗಿ ಅರ್ಪಿಸುವ ಮೂಲಕ, ಆತನು ನಿಮ್ಮನ್ನು ರಕ್ಷಿಸಿದನು! ನಿಮ್ಮ ಮತ್ತು ನನ್ನ ಭರವಸೆಯನ್ನು ಗೆಲ್ಲುವ ಸಲುವಾಗಿ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ತೂಗಿದನು. ನಮ್ಮ ಪಾಪಗಳು ಮತ್ತು ಕೆಟ್ಟ ಸ್ವಭಾವಗಳಿಂದ ನಮಗೆ ಬಿಡುಗಡೆಯನ್ನು ಕೊಡಲು ಆತನು ಈ ಕಾರ್ಯವನ್ನು ಮಾಡಿದನು!

ಇಂದು ನೀವು ಯಾವ ವೇದನೆ ಅಥವಾ ಅನಾರೋಗ್ಯಕ್ಕೆ ಹೆದರುತ್ತಾ ಇದ್ದೀರಿ?

ಸತ್ಯವೇದವು ಹೇಳುವದೇನೆಂದರೆ ಯೇಸು ಕ್ರಿಸ್ತನನ್ನು ನಂಬುವ ಮತ್ತು ಆತನ ನಾಮವನ್ನು ಹೇಳಿಕೊಳ್ಳುವ ಎಲ್ಲರೂ ರಕ್ಷಣೆ ಹೊಂದುವರು. ನನಗೂ ಮತ್ತು ನಿಮಗೂ ದೇವರಲ್ಲಿ "ಭರವಸೆಯನ್ನಿಡಲು", ಯೇಸು ಕ್ರಿಸ್ತನನ್ನು ನಂಬಲು ಮತ್ತು ನಮ್ಮ ಹೃದಯಗಳನ್ನು ಆತನಿಗಾಗಿ ತೆರೆಯಲು ಅವಕಾಶವಿದೆ. ನಾವು ಸರಳವಾದರೂ, ನಮ್ಮ ಹೃದಯವನ್ನು ತೆರೆಯುವ ಕಷ್ಟದ ಮಾತುಗಳನ್ನು ಹೇಳುವಾಗ ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವಾಗ, ಕ್ರೈಸ್ತರಾಗುತ್ತೇವೆ ಅಥವಾ ವಿಶ್ವಾಸಿಗಳಾಗುತ್ತೇವೆ. ನಾವು ದೇವರ ಮಕ್ಕಳಾಗುತ್ತೇವೆ! ದೇವರು ನಮ್ಮನ್ನು ತನ್ನ ಕುಟುಂಬದೊಳಗೆ ಸೇರಿಸಿಕೊಳ್ಳುತ್ತಾನೆ ಮತ್ತು ನಮ್ಮ ಹೃದಯದೊಳಗೆ ಪ್ರವೇಶಿಸುತ್ತಾನೆ. ಇದರ ಅರ್ಥ ನಾವು ಪರಿಪೂರ್ಣರಾಗುತ್ತೇವೆ ಎಂಬದಲ್ಲ. ಹಿಂದೆ ನಮಗಿದ್ದ ಕೆಟ್ಟ ಸ್ವಭಾವಗಳು ಮತ್ತು ಹೆದರಿಕೆಗಳಿಂದ ಕಷ್ಟಪಡುವದು ಮುಂದುವರೆಯುತ್ತಲೇ ಇರುತ್ತದೆ. ಆದರೆ ಈಗ ನಾವು ಈ ಕಷ್ಟಗಳು ಹಾಗೂ ಹೆದರಿಕೆಗಳನ್ನು ಎದುರಿಸುವಾಗ, ನಮಗೆ ಸಹಾಯ ಮಾಡಲು ದೇವರು ನಮ್ಮೊಳಗೆ ವಾಸಮಾಡುತ್ತಾ ಇರುತ್ತಾನೆ! ಇಂದು ನೀವು ಒಟ್ಟಾಗಿ ಪ್ರಾರ್ಥನೆ ಮಾಡಲು ಮತ್ತು ದೇವರ ಮಕ್ಕಳಾಗಲು ಬಯಸುತ್ತೀರೋ? ನಿಮ್ಮ ಜೀವಿತದಿಂದ ದೇವರಲ್ಲಿ "ಭರವಸೆಯನ್ನಿಡಲು" ನೀವು ಬಯಸುತ್ತೀರೋ?

ನನ್ನೊಂದಿಗೆ ಪ್ರಾರ್ಥನೆ ಮಾಡಿರಿ,
ಪ್ರಿಯ ಯೇಸುವೇ, ನನ್ನ ಕೆಟ್ಟ ಸ್ವಭಾವಗಳಿಗಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟದ್ದಕ್ಕಾಗಿ ನಿನಗೆ ವಂದನೆಗಳು. ನಿನ್ನನ್ನೇ ಯಜ್ಞವಾಗಿ ಅರ್ಪಿಸಿ, ನನ್ನ ಅನಾರೋಗ್ಯ ಮತ್ತು ವೇದನೆಯನ್ನು ಹೊತ್ತುಕೊಂಡದ್ದಕ್ಕಾಗಿ ನಿನಗೆ ವಂದನೆಗಳು. ಸತ್ಯವೇದ ಹೇಳುವಂತೆ ನೀನು ನನಗಾಗಿ ಜೀವಿಸಿದೆ ಮತ್ತು ಪ್ರಾಣ ಕೊಟ್ಟೆ ಎಂದು ನಾನು ನಂಬುತ್ತೇನೆ. ನಾನಿರುವ ಹಾಗೆಯೇ ಇದು ದಯವಿಟ್ಟು ನನ್ನ ಹೃದಯದೊಳಗೆ ಬಾ. ನನ್ನಲ್ಲಿ ಅನೇಕ ಹೆದರಿಕೆಗಳಿವೆಯಾದರೂ, ಈ ದಿನ ನಿನ್ನಲ್ಲಿ ಭರವಸೆಯನ್ನಿಡುವ ಆಯ್ಕೆಯನ್ನು ನಾನು ಮಾಡಿಕೊಂಡಿದ್ದೇನೆ. ದಯವಿಟ್ಟು ನನ್ನ ಹೃದಯದೊಳಗೆ ಬಂದು, ನನ್ನ ಜೀವನದ ಯಜಮಾನನಾಗಿರು. ಆಮೆನ್."

## ಕಂಠಪಾಠ ವಚನ

ಕೀರ್ತನೆಗಳು 118:8 "ಮನುಷ್ಯರಲ್ಲಿ ಭರವಸವಿಡುವದಕ್ಕಿಂತ ಯೆಹೋವನನ್ನು ಆಶ್ರಯಿಸುವದು ಒಳ್ಳೇದು."

## ಸಂತೋಷದ ಕ್ಷಣಗಳು

ಆ ಕ್ಷಣದ ಲಾಭವನ್ನು ಪಡೆದುಕೊಳ್ಳಿರಿ ಮತ್ತು ಜೋಶೂ ಹಾಗೂ ವೈ ಶೇ ರವರ "ಎನ್‌ಕೌಂಟರ್ ವಿತ್ ಗಾಡ್" ಹಾಡು ಹಾಡಿಸಿರಿ, ನಾವು ನಮ್ಮ ಜೀವಿತವನ್ನು ದೇವರಿಗೆ ಕೊಡುವಾಗ, ನಮಗೆ ಬೇಕಾದವುಗಳನ್ನೆಲ್ಲಾ ಹೊಂದುವೆವು ಎಂಬದನ್ನು ಇದು ನಮಗೆ ಜ್ಞಾಪಕಪಡಿಸುತ್ತದೆ.
ದೇವರ ಪ್ರಸನ್ನತೆಯು ಪ್ರತಿಯೊಬ್ಬ ಹುಡುಗ ಮತ್ತು ಹುಡುಗಿಯ ಜೀವಿತದಲ್ಲಿ ತನ್ನ ಕಾರ್ಯವನ್ನು ಮಾಡಲಿ, ಆಶೀರ್ವಾದದ ಸಾಧನವಾಗಲಿ, ಆದ್ದರಿಂದ ನೀವಿರುವ ಸ್ಥಳದಲ್ಲಿ ರಕ್ಷಣೆ ಮತ್ತು ಬಿಡುಗಡೆ ತುಂಬಿಕೊಳ್ಳಲಿ.

## ಸ್ಮಾರಕ ಚಿನ್ಹೆಗಳು




ಟೆಂಟ್

ಸಾಮಗ್ರಿಗಳು:

- ಟೆಂಟ್ ಮಾದರಿ
- ಬಣ್ಣಗಳು ಅಥವಾ ಬಣ್ಣದ ಬಳಪಗಳು
- ಕತ್ತರಿಗಳು
- 1 ಹಾಳೆಯ ಚೂರು


ಸೂಚನೆಗಳು

1. ಮಾದರಿಯ ಚೂರುಗಳಿಗೆ ಬಣ್ಣ ಹಚ್ಚಿರಿ
2. ಪ್ರತಿಯೊಂದು ಭಾಗವನ್ನು ಕತ್ತರಿಸಿರಿ
3. ಒಂದು ಎಲೆ ತೆಗೆದುಕೊಂಡು ಸಣ್ಣ ವಾದ್ಯೆಯ ವ್ಯವಸ್ಥೆ ಮಾಡಿರಿ
4. ಟೆಂಟ್ ನ ಪ್ರವೇಶ ದ್ವಾರ ಮತ್ತು ಯೇಸು ಕ್ರಿಸ್ತನ ಚಿತ್ರದ ನಡುವೆ ಸಣ್ಣ ವಾದ್ಯೆಯನ್ನು ಅಂಟಿಸಿರಿ
5. ದೊಡ್ಡ ಟೆಂಟ್ ನೊಳಗೆ ಚಿಕ್ಕ ತುಂಡನ್ನು ಸೇರಿಸಿರಿ ಮತ್ತು ಪ್ರವೇಶ ದ್ವಾರವು ಯೇಸು ಕ್ರಿಸ್ತನ ಚಿತ್ರದಿಂದ ಮುಚ್ಚಿರಬೇಕು.

ಫೋಟೋಕಾಪಿ ಹಾಳೆಯು ವಿಷಯದ ಕಡೆಯಲ್ಲಿ ಕೊಡಲಾಗಿದೆ.

# ಮಿನಿ ಪ್ರದರ್ಶಕರು


<u>ಸರ್ಕಸ್ ನಲ್ಲಿರುವ ಬಲಿಷ್ಠನು</u>



ಮಗುವಿನ ಭಂಗಿಗಳ ನಿಯಂತ್ರಣವನ್ನು ಅಭಿವೃದ್ಧಿಪಡಿಸುವದು ಅವರ ಬೆಳವಣಿಗೆಗೆ ಬಹಳ ಅವಶ್ಯವಾಗಿದೆ, ತಮ್ಮ ಪಾದಗಳಿಗೆ ಒತ್ತು ಕೊಡುವ ಮತ್ತು ತಮ್ಮ ಕೈಗಳ ಪುನಶ್ಚೇತನಶಕ್ತಿಯ ಉಪಯೋಗದಿಂದ ಈ ಚಟುವಟಿಕೆಯಲ್ಲಿ ಮಕ್ಕಳು ತಮ್ಮ ಭಂಗಿಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ಪರೀಕ್ಷಿಸುವರು ಮತ್ತು ಸರಳ ಸಾಮಗ್ರಿಗಳನ್ನು ಪಡೆದುಕೊಳ್ಳುವರು ಅಂದರೆ ಹಗ್ಗ ಮತ್ತು ನಾಲ್ಕು ಹಗುರ ವಸ್ತುಗಳಾದ ಚೆಂಡುಗಳು ಅಥವಾ ಕೆಲವು ಪ್ಲಾಸ್ಟಿಕ್ ಕ್ಯಾನ್‌ಗಳು.

ಮಾಡಬೇಕಾಗಿರುವ ಮೊದಲನೆಯ ಕಾರ್ಯ ಗಟ್ಟಿಯಾಗಿರುವ (20mm ಅಗಲ) ಉದ್ದವಾದ (5 ಮೀಟರ್ ಉದ್ದದ) ಹಗ್ಗವನ್ನು ತೆಗೆದುಕೊಳ್ಳಬೇಕು. ಹಗ್ಗವನ್ನು ಎರಡೂ ಕಡೆಗಳಿಂದ ಗಟ್ಟಿಯಾಗಿ ಬಿಗಿದು ಗಂಟು ಹಾಕಬೇಕು.

ಮಕ್ಕಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಬೇಕು ಮತ್ತು ಗುಂಪುನಿಂದ ಒಬ್ಬ ವ್ಯಕ್ತಿಯನ್ನು ಆರಿಸಿ ಹಗ್ಗದ ಒಳಗೆ ಇರುವಂತೆ ಹೇಳಬೇಕು. ನಾಲ್ಕು ಮಕ್ಕಳು ತಮ್ಮ ಸೊಂಟದ ಹತ್ತಿರ ಹಗ್ಗವನ್ನು ಹಿಡಿದು ಚೌಕಾಕಾರದಲ್ಲಿ ನಿಂತುಕೊಳ್ಳಬೇಕು ಮತ್ತು ಚಿತ್ರದಲ್ಲಿ ತೋರಿಸಿರುವ ಪ್ರಕಾರ ಹೊರಗೆ ಹೋಗುವ ಕಡೆಗೆ ಮುಖ ಮಾಡಬೇಕು. ನಂತರ ಮಕ್ಕಳಿಂದ ಮೂರು ಹೆಜ್ಜೆ ದೂರದಲ್ಲಿ ನಾಲ್ಕು ವಸ್ತುಗಳನ್ನು ಇಡಲಾಗುವದು. ಮೊದಲು ಹೋಗಿ ವಸ್ತುಗಳನ್ನು ತೆಗೆದುಕೊಳ್ಳಬೇಕಾಗಿರುವದು ಅವರ ಗುರಿಯಾಗಿದೆ.



# ಡೊಂಬರಾಟ

ಕೋತಿಯನ್ನು ಎಳೆಯುವುದು

ಸಾಮಗ್ರಿಗಳು

3 ಮೀಟರ್ ಉದ್ದದ ಎರಡು ಹಗ್ಗಗಳು

2 ಪ್ಲಾಸ್ಟಿಕ್ ದಂಡು ಕಟ್ಟು (ಹೂಲ ಪಿಪಾಯದ ಕಟ್ಟು)

ಸೂಚನೆಗಳು

ಎರಡೂ ಹಗ್ಗಗಳನ್ನು ದಂಡಿಗೆ ಕಟ್ಟಿರಿ


ಪ್ರಾರಂಭದ ಗೆರೆ ಮತ್ತು ಗುರಿಯನ್ನು ನಿಗದಿಪಡಿಸಿರಿ

ಐದರಿಂದ ಹತ್ತು ಮಕ್ಕಳ ಎರಡು ತಂಡಗಳನ್ನು ಮಾಡಿರಿ

ಹಗ್ಗದಿಂದ ದಂಡನ್ನು ಎಳೆಯಲು ಪ್ರತಿ ತಂಡದಿಂದ ಒಂದು ಮಗುವನ್ನು ಆರಿಸಿರಿ.


ತಂಡದ ಪ್ರತಿಯೊಬ್ಬ ಸದಸ್ಯನು ದಂಡಿನ ಮೂಲಕವೇ ಹಾದು ಹೋಗಬೇಕು.


ಯಾವ ತಂಡದ ಸದಸ್ಯರೆಲ್ಲರೂ ಮೊದಲು ದಂಡಿನ ಮೂಲಕ ಹಾದು ಹೋಗುತ್ತಾರೋ ಆ ತಂಡ ಗೆಲ್ಲುತ್ತದೆ.





ಸ್ವಲ್ಪ ದೊಡ್ಡ ಮಕ್ಕಳಿಗೆ ಇನ್ನೊಂದು ನಿಯಮವನ್ನು ಸೇರಿಸಬಹುದು, ರಿಂಗ್ ಯಾರು ಬಿಡುತ್ತಾರೋ ಅವರು ಮತ್ತೆ ಮೊದಲಿನಿಂದ ಪ್ರಾರಂಭಿಸಬೇಕು.

| | | | | | | | | | |
|---|---|---|---|---|---|---|---|---|---|
| ದೆ | ಹೊ | ಭ | ರ | ವ | ಸೆ | ತ | ಳೆ | ತ್ಯಾ | ನ್ಯಾ |
| ಕ್ಷೆ | ಗಿ | ಗ | ದೆ | ಕ್ರಾ | ಡೆ | ಲೆ | ನ | ಕ್ಷೆ | ಯಾ |
| ರು | ಗ್ಧ | ಲಾ | ಬಂ | ಹೊ | ವು | ಧ | ಮು | ಗ | ಧೀ |
| ದ | ಯೇ | ತ | ಯ | ಶಿ | ಬಂ | ಅ | ವು | ತ | ಶ |
| ಡೆ | ಹಾ | ಸು | ಧಿ | ಳೆ | ಹೊ | | ವು | ಕ್ರಾ | ರು |
| ಹೊ | ಮು | ಕ್ರಾ | ತ್ಯಾ | ಕ್ಷೆ | ಮೊ | ಳೆ | ದೆ | ಶಿ | ಗ |
| ದ | ಅ | ಯೇ | ಶಿ | ತ | ಮು | ಕ್ಷೆ | ತ | ಬಂ | ಲೆ |
| ನಿಂ | ಅ | ಪ | ಗ್ಧ | ಅ | ತ್ಯಾ | ಗ | ಸಾ | ಧಿ | ಮು |
| ಲಿ | ದೆ | ಗ್ಧ | ರಾ | ಬಂ | ತ | ಹಾ | ವು | ಗ್ಧ | ಗ್ಧ |
| ಕೋ | ತ್ಯಾ | ಳೆ | ಮು | ಧಿ | ಶಿ | ಲು | ಬೆ | ದೆ | ಹೊ |





| | |
|---|---|
|  | 1 |
|  | 14 |
|  | 3 |
|  | 18 |

- ಪಳಗಿಸುವವನು: 5
- ಸರ್ಕಸ್ ಯಜಮಾನ: 1
- ಗಾರುಡಿಗ: 3
- ಹಾಸ್ಯಗಾರ: 4
- ಸರ್ಕಸ್ ಕಲಾವಿದ: 2

## ಪ್ರಶ್ನೆಗಳು ಮತ್ತು ಉತ್ತರಗಳು

1. ಭವಿಷ್ಯದ ವಿಷಯದಲ್ಲಿ ನಿಮಗಿರುವ ದೊಡ್ಡ ಚಿಂತೆ ಏನು ಮತ್ತು ಅದನ್ನು ನೀವು ಹೇಗೆ ಬಗೆಹರಿಸಿಕೊಂಡಿದ್ದೀರಿ?

ನಾವು ಅನೇಕ ವಿಷಯಗಳ ಬಗ್ಗೆ ಚಿಂತಿಸುತ್ತೇವೆ, ಇದು ಸಹಜವಾದ ಸಂಗತಿಯಾಗಿದೆ. ಇಡೀ ಲೋಕವನ್ನು ಬಾಧಿಸಿದಂಥ ಕೊವಿಡ್ ವೈರಸ್ ನಂಥ ಕಾರ್ಯಗಳು ನಮ್ಮ ಕಣ್ಣ ಮುಂದೆ ನಡೆಯುತ್ತಾ ಇರುವದರಿಂದ ಮತ್ತು ಇಂಥ ಪರಿಸ್ಥಿತಿಗಳು ನಮ್ಮ ಶಕ್ತಿಗೆ ಮೀರಿದವುಗಳಾದ್ದರಿಂದ, ಭವಿಷ್ಯದಲ್ಲಿ ಏನಾಗುವದೋ ಎಂಬ ಚಿಂತೆ ಯಾರಿಗೆ ತಾನೆ ಇರುವದಿಲ್ಲ? ಅನೇಕರಿಗೆ ಭವಿಷ್ಯದ ಬಗ್ಗೆ ಯಾವುದೇ ನಿರ್ದಿಷ್ಟತೆ ಇಲ್ಲ, ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು ಆಗುವದಿಲ್ಲವೇನೋ ಅಥವಾ ನಮ್ಮ ಕನಸುಗಳನ್ನು ನೆರವೇರಿಸಿಕೊಳ್ಳಲು ಆಗುವದಿಲ್ಲವೇನೋ ಎಂಬ ಯೋಚನೆ ಇದ್ದೇ ಇರುತ್ತದೆ. ನಮ್ಮ ಭವುಷ್ಯದ ವಿಷಯವಾಗಿಯೂ ದೇವರು ನಮಗೆ ಶಾಂತಿಯನ್ನು ಕೊಡಲು ಬಯಸುವವನಾಗಿದ್ದಾನೆ. ಆತನು ನಮಗೆ ಉತ್ತಮವಾದದ್ದನ್ನು ಕೊಡಲು ಬಯಸುತ್ತಾನೆ ಮತ್ತು ನಾವು ಬಿದ್ದು ಹೋಗಲು ಬಿಡುವದಿಲ್ಲ. ಇದಕ್ಕೆ ವ್ಯತ್ಯಸ್ಥವಾಗಿ, ಪರಿಸ್ಥಿತಿ ಏನೇ ಇದ್ದರೂ ಆತನ ಪ್ರೀತಿ ನಮ್ಮಲ್ಲಿ ಪರಿಪೂರ್ಣವಾಗುತ್ತದೆ. ಆತನು ನಮಗೆ ಪ್ರೀತಿಯನ್ನು ಕೊಡುತ್ತಾನೆ ಮತ್ತು ಸಮೃದ್ಧವಾದ ಜೀವಿತವನ್ನು ವಾಗ್ದಾನ ಮಾಡಿದ್ದಾನೆ. ನಾವು ದೇವರಲ್ಲಿ ಭರವಸೆಯನ್ನಿಡುವವರಾಗಿ ಆ ಹೆದರಿಕೆಗಳನ್ನು ಎದುರಿಸಬೇಕು. ಯೆರೆಮಿಯ 17:7-8 (ನಿಮ್ಮ ವಿದ್ಯಾರ್ಥಿಗಳಿಗೆ ಈ ವಚನವನ್ನು ವೈಯಕ್ತಿಕವಾಗಿ ಓದುವಂತೆ ಹೇಳಿರಿ)


2. ದೇವರು ತನ್ನ ಮಗನ ಮರಣದ ಮೂಲಕ ನಮಗೆ ಜೀವವನ್ನು ಕೊಟ್ಟರುವದರಿಂದ ನೀವು ಆತನಿಗೆ ಯಾವ ರೀತಿ ಕೃತಜ್ಞರಾಗಿರುವಿರಿ?

ಪ್ರತಿಯೊಬ್ಬರಿಗೂ ಕೃತಜ್ಞತೆಯುಳ್ಳವರಾಗಿರಲು ಆಗುವದಿಲ್ಲ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವ ವಿಶ್ವಾಸಿಗಳಿಗೂ ಇದು ಕಷ್ಟದ ವಿಷಯವಾಗಿದೆ. ಆದರೆ ನಾವು ನಮ್ಮ ನಡೆ ಅಥವಾ ನುಡಿಯ ವಿಷಯಗಳಲ್ಲಿ, ಆಯಾ ದಿನಗಳಿಗಾಗಿ ದೇವರಿಗೆ ಕೃತಜ್ಞತೆ ಹೇಳುವಾಗ ಅಥವಾ ಕಷ್ಟದ ಸಮಯಗಳಲ್ಲಿಯೂ ಆತನನ್ನು ಸ್ತುತಿಸುವಾಗ ದೇವರು ಸಂತೋಷಿಸುತ್ತಾನೆ. ನಾವು ಒಂಟಿಯಾಗಿದ್ದೇವೆಂದು ನಂಬುತ್ತಾ, ನಮ್ಮ ವಿಷಯದಲ್ಲಿ ದುಃಖಿಸುವದಕ್ಕಿಂತ ಅಥವಾ ದೂರುಗಳನ್ನು ಹೇಳುವದಕ್ಕಿಂತ ಇದು ಉತ್ತಮವಾಗಿದೆ. ಕೀರ್ತನೆ 138:7-8


3. ದೇವರಲ್ಲಿ ಭರವಸೆಯನ್ನಿಡುವದು ನಿಮಗೆ ಕಷ್ಟವಾಗಿದೆಯೇ? ಯಾಕೆ?

ಎಲ್ಲವೂ ನಮ್ಮ ಮೇಲೆ ಆಧಾರವಾಗಿದೆ ಎಂದು ನಾವು ಯೋಚಿಸುವಾಗ, ಅದಕ್ಕೆ ಕಾರಣ ದೇವರನ್ನು ಬಿಟ್ಟು ನಾವು ಏನು ಬೇಕಾದರೂ ಸಾಧಿಸಬಹುದು ಎಂಬ ನಮ್ಮ ನಂಬಿಕೆಯಾಗಿದೆ. ಆದರೆ ಹಾಗೆ ಆಗುವದಿಲ್ಲ. ನಾವು ಉದ್ಧಾರವಾಗಬೇಕೆಂದು ದೇವರು ಬಯಸುತ್ತಾನೆ, ಆದರೆ ನಾವು ಆತನಲ್ಲಿ ಭರವಸೆ ಇಟ್ಟರೆ ಮಾತ್ರವೇ, ಆತನು ನಮಗಾಗಿ ಇಟ್ಟಿರುವ ಯೋಜನೆಗಳಲ್ಲಿ ನಂಬಿಕೆ ಇಟ್ಟರೆ ಮಾತ್ರವೇ ಇದು ಸಾಧ್ಯ. ಕರ್ತನಲ್ಲಿ ಭರವಸೆಯನ್ನಿಡುವದರಿಂದ ನಮಗೆ ಯಾವ ನಷ್ಟವೂ ಇಲ್ಲ ಯಾಕಂದರೆ ಆತನ ಮೂಲಕ ನಾವು ಅಮೋಘವಾದ ಕಾರ್ಯಗಳನ್ನು ಮಾಡಬಹುದು ಮತ್ತು ಆತನನ್ನು ಬಿಟ್ಟು ಏನನ್ನೂ ಮಾಡಲು ಆಗುವದಿಲ್ಲ. ಯೋಹಾನ 15:5 "ನಾನೇ ದ್ರಾಕ್ಷಿಬಳ್ಳಿ; ನೀವು ಕೊಂಬೆಗಳು. ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ." ಆದರೆ ಕಷ್ಟದ ಸಮಯಗಳಲ್ಲಿ, ದೇವರಲ್ಲಿ ಭರವಸೆಯನ್ನಿಡುವದೇ ಎಲ್ಲವೂ ಆಗುತ್ತದೆ, ಅದಕ್ಕಾಗಿ ನಾವು ಬೆಲೆ ಕೊಡಬೇಕಾದರೂ ನಮಗೆ ಹಿತವೇ ಆಗುತ್ತದೆ. ಕಷ್ಟದ ಸಮಯಗಳಲ್ಲಿಯೂ ಭರವಸೆಯನ್ನಿಡುವದರ ಮೇಲೆ ನಮ್ಮ ಶಾಂತಿಯು ಆಧಾರವಾಗಿರುತ್ತದ. ಜ್ಞಾನೋಕ್ತಿಗಳು 3:5-8

# ಸ್ಮಾರಕ ಚಿನ್ಹೆಗಳು





# 5 ಪ್ರೀತಿಸಿರಿ!

## ಭಯ: ತಿರಸ್ಕಾರ ಮತ್ತು ಒಂಟಿತನದ ಭಯ

## ಐಸ್ ಬ್ರೇಕರ್

ಸತ್ಯವೇದದ ಭಕ್ತರು

ರಜಾದಿನದ ಸತ್ಯವೇದ ಶಾಲೆಯಲ್ಲಿ ಭಾಗವಹಿಸುವ ಮಕ್ಕಳು ಸತ್ಯವೇದದ ಕುರಿತು ಅನೇಕ ಕಥೆಗಳನ್ನು ಕೇಳಿಸಿಕೊಂಡಿರುತ್ತಾರೆ. ಸತ್ಯವೇದದ ಭಕ್ತರ ಮೂಲಕ ಒಗಟುಗಳನ್ನು ಹಾಡುವದು ಉತ್ತಮವಾದ ಆಲೋಚನೆಯಾಗಿದೆ; ಮಕ್ಕಳಲ್ಲಿ ಯಾರಾದರು ಒಬ್ಬರು ಭಕ್ತನಂತೆ ನಟಿಸಬೇಕು, ಉಳಿದವರು ಆತನು ಯಾರು ಎಂದು ಹೇಳಬೇಕು. ನೀವು ಹೊಸ ನಟನನ್ನು ಆಯ್ಕೆ ಮಾಡಿದ ನಂತರ, ಸಮಯ ಮುಗಿಯುವ ತನಕ ಮುಂದುವರೆಸಿರಿ.

ಇನ್ನೊಂದು ವ್ಯತ್ಯಾಸ ಏನೆಂದರೆ ಪ್ರತಿಯೊಬ್ಬ ಮಗು ಬರುವಾಗ ಆತನ ಬೆನ್ನ ಹಿಂದೆ ಸತ್ಯವೇದದ ಭಕ್ತನ ಹೆಸರನ್ನು ಅಂಟಿಸುವದು.

ಮಕ್ಕಳು ತಮ್ಮ ಗುರುತು ಪ್ರಕಟಪಡಿಸದೆ ಕಾರ್ಡ್ ಗಳನ್ನು ಓದಬೇಕು. ಪ್ರತಿಯೊಂದು ಮಗು "ಹೌದು ಅಥವಾ ಇಲ್ಲ" ಪ್ರಶ್ನೆಗಳನ್ನು ಕೇಳಬೇಕು ಆಗ ತಮ್ಮ ಬೆನ್ನ ಹಿಂದೆ ಇರುವ ಭಕ್ತ ಯಾರು ಎಂಬದನ್ನು ಊಹಿಸಲು ಸಾಧ್ಯವಾಗುತ್ತದೆ.

## ಪರದೆಯ ಹಿಂದೆ

ಸಿಂಹವನ್ನು ಪಳಗಿಸುವವನು ಸರ್ಕಸ್ ಪ್ರದರ್ಶನದ ಅಂತಿಮ ದಿನದಲ್ಲಿ ಸಿಂಹವನ್ನು ಹೊರಗೆ ಕರೆದುಕೊಂಡು ಬರುವದನ್ನು ನೋಡಲು ಹಾಸ್ಯಗಾರನು ಉತ್ಸುಕನಾಗಿದ್ದನು. ವೀಡಿಯೊ ಪ್ರೊಜೆಕ್ಟರ್ ಮೂಲಕ ಬೆಂಕಿಯ ದೃಶ್ಯಗಳು ಬರುತ್ತಿದ್ದವು, ಆಗ ಸಿಂಹ ಪಳಗಿಸುವವನು ಸಿಂಹವು ಜಿಗಿಯುವ ದಂಡುಕಟ್ಟೆಯನ್ನು ಹಿಡಿದುಕೊಂಡಿದ್ದನು. (ಅದಕ್ಕೆ ಬೆಂಕಿ ಇರುವ ಹಾಗೆ ತೋರ್ಪಡಿಸಬೇಕು). ಪ್ರದರ್ಶನವು ಅದ್ಭುತವಾಗಿದೆ ಎಂದು ಹಾಸ್ಯಗಾರನು ಯೋಚಿಸುತ್ತಾನೆ, ಆದರೆ ತನ್ನನ್ನು ಪ್ರದರ್ಶಕನಿಗೆ ವ್ಯಕ್ತಪಡಿಸಲು ಹೆದರುತ್ತಾನೆ, ಯಾಕಂದರೆ ಅವನಲ್ಲಿ ತಿರಸ್ಕಾರ ಭಯವಿತ್ತು. ವಾರದ ದಿನವೆಲ್ಲಾ ಅವನನ್ನು ಭೇಟಿ ಮಾಡಲು ಹಾಸ್ಯಗಾರನು ಕಾಯುತ್ತಿದ್ದನು, ಆದರೆ ಒಂದುವೇಳೆ ಅವನು ತಿರಸ್ಕಾರ ಮಾಡಿದರೆ ಏನು ಮಾಡುವದು? ತನ್ನನ್ನು ರಕ್ಷಿಸಿಕೊಳ್ಳಲು "ಹಾಯ್" ಹೇಳದೆ ಇರುವದೇ ಉತ್ತಮವೇ ಅಲ್ಲವೇ? ಅಂತಿಮವಾಗಿ, ಹಾಸ್ಯಗಾರನು ಅವನನ್ನು ಮಾತನಾಡಿಸಲು ಧೈರ್ಯ ತಂದುಕೊಂಡನು ಮತ್ತು ಸಿಂಹ ಪಳಗಿಸುವವನ ಬಳಿಗೆ ನಡೆದುಕೊಂಡು ಹೋಗಿ, "ಹಾಯ್" ಎಂದು ಹೇಳಿದನು. ಕೂಡಲೇ ಅವರಿಬ್ಬರೂ ಮಾತನಾಡಲು ಪ್ರಾರಂಭಿಸಿದರು ಮತ್ತು ಸ್ನೇಹಿತರಾದರು. ಅವರು ವೇದಿಕೆಯ ಮೇಲಿಂದ ಇಳಿದು, ಹಳೆಯ ಸ್ನೇಹಿತರಂತೆ ಮಾತನಾಡುತ್ತಿದ್ದರು ಮತ್ತು ಹಾಸ್ಯಗಾರನು ಪ್ರೇಕ್ಷಕರನ್ನು ನೋಡಿ ಅವರತ್ತ ಕೈ ಬೀಸಿದನು!

## ಪ್ರದರ್ಶನ ಪ್ರಾರಂಭವಾಗಲಿ!

ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು!

ಲೂಕ 24:1-12, 36-42

-ತಿರಸ್ಕಾರ ಮತ್ತು ಒಂಟಿತನದ ಭಯ-

ಪ್ರೀತಿಗಾಗಿ ನಮ್ಮ ಹೃದಯವನ್ನು ತೆರೆಯುವದು ಅತ್ಯಂತ ಭಯಾನಕ ವಿಷಯಗಳಲ್ಲಿ ಒಂದಾಗಿದೆ ಅಲ್ಲವೇ? ನಾವು ಪ್ರತಿಯೊಬ್ಬರೂ ತಿರಸ್ಕಾರ ಮತ್ತು ಒಂಟಿತನದ ವಿಷಯದಲ್ಲಿ ಹೆದರಿಕೊಳ್ಳುತ್ತೇವೆ. ಇತರರನ್ನು ಪ್ರೀತಿಸುವ ಮತ್ತು ಪೀತಿಸಲ್ಪಡುವ ಉದ್ದೇಶದೊಂದಿಗೆ ದೇವರು ನಮ್ಮನ್ನು ಸಾಮಾಜಿಕ ಜೀವಿಗಳಾಗಿ ಉಂಟುಮಾಡಿದ್ದಾನೆ. ಪ್ರೀತಿ ಮತ್ತು ಸಂಪರ್ಕವಿಲ್ಲದೆ, ನಾವು ಉಳಿಯುವದಿಲ್ಲ. ಪ್ರೀತಿಯಿಲ್ಲದೆ, ನಾವು ಸುಮ್ಮನೆ ಬದುಕಿದ್ದೇವೆ, ಹೇಗೋ ಕಷ್ಟಪಟ್ಟು ಹೊಟ್ಟೆ ತುಂಬಿಸಿಕೊಳ್ಳುವವರಾಗಿದ್ದೇವೆ. ನಮ್ಮೆಲ್ಲರಿಗೆ ಸಮುದಾಯವು ಬೇಕು, ಮಾತನಾಡಲು ಸ್ನೇಹಿತರು ಬೇಕು, ಪ್ರೀತಿಸಲು ಉತ್ತಮ ಸ್ನೇಹಿತ ಬೇಕು ಮತ್ತು ಮುಂದೊಂದು ದಿನ ಮದುವೆ ಮಾಡಿಕೊಂಡು ಕುಟುಂಬಸ್ಥರಾಗಬೇಕು. ಒಂದುವೇಳೆ ಹಿಂದೆ ಏನಾದರೂ ನಮಗೆ ನೋವಾಗಿದ್ದರೆ, ಇತರರಿಗಾಗಿ ನಮ್ಮ ಹೃದಯವನ್ನು ತೆರೆಯುವದು ಬಹಳ ಕಷ್ಟವೇ. ಮತ್ತೊಮ್ಮೆ ನನಗೆ ತಿರಸ್ಕಾರ ಎದುರಾದರೆ ಏನು ಮಾಡುವದು? ಅವರು ನನ್ನನ್ನು ಮತ್ತೆ ಪ್ರೀತಿ ಮಾಡದೆ ಹೋದರೆ ಏನು ಮಾಡುವದು? ಇತರರನ್ನು ಸಂಧಿಸುವ ಮತ್ತು "ಪೀತಿ ಮಾಡುವ" ಸಾಹಸ ಮಾಡಲು ನಾನು ಧೈರ್ಯ ಮಾಡಬಹುದೇ?

ಯೇಸು ಕ್ರಿಸ್ತನು ಭೂಲೋಕದಲ್ಲಿದ್ದಾಗ ಇದೇ ರೀತಿಯ ಹೆದರಿಕೆಯನ್ನು ಅನುಭವಿಸಿದನು. ಆತನಿಗೆ ಸ್ನೇಹಿತರು ಮತ್ತು ಪ್ರೀತಿಪಾತ್ರರು, ಕುಟುಂಬ ಮತ್ತು ಪರಿಚಯಸ್ಥರು ಇದ್ದರು. ಆತನು ಜನರಿಗಾಗಿ ತನ್ನ ಹೃದಯವನ್ನು ತೆರೆದನು, ಆದರೆ ಅವರು ಮತ್ತೆಮತ್ತೆ ಆತನನ್ನು ತಿರಸ್ಕರಿಸಿದರು. ಅನೇಕ ಸಲ ಆತನ ಹೃದಯ ಒಡೆದು ಹೋಯಿತು. ನಂತರ ಆತನು ಕಟ್ಟಕಡೆಯ ಯಜ್ಞವನ್ನು ಅರ್ಪಿಸಿದನು, ಅದನ್ನು ನಾವು ಹಿಂದಿನ ಪಾಠದಲ್ಲಿ ಓದಿದ್ದೇವೆ, ಅಲ್ಲಿ ಆತನು ನನಗಾಗಿ ಮತ್ತು ನಿಮಗಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟನು. ಆದರೆ ಕಥೆ ಅಲ್ಲಿಗೇ ಮುಗಿಯುವದಿಲ್ಲ!

ಮೂರನೆಯ ದಿನದಲ್ಲಿ ಮುಂಜಾನೆ ಇನ್ನೂ ಮೊಬ್ಬಿರುವಾಗ, ಯೇಸು ಕ್ರಿಸ್ತನನ್ನು ಇಡಲಾಗಿದ್ದ ಸಮಾಧಿಯ ಬಳಿಗೆ ಸ್ತ್ರೀಯರು ಹೋದರು. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮೃತಪಟ್ಟ ನಂತರ, ಆತನ ಶಿಷ್ಯರು ಮತ್ತು ಕುಟುಂಬದವರು ಆತನನ್ನು ಗುಹೆ ರೀತಿಯ ಸಮಾಧಿಯಲ್ಲಿ ಇಟ್ಟರು ಮತ್ತು ಅದರ ಪ್ರವೇಶ ದ್ವಾರದಲ್ಲಿ ದೊಡ್ಡ ಬಂಡೆಯನ್ನು ಇಟ್ಟಿದ್ದರು. ಆದರೆ ಸ್ತ್ರೀಯರು ಸಮಾಧಿಯ ಬಳಿಗೆ ಬಂದಾಗ, ದೊಡ್ಡ ಬಂಡೆ ಕಲ್ಲು ಉರುಳಿರುವದನ್ನು ಮತ್ತು ಸಮಾಧಿಯು ಖಾಲಿಯಾಗಿರುವದನ್ನು ನೋಡಿದರು! ಯಾರೋ ಬಂದು ಆತನ ದೇಹವನ್ನು ಕದ್ದುಕೊಂಡು ಹೋಗಿರಬಹುದೆಂದು ಅವರು ಹೆದರಿದರು. ಆದರೆ ಒಬ್ಬ ದೇವದೂತನು ಅವರನ್ನು ಅಲ್ಲಿ ಭೇಟಿ ಮಾಡಿದನು ಮತ್ತು ಯೇಸು ಕ್ರಿಸ್ತನು ತಾನು ಹೇಳಿದಂತೆಯೇ ಎದ್ದಿದ್ದಾನೆ ಎಂದು ಆ ಸ್ತ್ರೀಯರಿಗೆ ತಿಳಿಸಿದನು. ಕೆಲವೇ ಸಮಯಗಳಲ್ಲಿ ತನ್ನ ಶಿಷ್ಯರೆಲ್ಲರೂ ಸೇರಿದ್ದ ಸ್ಥಳದಲ್ಲಿ ಯೇಸು ಕ್ರಿಸ್ತನು ಅವರಿಗೆ ಕಾಣಿಸಿಕೊಂಡನು. ಆತನು ಬದುಕಿರುವದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು, ಸಂತೋಷವಾಯಿತು! ಇದು ಕ್ರೈಸ್ತತ್ವವನ್ನು ಇತರೆ ಧರ್ಮಗಳಿಗಿಂತ ಭಿನ್ನವಾಗಿಸುತ್ತದೆ. ನಮ್ಮ ನಾಯಕನಾದ ಯೇಸು ಕ್ರಿಸ್ತನು ನಿಜವಾಗಿಯೂ ಶಿಲುಬೆಯ ಮೇಲೆ ಪ್ರಾಣ ಕೊಟ್ಟನು, ಹೂಣಲ್ಪಟ್ಟನು ನಂತರ ಸತ್ತವರೊಳಗಿಂದ ಎದ್ದು ಬಂದನು! ಆತನು ತನ್ನ ಶಿಷ್ಯರನ್ನು ಭೇಟಿ ಮಾಡಿದ ನಂತರ ಪರಲೋಕಕ್ಕೆ ಏರಿ ಹೋದನು, ಈಗ ಅಲ್ಲಿಯೇ ಇದ್ದಾನೆ. ಆತನು ಇಂದಿಗೂ ಪರಲೋಕದಲ್ಲಿ ಜೀವದಿಂದಿದ್ದಾನೆ ಮತ್ತು ನಮ್ಮಲ್ಲಿ ಪ್ರತಿಯೊಬ್ಬರನ್ನು ಈಗಲೂ ಪ್ರೀತಿಸುವವನಾಗಿದ್ದಾನೆ. ಒಂದುವೇಳೆ ನಾವು ಆತನನ್ನು ತಿರಸ್ಕರಿಸಿದರೂ, ಆತನು ನಮ್ಮನ್ನು ಪ್ರೀತಿಸುತ್ತಾನೆ. ಹೌದು, ತಿರಸ್ಕಾರವು ನಮ್ಮನ್ನು ನೋಯಿಸುವಂತೆ ಆ ತಿರಸ್ಕಾರವು ಆತನನ್ನು ನೋಯಿಸುವದಾಗಿದೆ.


ನಮ್ಮ ಸ್ನೇಹಿತನಾದ ಹಾಸ್ಯಗಾರನು ಇದೇ ಭಯವನ್ನು ಎದುರಿಸಿದನು. ವಾರವೆಲ್ಲಾ ಅವನು ಸಿಂಹ ಪಳಗಿಸುವವನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳಬೇಕೆಂದು ಯೋಚಿಸುತ್ತಿದ್ದನು. ಆದರೆ ತಿರಸ್ಕಾರದ ಭಯ ಅವನನ್ನು ಕಾಡಿತು. ಅವನಿಗೆ ಸ್ನೇಹಿತ ಬೇಕಿದ್ದನು ಆದರೆ ಅದಕ್ಕಾಗಿ ಅವನು ತನ್ನ ಹೃದಯವನ್ನು ತೆರೆಯುವ ಸಾಹಸವನ್ನು ಮಾಡಬೇಕಾಗಿತ್ತು. ಆತನು ಇಂದು ಮುಂಜಾನೆ ಧೈರ್ಯ ತೆಗೆದುಕೊಂಡು, ತಿರಸ್ಕಾರದ ಭಯವನ್ನು ತೆಗೆದಿಟ್ಟು, ಸಿಂಹ ಪಳಗಿಸುವವನನ್ನು ಸ್ನೇಹಿತನನ್ನಾಗಿ ಮಾಡಿಕೊಂಡದ್ದು ಅದ್ಭುತವಾದ ವಿಷಯವಾಗಿದೆ ಅಲ್ಲವೇ? ಕೆಲವೊಮ್ಮೆ ನಮಗೆ ನೋವಾಗುತ್ತದೆ, ಕೆಲವೊಮ್ಮೆ ನಾವು ಎದುರುನೋಡುತ್ತಿರುವ ಪ್ರೀತಿ ನಮಗೆ ಸಿಗುತ್ತದೆ! ನಿಮ್ಮ ತಿರಸ್ಕಾರ ಮತ್ತು ಒಂಟಿತನದ ಭಯಗಳನ್ನು ಬಿಡುವ ಸಾಹಸ ಮಾಡಿ "ಪ್ರೀತಿಸಲು" ಮುಂದಾಗುವಿರೋ?

## ಕಂಠಪಾಠ ವಚನ

ಯೊವಾನ್ನ 15:13 "ಪ್ರಾಣವನ್ನೇ ಸೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ."

## ನೀವೇ ಪ್ರಯತ್ನಿಸಿರಿ

ಕಲೆ/ಮಲಿನ (1 ಯೋಹಾನ 1:9)



ಸಾಮಗ್ರಿಗಳು

ಯಾವುದೇ ಬಣ್ಣದ ಮಾರ್ಕರ್.

ಪ್ರದರ್ಶನ

ಮಾನವನ ಹೃದಯವನ್ನು ಪ್ರತಿನಿಧಿಸುವ ಶುದ್ಧ ಹಸ್ತವನ್ನು ತೋರಿಸಿರಿ. ಪಾಪವನ್ನು ಪ್ರತಿನಿಧಿಸುವ ಕಪ್ಪು ಮಾರ್ಕರ್ ನಿಂದ, ಕೈ ಮೇಲೆ ಒಂದು ಗೆರೆಯನ್ನು ಹಾಕಿರಿ, ಅದು ಹೃದಯವು ಮಲಿನಗೊಂಡಿದೆ ಎಂಬದನ್ನು ಸೂಚಿಸುತ್ತದೆ. ಕೈಯನ್ನು ಮಡಚಿರಿ, ಅದು ನಾವು ಪ್ರಾರ್ಥನೆ ಮಾಡಲು ಕಣ್ಣು ಮುಚ್ಚುವದನ್ನು ಪ್ರತಿನಿಧಿಸುತ್ತದೆ. ನೀವು ನಿಮ್ಮ ಕೈ ತೆಗೆಯುವಾಗ, ಆ ಗೆರೆ ಶಿಲುಬೆ ಆಗಿರುತ್ತದೆ.

ಸಂದೇಶ

ನೀವು ಎಷ್ಟೇ ಪಾಪಗಳನ್ನು ಮಾಡಿದ್ದರೂ, ಪಶ್ಚಾತ್ತಾಪಪಟ್ಟು, ನಿಮ್ಮ ಹೃದಯದೊಳಗೆ ಬರಲು ಯೇಸು ಕ್ರಿಸ್ತನಿಗೆ ಅನುಮತಿ ನೀಡಿದರೆ, ಆತನು ನಿಮ್ಮನ್ನು ಕ್ಷಮಿಸುವನು.

ಇದು ಹೇಗೆ ಸಾಧ್ಯ

ನಿಮ್ಮ ಕೈಯ ಹಸ್ತದೊಳಗೆ ಗೆರೆ ಹಾಕುವಾಗ, ಮೊದಲನೆಯ ಸಲ ಮಡಚುವಾಗ ಉದ್ದವಾದ ಗೆರೆಯನ್ನು ಹಾಕಬೇಕು, ಆದ್ದರಿಂದ ನೀವು ಮುಚ್ಚುವಾಗ, ಮಾರ್ಕರ್ ಇಂಕ್ ಹರಡುತ್ತದೆ, ಮತ್ತು x (ಶಿಲುಬೆಯ) ರೂಪ ಬರುತ್ತದೆ. ಚಿತ್ರಗಳನ್ನು ನೋಡಿರಿ.

## ಸ್ಮಾರಕ ಚಿನ್ಹೆ

ಗವಿ:

ಸಾಮಗ್ರಿಗಳು:

- ಗವಿ ಮಾದರಿ
- ಕತ್ತರಿಗಳು
- ಬಣ್ಣ ಅಥವಾ ಬಣ್ಣದ ಬಳಪಗಳು
- 1 ಹಲಗೆಯ ಕೊಕ್ಕೆ

ಸೂಚನೆಗಳು:

ಚಿತ್ರಗಳಿಗೆ ಬಣ್ಣ ಹಚ್ಚಿರಿ.
ಬಂಡೆ ಮತ್ತು ಗುಹೆಯ ಚಿತ್ರಗಳೊಂದಿಗೆ ಪಟ್ಟಿಗಳನ್ನು ಕತ್ತರಿಸಿರಿ.
ಸಹಾಯದೊಂದಿಗೆ, ಸೂಚಿಸಲಾಗಿರುವ ಎರಡು ಸಣ್ಣ ರಂಧ್ರದೊಳಗೆ ಗುರುತು ಇಟ್ಟು, ಬಂಡೆಯನ್ನು ಗುಹೆಗೆ ಅಂಟಿಸಿರಿ
ಚುಕ್ಕೆಗಳಿರುವ ಸಾಲುಗಳಿಗನುಸಾರ ಗುಹೆಯನ್ನು ಕತ್ತರಿಸಿರಿ.

ಹಿಂದೆ ಗುಹೆಯಲ್ಲಿ ಮಾಡಿರುವ ಜಾಗಗಳ ನಡುವೆ ಚಿತ್ರಗಳೊಂದಿಗೆ ಪಟ್ಟಿಗಳನ್ನು ಅಂಟಿಸಿರಿ.

ಫೋಟೋಕಾಪಿ ಹಾಳೆ ವಿಷಯದ ಕಡೆಯಲ್ಲಿ ಕೊಡಲಾಗಿದೆ.

## ಮನೆಯಲ್ಲಿ


ಮಿನಿ ಥೇಟರ್

ಈ ದಿನದಲ್ಲಿ ಕಲಿತ ವಿಷಯಗಳನ್ನು ತಮ್ಮ ತಂದೆತಾಯಿಗಳೊಂದಿಗೆ ನೆನಪು ಮಾಡಿಕೊಳ್ಳಲು ತಾವು ದವಸಧಾನ್ಯಗಳ ಪೆಟ್ಟಿಗೆಯಿಂದ ಮಾಡಿದ ಥೇಟರ್ ಮನೆಯಲ್ಲಿ ಉಪಯೋಗಿಸುವಂತೆ ಮಕ್ಕಳಿಗೆ ನೆನಪು ಮಾಡಿರಿ.

ವಾರಕ್ಕೊಮ್ಮೆಯಾದರೂ ಸಂಡೇ ಸ್ಕೂಲ್ ನಲ್ಲಿ ಕಲಿತ ವಿಷಯವನ್ನು ನೆನಪು ಮಾಡಿಕೊಳ್ಳಲು ಅವರು ಮನೆಯಲ್ಲಿ ಇದನ್ನು ಚಟುವಟಿಕೆಯನ್ನಾಗಿ ಮಾಡಲು ಅವರನ್ನು ಪ್ರೋತ್ಸಾಹಪಡಿಸಿರಿ.

ಈ ಅಭ್ಯಾಸದೊಂದಿಗೆ ಪ್ರೀತಿಯ ಬಂಧಗಳನ್ನು ಬಲಪಡಿಸುವಾಗ ಅವರು ತಮ್ಮನ್ನು ವ್ಯಕ್ತಪಡಿಸುವ ರೀತಿಯನ್ನು ಉತ್ತಮವಾಗಿ ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

# ಡೊಂಬರಾಟ




ವೇಗವಾಗಿ ಆಲೋಚಿಸಿರಿ


ಸಾಮಗ್ರಿಗಳು
10 ಹಗುರವಾದ ವಸ್ತುಗಳು ಅಂದರೆ ಚೆಂಡುಗಳು ಅಥವಾ ಪ್ಲಾಸ್ಟಿಕ್ ಕ್ಯಾನ್ಸ್


ಸೂಚನೆಗಳು
5 ರಿಂದ 10 ಸದಸ್ಯರಿರುವ ಎರಡು ತಂಡವಾಗಿ ಗುಂಪನ್ನು ವಿಭಾಗಿಸಿರಿ
10 ವಸ್ತುಗಳ ನೇರವಾದ ಸಾಲನ್ನು ಮಾಡಿರಿ (ತಂಡದ ಎಷ್ಟು ಮಂದಿ ಮಕ್ಕಳಿದ್ದಾರೆ ಎಂಬದರ ಮೇಲೆ ಇದು ಆಧಾರವಾಗಿರುವದು)
ಮೊದಲ ಎರಡು ತಂಡಗಳು ಒಂದು ಹೆಜ್ಜೆ ದೂರದಲ್ಲಿ ವಾಸ್ತುಗಳಿಗೆ ಬೆನ್ನು ಮಾಡಿ ಕೂತುಕೊಳ್ಳಬೇಕು.
ಶಿಕ್ಷಕ ವಿವಿಧ ಸೂಚನೆಗಳನ್ನು ಕೊಡಬೇಕು, ಉದಾಹರಣೆಗೆ: ತಲೆ, ಮಕ್ಕಳು ತಮ್ಮ ತಲೆಯನ್ನು ಮುಟ್ಟಬೇಕು, ಮೊಣಕಾಲು ಮಕ್ಕಳು ತಮ್ಮ ಮೊಣಕಾಲುಗಳನ್ನು ಮುಟ್ಟಬೇಕು, ಇತ್ಯಾದಿ. ಶಿಕ್ಷಕ ವೇಗವಾಗಿ ಆಲೋಚಿಸಿರಿ ಎಂದು ಹೇಳುವಾಗ ಮಕ್ಕಳು ತಮ್ಮ ಹಿಂದೆ ಇರುವ ವಸ್ತುವನ್ನು ತೆಗೆದುಕೊಳ್ಳಬೇಕು. ಯಾವ ತಂಡದವರು ಮೂರು ಬಾರಿ ಹೆಚ್ಚಿನ ವಸ್ತುಗಳನ್ನು ತೆಗೆದುಕೊಳ್ಳುತ್ತಾರೋ ಅವರು ಗೆಲ್ಲುತ್ತಾರೆ.

ಸ್ವಲ್ಪ ದೊಡ್ಡ ಮಕ್ಕಳಿಗೆ ಸೂಚನೆಗಳು ಗೊಂದಲಕರವಾಗಿರಬೇಕು, ಉದಾಹರಣೆಗೆ, ಎದ್ದು ನಿಲ್ಲಿರಿ, ಒಂದು ಕಾಲಿನಲ್ಲಿ ಜಿಗಿಯಿರಿ, ಎರಡು ಭಸ್ಕಿ ಹೊಡೆಯಿರಿ ನಂತರ ವೇಗವಾಗಿ ಆಲೋಚಿಸಿರಿ ಆಜೆಯನ್ನು ಕೊಡಿರಿ!


# ವಿದ್ಯಾರ್ಥಿ ಪುಸ್ತಕಗಳು








ಕೆಳಗೆ ಕೊಡಲಾಗಿರುವ ಆಕಾರಗಳಿಗೆ ವೃತ್ತ ಹಾಕಿರಿ



ಉತ್ತರ ಸರಿಯಾಗಿದ್ದರೆ ಈ ಚಿತ್ರಕ್ಕೆ ವೃತ್ತ ಹಾಕಿರಿ.
ಉತ್ತರ ತಪ್ಪಾಗಿದ್ದರೆ ಈ ಚಿತ್ರವನ್ನು ಉಪಯೋಗಿಸಿರಿ.

1. ಸ್ತ್ರೀಯರು ಸಂಜೆಯ ಹೊತ್ತಿನಲ್ಲಿ ಸಮಾಧಿಯ ಬಳಿಗೆ ಹೋದರು.
2. ಸಮಾಧಿಗೆ ಮುಚ್ಚಲಾಗಿದ್ದ ಕಲ್ಲು ಉರುಳಿರುವದನ್ನು ಅವರು ನೋಡಿದರು.
3. ಒಳಗೆ ಹೋದಾಗ, ಕರ್ತನಾದ ಯೇಸು ಕ್ರಿಸ್ತನ ದೇಹವನ್ನು ಅವರು ನೋಡಿದರು.
4. ಪೇತ್ರನು, ಹೇಗೂ, ಸಮಾಧಿಯ ಬಳಿಗೆ ಓಡಿದನು.





## ಪ್ರಶ್ನೆಗಳು ಮತ್ತು ಉತ್ತರಗಳು

### 1. ನೀವು ದೇವರಿಗೆ ವ್ಯಕ್ತಪಡಿಸಿರುವ ಅತ್ಯಂತ ಉತ್ತಮವಾದ ಪ್ರೀತಿಯ ಕಾರ್ಯ ಏನು?

ಪ್ರೀತಿ ತೋರಿಸುವದು ನಮಗೆ ಎದುರಾಗುವ ಅತ್ಯಂತ ಕಷ್ಟವಾದ ಪರೀಕ್ಷೆಗಳಲ್ಲಿ ಒಂದಾಗಿದೆ, ಇದಲ್ಲದೆ ಪ್ರೀತಿಸ್ವರೂಪನಾಗಿರುವ ದೇವರಿಗೆ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ಸಂದರ್ಭ ಬರುವಾಗ ಅದು ದೊಡ್ಡ ಪರೀಕ್ಷೆ ಆಗಿರುತ್ತದೆ. ವಾಸ್ತವದಲ್ಲಿ, ನಮ್ಮನ್ನು ನಾವು ನಿರಾಕರಿಸುವಾಗ ಮತ್ತು ಆತನು ನಮ್ಮ ವಿಷಯದಲ್ಲಿ ಮಿನುಗುವಂತೆ ಮಾಡುವಾಗ ಪರಲೋಕದಲ್ಲಿರುವ ನಮ್ಮ ತಂದೆಯಿಂದ ಬಹುಶಃ ಅನೇಕ ಸಂತೋಷಗಳನ್ನು ಪಡೆದುಕೊಳ್ಳುತ್ತೇವೆ. ಇದು ನಮ್ಮ ಕರೆಗನುಸಾರ ನಮ್ಮನ್ನು ಒಪ್ಪಿಸಿಕೊಡುವಾಗ ಸಾಧ್ಯವಾಗುತ್ತದೆ, ಅಂದರೆ, ಆತನನ್ನು ಸೇವಿಸಲು ಪ್ರೀತಿಸುವದು, ಸಭೆಯಲ್ಲಿ ಅಥವಾ ಆತನ ವಾಕ್ಯವನ್ನು ಹಂಚಿಕೊಳ್ಳುವದು, ಅಥವಾ ಆತನ ಹೆಸರಿನಲ್ಲಿ ನಾವು ಮಾಡುವ ಕಾರ್ಯಗಳನ್ನು ಆಸಕ್ತಿಯಿಂದ ಮಾಡುವದು. ಇವುಗಳು ನಾವು ಆತನನ್ನು ಪ್ರೀತಿಸುತ್ತೇವೆ ಎಂಬದನ್ನು ವ್ಯಕ್ತಪಡಿಸುವ ಉತ್ತಮವಾದ ಮಾರ್ಗಗಳಾಗಿವೆ. ಕೀರ್ತನೆ 27:4

### 2. ನೀವು ಒಬ್ಬ ವ್ಯಕ್ತಿಗೆ ವ್ಯಕ್ತಪಡಿಸಿರುವ ಅತ್ಯಂತ ಉತ್ತಮವಾದ ಪ್ರೀತಿಯ ಕಾರ್ಯ ಏನು?


ನಮ್ಮನ್ನು ಪ್ರೀತಿಸುವವರನ್ನು ನಾವು ಪ್ರೀತಿಸುವ ಉತ್ತಮವಾದ ಗುಣವನ್ನು ದೇವರು ನಮಗೆ ಕೊಟ್ಟಿದ್ದಾನೆ, ಆದರೆ ನಮ್ಮನ್ನು ಪ್ರೀತಿಸದೆ ಇರುವವರನ್ನು ಸಹ ನಾವು ಪ್ರೀತಿಸಬೇಕೆಂದು ಆತನು ಬಯಸುತ್ತಾನೆ. ಇದು ಬಹಳ ಕಷ್ಟದ ಕೆಲಸವಾಗಿದೆ ಯಾಕಂದರೆ ಅನೇಕ ಸಮಯಗಳಲ್ಲಿ ಕುಟುಂಬದ ಸದಸ್ಯ ಅಥವಾ ಸ್ನೇಹಿತನು ನಮ್ಮನ್ನು ನೋಯಿಸುವಾಗ ಅವರನ್ನು ಕ್ಷಮಿಸಲು ನಾವು ಬಯಸುವದಿಲ್ಲ. ಆದರೆ ದೇವರು ತನ್ನ ಪ್ರೀತಿಯನ್ನು ನಮಗೆ ತೋರಿಸಿರುವ ಪ್ರಕಾರವೇ, ನಾವು ಇತರರಿಗೆ ಪ್ರೀತಿಯನ್ನು ತೋರಿಸಬೇಕು. ಅದು ಕಷ್ಟವಾಗಿರಬಹುದು ಆದರೆ ನಮ್ಮ ತಪ್ಪುಗಳ ಹೊರತಾಗಿಯೂ ದೇವರು ನಮ್ಮನ್ನು ಪ್ರೀತಿಸಿದಂತೆ ನಾವು ಇತರರನ್ನು ಪ್ರೀತಿಸಲು ದೇವರು ನಮಗೆ ಸಹಾಯ ಮಾಡುತ್ತಾನೆ. 1 ಕೊರಿಂಥ 13:1-3

### 3. ಪ್ರೀತಿಯನ್ನು ತೋರಿಸುವಾಗ ನೀವು ಎಂದಾದರು ತಿರಸ್ಕಾರವನ್ನು ಅನುಭವಿಸಿದ್ದೀರೋ? ಆಗ ನಿಮ್ಮ ಪ್ರತಿಕ್ರಿಯೆ ಏನು?

ಪ್ರೀತಿಯೇ ಬೇಡ ಎಂದು ಹೇಳುವ ಮತ್ತು ನಮ್ಮನ್ನು ತಿರಸ್ಕರಿಸುವ ಮೂಲಕ ಅದನ್ನು ವ್ಯಕ್ತಪಡಿಸುವವನನ್ನು ನಾವು ಪ್ರೀತಿಸುವದು ಹೇಗೆ? ಒಂದುವೇಳೆ ನಾವು ತಿರಸ್ಕರಿಸಲ್ಪಟ್ಟರೂ, ಆ ವ್ಯಕ್ತಿಯನ್ನು ನಾವು ಕ್ಷಮಿಸುವದಾದರೆ ಪ್ರೀತಿಯನ್ನು ತೋರಿಸಲು ಮುಂದುವರೆಸಬಹುದು. ಒಂದುವೇಳೆ ನಾವು ಆ ವ್ಯಕ್ತಿಯನ್ನು ಕ್ಷಮಿಸಿದರೆ, ನಮ್ಮ ಹೃದಯವನ್ನು ಶುದ್ಧಮಾಡಿಕೊಳ್ಳುವೆವು ಮತ್ತು ದೇವರ ಸಮಾಧಾನವನ್ನು ಹೊಂದುವೆವು. ನಮ್ಮನ್ನು ತಿರಸ್ಕರಿಸಿದವರು ಅಥವಾ ಅದಕ್ಕೆ ಸಾಕ್ಷಿಯಾಗಿರುವವರು ಮತ್ತು ಅದಕ್ಕೆ ನಮ್ಮ ಪ್ರತಿಕ್ರಿಯೆ ದೇವರ ಹೋಲಿಸಲಾಗದ ಪ್ರೀತಿಯ ಬಗ್ಗೆ ಕೆಲವು ಸಂಗತಿಗಳನ್ನು ವ್ಯಕ್ತಪಡಿಸುತ್ತವೆ, ಹಾಗೂ ಅವರೂ ಅದನ್ನು ಅಂಗೀಕರಿಸಿಕೊಳ್ಳಲು ತಮ್ಮ ಹೃದಯವನ್ನು ತೆರೆಯುವರು. 1 ಕೊರಿಂಥ 13:4-7, 13:13.

## ಸ್ಮಾರಕ ಚಿನ್ಹೆಗಳು





# ಹೆಚ್ಚುವರಿ ಆಲೋಚನೆಗಳು

ನಿಮ್ಮಚಟುವಟಿಕೆಯುನಡೆಯುವಸ್ಥಳಗಳನ್ನುಅಲಂಕರಿಸಲುನಾವುನಿಮಗೆಕೆಲವುಆಲೋಚನೆಗಳನ್ನುಕೊಡಲುಬಯಸುತ್ತೇವೆ. ಕೆಲವು ಮಾಹಿತಿಗಳು ಕೆಲವೊಮ್ಮೆ ನಮ್ಮ ಗಮನಕ್ಕೆ ಬರುವದಿಲ್ಲ ಎಂಬದು ನಮಗೆ ಗೊತ್ತಿದೆ, ಆದ್ದರಿಂದ ಕೆಲವು ಹೆಚ್ಚುವರಿ ಆಲೋಚನೆಗಳನ್ನು ಹೊಂದಿರುವದು ಉತ್ತಮವಾಗಿರುತ್ತದೆ.

ನೀವು ಮತ್ತು ಇತರರು ಮಾಡುತ್ತಿರುವ ಚಟುವಟಿಕೆಗಳ ಬಗ್ಗೆ ಕೇಳಿಸಿಕೊಳ್ಳಲು ಮತ್ತು ಅವುಗಳನ್ನು ಫೋಟೋಗಳಲ್ಲಿ ಅಥವಾ ವೀಡಿಯೋಗಳಲ್ಲಿ ನೋಡಲು ನಮಗೆ ಬಹಳ ಖುಷಿಯಾಗುತ್ತದೆ. ಒಂದುವೇಳೆ ನೀವು "ಮಕ್ಕಳೇ ಪ್ರಮುಖರು" ಫೇಸ್ ಬುಕ್ ನಲ್ಲಿ  ಹಂಚಿಕೊಳ್ಳುವದಾದರೆ, ಅದು ನಮಗೆ ಆಶೀರ್ವಾದವಾಗಿರುತ್ತದೆ.

## ದೈತ್ಯನಾದ ಹಾಸ್ಯಗಾರನು

ನಿಸ್ಸಂದೇಹವಾಗಿ, ಹುಡುಗರು ಮತ್ತು ಹುಡುಗಿಯರು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದಾಗ, ಆ ಸಂದರ್ಭಕ್ಕೆ ಅನುಸಾರವಾಗಿ ಮಾಡಲಾಗಿರುವ ಅಲಂಕಾರವು ಆಕರ್ಷಣೆಯ ಕೇಂದ್ರಬಿಂದುವಾಗಿರುತ್ತದೆ. ನಿಮ್ಮ ಬಳಿಯಿರುವ ಸಂಪನ್ಮೂಲಗಳನ್ನು ಉಪಯೋಗಿಸಲು ಪ್ರಯತ್ನಿಸಿರಿ ಮತ್ತು ಬೇರೆ ಏನಾದರೂ ಖರೀದಿಸಲು ನಿಮ್ಮಿಂದ ಆಗುವದಾದರೆ ಅದನ್ನು ಮುಂದಿನ ಕಾರ್ಯಕ್ರಮಗಳಿಗೂ ಉಪಯೋಗಿಸಬಹುದು.

ಹಾಸ್ಯಗಾರನು ಬಹಳ ವರ್ಣಮಯವಾಗಿ ಇರುವದರಿಂದ ಮೊದಲನೆಯ ದಿನದಲ್ಲಿಯೇ ಸಂತೋಷದ ವಾತಾವರಣದೊಂದಿಗೆ ಸ್ವಾಗತವನ್ನು ಕೋರಲು ದೈತ್ಯನಾದ ಹಾಸ್ಯಗಾರನನ್ನು ಮಾಡುವದು ಉತ್ತಮವಾದ ಆಯ್ಕೆಯಾಗಿರುತ್ತದೆ.



ಕೃತಕ ಹಾಳೆ ಅಥವಾ ಅದಕ್ಕೆ ಸಮಾನವಾದ ಹಾಳೆಯನ್ನು ಉಪಯೋಗಿಸಿರಿ, ನಂತರ ಅದರ ಮೇಲೆ ಹಲವು ಹಾಳೆಗಳನ್ನು ಪಟ್ಟಿಗಳಾಗಿ ಇಡಿರಿ ಅವು ಹಾಸ್ಯಗಾರನ ಪ್ಯಾಂಟ್ ರೀತಿ ಕಾಣಬೇಕು. ಬಟ್ಟೆಯನ್ನು ಸಹ ಉಪಯೋಗಿಸಬಹುದು.

ಉದ್ದವಾದ ಕೋಲನ್ನು ಕೈಗಳಿಗೆ ಉಪಯೋಗಿಸಿರಿ, ಅದರ ಮಧ್ಯ ಭಾಗದಲ್ಲಿ ತಲೆಯನ್ನು ಕೂರಿಸಿರಿ; ಹಾಸ್ಯಗಾರನ ಶೂ, ಕೈಗಳು ಮತ್ತು ಮುಖವನ್ನು ಬಣ್ಣದ ಕಾರ್ಡ್ ಬೋರ್ಡ್ ನಿಂದ ಕತ್ತರಿಸಿರಿ.

ನಮ್ಮ ಸಲಹೆ ಏನೆಂದರೆ ಅದನ್ನು ನೀವು ಕೋಣೆಯ ಪ್ರವೇಶ ದ್ವಾರದಲ್ಲಿ ಇಡಬೇಕು ಅಥವಾ ವೇದಿಕೆಯ ಗೋಡೆಯ ಮೇಲೆ

ಇಡಬೇಕು, ಹೀಗೆ ಮಾಡುವದರಿಂದ ಹೋಗುವವರಿಗೆ ಬರುವವರಿಗೆ ಯಾವುದೇ ತೊಂದರೆ ಆಗುವದಿಲ್ಲ. ಒಂದುವೇಳೆ ನೀವೇನಾದರೂ ಅದನ್ನು ಕೋಣೆಯ ಮಧ್ಯಭಾಗದಲ್ಲಿ ಇಟ್ಟರೆ ಹೋಗುವವರಿಗೆ ಬರುವವರಿಗೆ ತೊಂದರೆ ಆಗುತ್ತದೆ.

## ಒಳಮಾಳಿಗೆಯಿಂದ ಬಟ್ಟೆಗಳನ್ನು ಕಟ್ಟುವದು

ಈ ಅಲಂಕಾರವು ಬಹಳ ಆಕರ್ಷಕವಾಗಿರುತ್ತದೆ ಮತ್ತು ಕೋಣೆಯ ವಾತಾವರಣವನ್ನೇ ಬದಲಾಯಿಸುತ್ತದೆ. ಒಳಮಾಳಿಗೆಯಿಂದ ವಿವಿಧ ಬಟ್ಟೆಗಳನ್ನು ಕಟ್ಟಿರಿ ಮತ್ತು ಸರ್ಕಸ್ ಟೆಂಟ್ ರೀತಿ ಅದು ಕಾಣಿಸುವಂತೆ ಮಾಡಿರಿ.



## ಬ್ಯಾನರ್ಸ್

ಕಾರ್ಯಕ್ರಮವನ್ನು ಮತ್ತಷ್ಟು ಆಕರ್ಷಕವನ್ನಾಗಿ ಮಾಡಲು ಆಟವಾಡುವ ಸ್ಥಳದಲ್ಲಿ ಬಾವುಟ ರೀತಿ ಹಾಳೆಗಳನ್ನು ಕತ್ತರಿಸಿ ಅಂಟಿಸಿರಿ. ಅವುಗಳನ್ನು ಮಾಡಲು ಬಣ್ಣದ ಹಾಳೆಗಳನ್ನು ತ್ರಿಕೋನ ಆಕಾರದಲ್ಲಿ ಕತ್ತರಿಸಿರಿ, ಅವುಗಳನ್ನು ನೂಲು ಅಥವಾ ದಾರಕ್ಕೆ ಅಂಟಿಸಿರಿ. ಇದರಿಂದ ಅನೇಕ ಬಣ್ಣ ಮತ್ತು ಆಕಾರದಲ್ಲಿ ವಾಯುಪ್ರದೇಶವು ತುಂಬಿಕೊಳ್ಳುತ್ತದೆ. ಬಾವುಟಗಳು ವಿವಿಧ ರೀತಿಗಳಲ್ಲಿ ಅಂದರೆ ತುತ್ತೂರಿ, ಟೋಪಿ, ಟೈ, ಚೆಂಡು ಇತ್ಯಾದಿ ರೂಪಗಳಲ್ಲಿ ಇರಬಹುದು.




## ಫೋಟೋ ಬೂತ್

ಮಕ್ಕಳು ಸೆಲ್ಫಿ ಅಥವಾ ತಮ್ಮ ಸ್ನೇಹಿತರು, ಶಿಕ್ಷಕರು ಮತ್ತು ತಂದೆತಾಯಿಗಳೊಂದಿಗೆ ಫೋಟೋ ತೆಗೆಸಿಕೊಳ್ಳಲು ಫೋಟೋ ಫ್ರೇಮ್ ಮಾಡುವದು ಖಂಡಿತವಾಗಿಯೂ ಸಫಲವಾಗುತ್ತದೆ.

ಒಂದುವೇಳೆ ನೀವು ಎರಡು ಫ್ರೇಮ್ ಮಾಡುವದಾದರೆ ಫೋಟೋ ತೆಗೆದುಕೊಳ್ಳಲು ಉಂಟಾಗುವ ನೂಕಾಟವನ್ನು ತಪ್ಪಿಸಬಹುದು. ಹುಡುಗರಿಗೆ ಒಂದು, ಹುಡುಗಿಯರಿಗೆ ಒಂದು ವಿವಿಧ ರೀತಿಯಲ್ಲಿ ಮಾಡಿದರೆ ಉತ್ತಮವಾಗಿರುತ್ತದೆ ಆಗ ಅವರು ಹೆಚ್ಚಿನ ಜ್ಞಾಪಕಗಳನ್ನು ಸೇರಿಸಿಕೊಳ್ಳಬಹುದು.

ನಿಮ್ಮ ಕಾರ್ಯಕ್ರಮದ ವಿವಿಧ ಅವಶ್ಯಕತೆಗಳಿಗಾಗಿ ನೀವು ಸ್ಟೇಷನ್ ಮಾಡುವದಾದರೆ ಉತ್ತಮವಾಗಿರುತ್ತದೆ, ಅವುಗಳಲ್ಲಿ ಒಂದರಲ್ಲಿ ನೀವು ಫೋಟೋ ಫ್ರೇಮ್ ಇಡಬಹುದು.





## ಟೋಪಿಗಳು ಮತ್ತು ಟೈಗಳು

ವಿವಿಧವಾಗಿರುವ ಮಿಶ್ರ ಬಣ್ಣಗಳಲ್ಲಿ ಟೋಪಿಗಳು ಮತ್ತು ಟೈಗಳು ಮಾಡುವ ಮೂಲಕ ಗೋಡೆಯ ಅಲಂಕಾರವನ್ನು ಸರಳವಾಗಿಡಿರಿ. ಟೋಪಿಗಳನ್ನು ಅರ್ಧಕ್ಕೆ ಕತ್ತರಿಸಬಹುದು ಮತ್ತು ಗೋಡೆಗೆ ಕಟ್ಟಬಹುದು.

ಟೋಪಿಗಳನ್ನು ಕತ್ತರಿಸುವಾಗ 3D ಪ್ರಭಾವ ಕೊಡುವದು ವಿಶೇಷವಾದ ಆಕರ್ಷಣೆಯಾಗಿರುತ್ತದೆ. ಮಕ್ಕಳಿಗೆ ಸಹಜವಾಗಿ ಎಟುಕದ ರೀತಿಯಲ್ಲಿ ಅವುಗಳನ್ನು ಕಟ್ಟಿರಿ.

ಮಕ್ಕಳನ್ನು ಸ್ವಾಗತಿಸುವದು ಒಳ್ಳೇದು, ಆದರೆ ನೀವು ಗೋಡೆಗೆ ಅಲಂಕಾರಗಳನ್ನು ಮಾಡಬೇಕು. ನೀವು ಗೋಡೆಗೆ ನೇತುಹಾಕುವವುಗಳನ್ನು ಅವರು ಇಷ್ಟಪಡುವರು, ಆದ್ದರಿಂದ ಅವರಿಗೆ ಕೊಡುವಂಥವುಗಳನ್ನು ಹೆಚ್ಚಾಗಿ ಮಾಡಿರಿ.

## ನಗು

ಕಾರ್ಯಕ್ರಮದ ಮೊದಲನೆಯ ದಿನ ಮಕ್ಕಳನ್ನು ಮತ್ತು ಅವರ ತಂದೆತಾಯಿಗಳು ಸ್ವಾಗತಿಸಲು ನಗುವಿಗಿಂತ ದೊಡ್ಡ ವಿಷಯ ಇನ್ನೇನಿದೆ . . .

ಕಾರ್ಡ್ ಬೋರ್ಡ್ ಮೇಲೆ, ಹಾಸ್ಯಗಾರನ ನಗುಮುಖದ ತುಟಿಗಳನ್ನು ಬಿಡಿಸಿರಿ, ಬ್ಲಾಕ್ ಮಾರ್ಕರ್ ನಿಂದ ಅಲಂಕರಿಸಿರಿ ಮತ್ತು ಇತರೆ ಬಣ್ಣಗಳಿಂದ ಬೇಕಾದ ಅಲಂಕಾರಗಳನ್ನೂ ಮಾಡಿರಿ.

ಅದನ್ನು ಕೈಯಲ್ಲಿ ಹಿಡಿದುಕೊಳ್ಳುವ ಸಲುವಾಗಿ ಪ್ಲಾಸ್ಟಿಕ್, ಹಲಗೆ ಅಥವಾ ಲೋಹದಿಂದ ಮಾಡಿರಿ, ಈಗಾಗಲೇ ನಾವು ಹೇಳಿರುವಂತೆ, ನಿಮ್ಮ ಬಳಿ ಇರುವ ಸಂಪನ್ಮೂಲಗಳಿಂದ ಮಾಡಿರಿ.

ಸ್ವಾಗತದ ಸಮಯದಲ್ಲಿ “ಎ ಪಾರ್ಟಿ” ಹಾಡು ಹಾಡಿಸುವಾಗ ಇದನ್ನು ಉಪಯೋಗಿಸುವದು ಉತ್ತಮ.


ಸಣ್ಣ ಬಹುಮಾನಗಳಿಗಾಗಿ, ಹುಡುಗರಿಗೆ ಮತ್ತು ಹುಡುಗಿಯರಿಗೆ ಕೊಡಲು ಸಣ್ಣ ನಗುಗಳನ್ನು ಮಾಡಿರಿ.





## ಈಗ ನೀವು ಮಾಡಿರಿ

ಎಲ್ಲಾ ನಾಮಗಳಿಗಿಂತ ಉನ್ನತ ನಾಮ
ಫಿಲಿಪ್ಪಿ 2:9-11




ಸಾಮಗ್ರಿಗಳು
ಕಪ್ಪು ಬ್ಯಾಗ್, ಪೇಪರ್ ಹಾಳೆ, ಟೇಬಲ್ ಮತ್ತು ಮಾರ್ಕರ್.


ಪ್ರದರ್ಶನ
ಈ ಕರಕೌಶಲದೊಂದಿಗೆ, ಪೇಪರ್ ಹಾಳೆ ಮತ್ತು ನಿಮ್ಮ ಸ್ಪರ್ಶದಿಂದ ಎಲ್ಲಾ ನಾಮಗಳಿಗಿಂತ ಉನ್ನತವಾದ ನಾಮವನ್ನು ಪ್ರಕಟಿಸಿರಿ.

ಸಂದೇಶ
ಎಲ್ಲಾ ನಾಮಗಳಿಗಿಂತ ಉನ್ನತವಾದ ನಾಮ ಒಂದಿದೆ: ಅದುವೇ ಯೇಸು ಕ್ರಿಸ್ತನ ನಾಮ, ಆತನು ಇಡೀ ಲೋಕಕ್ಕಾಗಿ ತನ್ನ ಪ್ರಾಣವನ್ನೇ ಕೊಟ್ಟನು.

ಪ್ರಕಟನೆ
ಎಲ್ಲರ ಎದುರಿನಲ್ಲಿ ಖಾಲಿ ಹಾಳೆಯನ್ನು ತೋರಿಸಿರಿ. ಕೈಯಿಂದ ಹಾಳೆಯನ್ನು 9 ಭಾಗಗಳಾಗಿ  ಹರಿಯಿರಿ. ಲೋಕದಲ್ಲಿರುವ ಪ್ರಭಾವಿ ವ್ಯಕ್ತಿಗಳು, ಧಾರ್ಮಿಕ ನಾಯಕರು, ಅವರು ಬದುಕಿರಲಿ ಅಥವಾ ಸತ್ತಿರಲಿ ಅವರ ಹೆಸರುಗಳನ್ನು ಹೇಳುವಂತೆ ಮಕ್ಕಳಿಗೆ ಹೇಳಿರಿ. ಅವರ ಹೆಸರುಗಳನ್ನು ಹಾಳೆಯ ಪ್ರತಿಯೊಂದು ಭಾಗದ ಮೇಲೆ ಬರೆಯಿರಿ. ಯೇಸು ಕ್ರಿಸ್ತನ ಹೆಸರನ್ನೂ ಸೇರಿಸಿ, ಅದನ್ನು ಮಧ್ಯಭಾಗದಲ್ಲಿ ಹಾಕಿರಿ. ಭಾಗಗಳನ್ನು ಮೇಲೆ ಕೆಳಗೆ ಮಾಡಿರಿ ಮತ್ತು ಅವುಗಳನ್ನು ಒಬ್ಬ ಪ್ರತಿನಿಧಿಯಿಂದ ಚೀಲದೊಳಗೆ ಹಾಕಲು ಹೇಳಿರಿ. ನೀವು ಹಿಂದಕ್ಕೆ ತಿರುಗಿರಬೇಕು ಆಗ ಪ್ರತಿನಿಧಿಯು ಮಾಡುವ ಕಾರ್ಯ ನಿಮಗೆ ಕಾಣಿಸುವದಿಲ್ಲ. ಈಗ ನೀವು ಮುಂದಕ್ಕೆ ತಿರುಗಿರಿ ಮತ್ತು ಪ್ರೇಕ್ಷಕರಿಗೆ ಚೀಲದೊಳಗಿನಿಂದ ಎಲ್ಲಾ ನಾಮಗಳಿಗಿಂತ ಉನ್ನತವಾದ ನಾಮ ಸಿಗುವದು ಎಂದು ಹೇಳಿರಿ. ಹುಡುಕುವದು ಬಹಳ ಸುಲಭವಾದ್ದರಿಂದ, ನಾಲ್ಕು ಕಡೆಗಳಲ್ಲಿ ಹರಿದ ಭಾಗವಿರುವ ಚೀಟಿಯನ್ನು ಹುಡುಕಿರಿ. ಅದನ್ನು ನೀವು ತೆಗೆಯುವಾಗ, ಎಲ್ಲರಿಗೂ ಆಶ್ಚರ್ಯವಾಗುತ್ತದೆ.

## ಸಹಾಯ!

ಸಣ್ಣ ಹಾಸ್ಯಗಾರನು ಸಮತೋಲನ ಮಾಡಲು 5 ವಸ್ತುಗಳನ್ನು ಉಪಯೋಗಿಸಬೇಕು.



ಉಪಯೋಗಿಸಬೇಕಾದವುಗಳಿಗೆ ವೃತ್ತವನ್ನು ಹಾಕಿರಿ ನಂತರ ನಿಮ್ಮ ಉತ್ತರವನ್ನು ಬರೆಯಿರಿ.

## ಮಿನಿ ಪ್ರದರ್ಶಕರು


ಅರ್ಥಮಾಡಿಕೊಳ್ಳುವಿಕೆ ಮತ್ತು ಗ್ರಹಿಕೆ ಮಗುವಿನ ಬುದ್ಧಿಯ ಬೆಳವಣಿಗೆಗೆ ಕಾರಣವಾಗಿರುವ ಎರಡು ಪ್ರಮುಖ ವಿಷಯಗಳಾಗಿವೆ. ಮೋಟರ್/ವಸ್ತುಗಳು ಮತ್ತು ಶೀಘ್ರಗ್ರಾಹಿ ಕೌಶಲ್ಯಗಳು ಇದಕ್ಕೆ ಸಹಾಯ ಮಾಡುತ್ತವೆ ಆದ್ದರಿಂದ ಮಕ್ಕಳು ಒಂದೇ ಸಮಯದಲ್ಲಿ ಕಲಿತುಕೊಳ್ಳಲು ಮತ್ತು ಆನಂದಿಸಲು ಸಾಧ್ಯವಾಗುತ್ತದೆ. ಈ ಭಾಗದಲ್ಲಿ ಮಕ್ಕಳು ತಮ್ಮ ಗ್ರಹಣ ಶಕ್ತಿ ಮತ್ತು ಅನುಭವದ ಕೌಶಲ್ಯಗಳ ಆಧಾರದ ಮೇರೆಗೆ ಕಾರ್ಯಗಳನ್ನು ಮಾಡಲು ಶಕ್ತರಾಗುತ್ತಾರೆ. ಇದಲ್ಲದೆ ತಂಡದ ಕಾರ್ಯವನ್ನು ತೋರಿಸಲು ಇದರಿಂದ ಒಳ್ಳೆಯ ಅವಕಾಶವೂ ಸಿಗುತ್ತದೆ. ಇಲ್ಲಿ ಉತ್ತಮವಾದ ಭಾಗವೆಂದರೆ ಹೆಚ್ಚು ಆನಂದ ದೊರೆಯುತ್ತದೆ.

ಈ ಚಟುವಟಿಕೆಯಲ್ಲಿ 5 ಮಕ್ಕಳ ತಂಡಗಳನ್ನು ಮಾಡಬೇಕಾಗುತ್ತದೆ. ಏನು ಮಾಡಬೇಕೆಂಬ ವಿಷಯದಲ್ಲಿ ವಿವಿಧ ಸೂಚನೆಗಳನ್ನು ಕೊಡುವ ಶಿಕ್ಷಕನ ಮಾತುಗಳಿಗೆ ಅವರು ತಮ್ಮ ಗಮನವನ್ನು ಕೊಡಬೇಕು.

ಶಿಕ್ಷಕನು ಅಕ್ಷರ ಅಥವಾ ಸಂಖ್ಯೆಯನ್ನು ಆಯ್ಕೆ ಮಾಡುವನು ಹಾಗೂ ಮಕ್ಕಳು ಅದನ್ನು ತಮ್ಮ ತಂಡದೊಂದಿಗೆ ರೂಪಿಸಬೇಕು. ಉದಾಹರಣೆಗೆ ಒಂದುವೇಳೆ ಶಿಕ್ಷಕನು, “ಯ” ಅಕ್ಷರ ಹೇಳುವದಾದರೆ, ಮಕ್ಕಳು ತಮ್ಮ ತಂಡದೊಂದಿಗೆ ಪದವನ್ನು ರೂಪಿಸಬೇಕು.



ಕೆಲವು ಅಕ್ಷರಗಳನ್ನು ಮಕ್ಕಳು ಸುಲಭವಾಗಿ ಕಲಿತುಕೊಂಡ ನಂತರ, ಮುಂದಿನ ಹಂತಕ್ಕೆ ಹೋಗಬಹುದು ಅಲ್ಲಿ ಮಕ್ಕಳು ತಾವಾಗಿಯೇ ಅಪ್ಪ ಅಥವಾ ಅಮ್ಮ ಎಂಬ ಚಿಕ್ಕ ಪದಗಳನ್ನು ರೂಪಿಸಬಹುದು. ಈ ಕಾರ್ಯವನ್ನು ಮಾಡಲು ತಂಡದಲ್ಲಿ ಹತ್ತಕ್ಕಿಂತ ಹೆಚ್ಚು ಮಕ್ಕಳು ಇರಬೇಕು ಆಗ ಪ್ರತಿಯೊಬ್ಬರು ಭಾಗವಹಿಸಲು ಸಾಧ್ಯವಾಗುತ್ತದೆ. ಸಂಖ್ಯೆಗಳ ವಿಷಯಕ್ಕೆ ಬರುವಾಗ, ಎರಡು ಅಂಕಿಗಳ ಸಂಖ್ಯೆಗಳನ್ನು ಮಾಡಿರಿ, ಉದಾಹರಣೆಗೆ 10. ಇದರಿಂದ ಮಕ್ಕಳಿಗೆ ಖುಷಿಯಾಗುವದು ಮತ್ತು ಅದೇ ಸಮಯದಲ್ಲಿ ಅವರು ಗ್ರಹಣ ಶಕ್ತಿ, ತಿಳುವಳಿಕೆ ಮತ್ತು ತಂಡವಾಗಿ ಕೆಲಸ ಮಾಡುವದರಲ್ಲಿ ಅನುಭವವನ್ನು ಪಡೆಯುವರು.



# ಮನ್ನಣೆಗಳು

ಎಂದಿನಂತೆ, ಪೂರ್ಣವಾಗಿ ಸಿದ್ಧಗೊಂಡಿರುವ ಪ್ರತಿಯೊಂದು ಪುಸ್ತಕದ ಹಿಂದೆಯೂ ಸಂಪಾದಕ, ಕ್ರಿಯಾತ್ಮಕ ಸಿಬ್ಬಂದಿ, ಗೌರವ ಸಾಲಹೆಗಾರ ಪರಿಶ್ರಮ ಮತ್ತು ನಮ್ಮ ಸಂಸ್ಥಾಪಕರ ಷರತ್ತುರಹಿತವಾದ ಬೆಂಬಲಗಳಿವೆ. ಈ ಕಾರ್ಯಕ್ರಮವನ್ನು ನಿರೂಪಿಸಲು ನಮಗೆ ಬೆಂಬಲ ನೀಡಿದ ನಮ್ಮ ಸ್ನೇಹಿತರು ಹಾಗೂ ನಂಬಿಕೆಯಲ್ಲಿರುವ ಸಹೋದರರಿಗೆ ಪೂರ್ಣಹೃದಯದಿಂದ ಕೃತಜ್ಞತೆಯನ್ನು ಸಲ್ಲಿಸಲು ಈ ಪುಟವನ್ನು ಸಮರ್ಪಿಸಲು ನಾವು ಬಯಸುತ್ತೇವೆ. 1 ಪೇತ್ರ 4:10
ಈ ಯೋಜನೆಗಾಗಿ ನೀವು ಕೊಟ್ಟಿರುವ ಸಮಯ, ಹಾಕಿರುವ ಪರಿಶ್ರಮ ಮತ್ತು ಫಂಡ್ ಗಳಿಗಾಗಿ ದೇವರು ನಿಮ್ಮನ್ನು ಬಹಳವಾಗಿ ಸನ್ಮಾನಿಸುವನು.

ನಿಮ್ಮೆಲ್ಲರಿಗೂ ಕೃತಜ್ಞತೆಗಳು
Flor Boldo

Founders, Dwight and Kristina Krauss

Creative Team Lead, Flor Boldo

Creative Team: Jennifer Sánchez, Areli Salinas, Ramón Martínez, Marlon Hernández, Julio Sánchez, Mike and Vickie Kangas

Designs: Marlon José Hernández

Design consultants: Julio Sánchez and Suki Kangas

Fan page Administrators: Ramón Martínez and Verónica Toj

Consultants:

Abner Chávez Molina
Music and lyrics
Song ID from the album I.D.
Instagram: tioabner

Elmer Estrada
elmeres02@gmail.com
Song arrangement: El Circo de la Vida
facebook/ElmerMomentos

Josué y Esther Hernández Hidalgo
- Jozhoo & Tsshe -
Songs "Encuentro con Dios" and "Tienes mi Control"
Instagram: jozhooytsshe

Linda Romero
Illustrations:
Lindy & Friends in collaboration with NosrettepArt
www.lindyandfriends.com

Paris Peña Sáchez
Author of "Una Fiesta"

Susy Danielle
Singer of "El Circo de la Vida"
facebook/Susy Danielle

Vector and image art:
www.freepik.com